ಕರ್ನಾಟಕ ಏಕೀಕರಣದಲ್ಲಿ ಬಳ್ಳಾರಿ ಜಿಲ್ಲೆ

(ಸಬಾಲ್ಟ್ರನ್ ನೆಲೆಯ ಅಧ್ಯಯನ)

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ
ಎಂ.ಫಿಲ್. ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕಿ

ಎನ್. ಸತ್ಯವತಿ

461-470
(466)

ಮಾರ್ಗದರ್ಶಕರು

ಡಾ. ಎನ್. ಚಿನ್ನಸ್ವಾಮಿ ಸೋಸಲೆ
ಪ್ರವಾಚಕರು

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೬-೦೭

470

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

AKSHARA GRANTHALAYA
ACC.NO. 130106

ಕರ್ನಾಟಕ ಏಕೀಕರಣದಲ್ಲಿ ಬಳ್ಳಾರಿ ಜಿಲ್ಲೆ

(ಸಬಾಲ್ಟ್ರನ್ ನೆಲೆಯ ಅಧ್ಯಯನ)

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ
ಎಂ.ಫಿಲ್. ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕಿ

ಎನ್. ಸತ್ಯವತಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾರ್ಗದರ್ಶಕರು

ಡಾ. ಎನ್. ಚಿನ್ನಸ್ವಾಮಿ ಸೋಸಲೆ

ಪ್ರವಾಚಕರು

ಕನ್ನಡ ವಿಶ್ವವಿದ್ಯಾಲಯ, ಹಂಪಿ
ಅಧ್ಯಯನಾಂಗ
ವಿದ್ಯಾರಣ್ಯ

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೬-೦೭

954.87
SAT K
130106

ಮಾರ್ಗದರ್ಶಕರ ಪ್ರಮಾಣಪತ್ರ

ಕರ್ನಾಟಕ ಏಕೀಕರಣದಲ್ಲಿ ಬಳ್ಳಾರಿ ಜಿಲ್ಲೆ (ಸಬಾಲ್ಟ್ರನ್ ನೆಲೆಯ ಅಧ್ಯಯನ)ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಎನ್. ಸತ್ಯವತಿ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 30.07.07.

ಚಿನ್ನಸ್ವಾಮಿ ಸೋಸಲೆ

ಡಾ. ಎನ್. ಚಿನ್ನಸ್ವಾಮಿ ಸೋಸಲೆ
ಪ್ರವಾಚಕರು ಹಾಗೂ ಮಾರ್ಗದರ್ಶಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

ಕರ್ನಾಟಕ ಏಕೀಕರಣದಲ್ಲಿ ಬಳ್ಳಾರಿ ಜಿಲ್ಲೆ (ಸಬಾಲ್ಟ್ರನ್ ನೆಲೆಯ ಅಧ್ಯಯನ) ಎಂಬ ನಿಬಂಧವನ್ನು ಡಾ. ಎನ್. ಚಿನ್ನಸ್ವಾಮಿ ಸೋಸಲೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ


ದಿನಾಂಕ : 30.07.07

ಎನ್. ಸತ್ಯವತಿ
ಸಂಶೋಧಕಿ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

ದತ್ತಮಂಡಲ


(ಸೀಡೆಡ್ ಜಿಲ್ಲೆಗಳು - ೧೮೦೦)




೧೯೫೩ ರ ಬಳ್ಳಾರಿ ನಕ್ಷೆ



೧೯೯೭ರ ವಿಭಜನಾನಂತರದ ಬಳ್ಳಾರಿ ಜಿಲ್ಲೆ




ಬಳ್ಳಾರಿ ಜಿಲ್ಲೆ
ಸ್ಕೇಲ್ 1: 650,000
(1 ಸೆಂ. ಮೀ = 6.5 ಕಿ.ಮೀ)
ಕೊಪ್ಪಳ
ಗದಗ
ಹಾವೇರಿ
ದಾವಣಗೆರೆ
ಚಿತ್ರದುರ್ಗ

೧

ಪ್ರವೇಶ

೧.೧ ಭೌಗೋಳಿಕತೆ

೧.೨ ಬಳ್ಳಾರಿ ಹಾಗೂ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್

೧.೩ ಬಳ್ಳಾರಿ ಜಿಲ್ಲೆಯಲ್ಲಿ ಭಾಷೆಯ ಪ್ರಶ್ನೆ

೧.೧ ಭೌಗೋಳಿಕತೆ

ಕರ್ನಾಟಕ ರಾಜ್ಯದಲ್ಲಿರುವ ಬಳ್ಳಾರಿ ಜಿಲ್ಲೆಗೆ ರಾಷ್ಟ್ರದಲ್ಲೇ ವಿಶೇಷ ಸ್ಥಾನಮಾನ ಹೊಂದಿದೆ. ಬಳ್ಳಾರಿ ಜಿಲ್ಲೆಯೂ ಅನೇಕ ವಿಷಯಗಳಲ್ಲಿ ಪ್ರಥಮ ಎನ್ನಿಸಿಕೊಂಡಿದೆ. ಭೌಗೋಳಿಕವಾಗಿ ಈ ಜಿಲ್ಲೆ ಪುರಾತನ ಕಾಲದಿಂದಲೂ ಗುರುತಿಸಿಕೊಂಡು ಬರುತ್ತಿದೆ. ಈ ಜಿಲ್ಲೆ ಐತಿಹಾಸಿಕ, ಧಾರ್ಮಿಕ, ರಾಜಕೀಯ ಮತ್ತು ಭಾಷಾ ಹೋರಾಟದಲ್ಲಿ ಮಹತ್ವ ಪಡೆದಿದೆ, ೧೯ನೇ ಶತಮಾನದಲ್ಲಿ ಬಳ್ಳಾರಿ ಜಿಲ್ಲೆಯು ಎರಡು ಪ್ರಮುಖ ಘಟನೆಗಳಲ್ಲಿ ಭಾಗಿಯಾಗಿದೆ. ಅವುಗಳೆಂದರೆ ಭಾರತದ ಸ್ವಾತಂತ್ರ್ಯ ಹೋರಾಟ ಮತ್ತು ಅದರ ಜೊತೆಯಲ್ಲಿಯೇ ಕನ್ನಡ ನಾಡನ್ನು ಕಟ್ಟುವ ಏಕೀಕರಣ ಚಳವಳಿ. ಕರ್ನಾಟಕ ಏಕೀಕರಣ ಇತಿಹಾಸದಲ್ಲಿ ಬಳ್ಳಾರಿ ಜಿಲ್ಲೆಯು ಮೊದಲನೆಯ ಹಂತವಾಗಿದೆ.

ಕರ್ನಾಟಕದ ಮಧ್ಯಭಾಗದಲ್ಲಿರುವ ಬಳ್ಳಾರಿ ಜಿಲ್ಲೆಯು ಪ್ರಾಚೀನ, ಶ್ರೀಮಂತ ಐತಿಹಾಸಿಕ ಚರಿತ್ರೆಯ ಜೊತೆಗೆ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ರಾಮಾಯಣ ಮಹಾಕಾವ್ಯದಲ್ಲಿ ಉಲ್ಲೇಖಿತವಾಗಿರುವ ಕಿಷ್ಕಿಂಧೆಯು ಹಂಪಿ – ಆನೆಗುಂದಿ ಪ್ರದೇಶವೆಂದು ಗುರುತಿಸಲಾಗಿದೆ[೧]. ಈ ರೀತಿಯಾಗಿ ಪುರಾಣಗಳಲ್ಲಿ ಭೌಗೋಳಿಕವಾಗಿ ಗುರುತಿಸಿಕೊಂಡು ಬಂದಿದೆ.

ಬಳ್ಳಾರಿ ನಗರಕ್ಕೆ ಬಳ್ಳಾರಿ ಎಂಬ ಹೆಸರು ಬರುವುದಕ್ಕೆ ಅನೇಕ ಐತಿಹಾಸಿಕ ಹಾಗೂ ದಂತಕಥೆಗಳು ಪ್ರಚಲಿತದದಲ್ಲಿವೆ. ಕ್ರಿ.ಶ. ೧೧೩೧ ಬೈರೂರು ಶಾಸನದಲ್ಲಿ ಬಳ್ಳಾರಿ ಎಂಬ ಹೆಸರು ಇರುವುದು ತಿಳಿದುಬಂದಿದೆ. ಇದರಿಂದ ಬಳ್ಳಾರಿ ಎಂಬುವುದು ಆ ಕಾಲದಲ್ಲಿಯೇ ಇದ್ದಿತ್ತು ಎಂದು ತಿಳಿಯಬಹುದು[೨] ಇದು ಅಲ್ಲದೇ ಜೈನ ಸಾಹಿತ್ಯವಾದ 'ಯಶೋಧರ ಚರಿತ್ರೆ' ಯಲ್ಲಿ ಬಳ್ಳಾರಿಯ ಹೆಸರು ಬಂದಿರುವುದಕ್ಕೆ ಕಾರಣ ತಿಳಿಸಿದೆ ಅದು ಆ ಪ್ರದೇಶದ ದೇವಿಯ ಹೆಸರಾದ ಬಳರಿ ಯಿಂದ ಬಂದಿದೆ ಎಂದು ತಿಳಿಸಿದೆ[೩]. ಇನ್ನೊಂದು ದೃಷ್ಟಿಯಿಂದ ಬಳ್ಳಾರಿಯು ಬಳರಿ, ಬಳಾರಿ, ಬವರಿ, ಎಂದಿದೆ. 'ಬವರಿ' ಯೆಂದರೆ ಸಂಸ್ಕೃತದಂತೆ ಬಳರಿ, ಬಳಾರಿ ಎಂಬುವ ದ್ರಾವಿಡ ಭಾಷೆಯಂತೆ ಭಾಸವಾಗುತ್ತದೆ. ಇಲ್ಲಿ ಭವ್ವಾರಿಕಾ>ಬವರಿ>ಬಳರಿ>ಬಳಾರಿ ಎಂದು ರೂಪವ್ಯತ್ಯಾಸ ಸಂಭವಿಸಿರಬಹುದು ಎಂದು ಡಾ॥ ಎಂ.ಎಂ. ಕಲುರ್ಗಿಯವರು ತಮ್ಮ ಮಾರ್ಗ ಸಂಪುಟ ಎರಡರಲ್ಲಿ ತಿಳಿಸಿದ್ದಾರೆ[೪].

ಬಳ್ಳಾರಿ ಜಿಲ್ಲೆಯ ಪ್ರದೇಶವು ಭೌಗೋಳಿಕವಾಗಿ ಕರ್ನಾಟಕ ಪೂರ್ವ ಭಾಗದಲ್ಲಿದೆ. ಇದು ೧೫°–೩೦° ಕರ್ನಾಟಕ ಪೂರ್ವ ಭಾಗದ ಮಧ್ಯದಲ್ಲಿ ದಕ್ಷಿಣೋತ್ತರವಾಗಿ ಹಬ್ಬಿದೆ. ೧೪°–೩೦° ಉತ್ತರ ಅಕ್ಷಾಂಶ ಹಾಗೂ ೭೫°-೪೦° ಪಶ್ಚಿಮ ರೇಖಾಂಶ ಮತ್ತು ೭೭°–೧೧° ಪೂರ್ವ ರೇಖಾಂಶ ಇವುಗಳ ನಡುವೆ ಇದೆ. ಜಿಲ್ಲೆಯ ಉತ್ತರದಲ್ಲಿ ರಾಯಚೂರು, ಪಶ್ಚಿಮದಲ್ಲಿ ಧಾರವಾಡ, ದಕ್ಷಿಣದಲ್ಲಿ ಚಿತ್ರದುರ್ಗ ಜಿಲ್ಲೆಗಳನ್ನು ಹಾಗೂ ಪೂರ್ವದಲ್ಲಿ ಆಂಧ್ರ ಪ್ರದೇಶದ ಕರ್ನೂಲ್, ಅನಂತಪುರ ಜಿಲ್ಲೆಗಳಿಂದ ಸುತ್ತುವರೆದಿದೆ.

ಚಾರಿತ್ರಿಕವಾಗಿ ಸಾಗೂ ರಾಜಕೀಯವಾಗಿ ಬಳ್ಳಾರಿ ಪ್ರದೇಶವು ಮೌರ್ಯನಂದ, ಶಾತವಾಹನ, ಕದಂಬ, ಗಂಗ, ಚಾಲುಕ್ಯ, ಸಿಂಧರೂ, ನೊಳ್ಳಂಬರು, ರಾಷ್ಟ್ರಕೂಟ, ಕುಮ್ಮಟ್ಟದುರ್ಗದ ನಾಯಕ, ಹೊಯ್ಸಳ, ಹೀಗೆ ಅನೇಕ ಅರಸು ಮನೆತನಗಳ ಆಳ್ವಿಕೆಯ ನಾಡಾಗಿದೆ. ಈ ಜಿಲ್ಲೆಗೆ ರಾಜಕೀಯವಾಗಿ ಮಹತ್ವ ದೊರೆತಿದ್ದು, ವಿಜಯನಗರ ಸಾಮ್ರಾಜ್ಯದಿಂದ, ದಕ್ಷಿಣ ಭಾರತವು ಈ ಸಾಮ್ರಾಜ್ಯದ ಅಧೀನದಲ್ಲಿತ್ತು. ವಿಜಯನಗರ ಸಾಮ್ರಾಜ್ಯ ಪತನದಿಂದ ಇಡೀ ದಕ್ಷಿಣ ಭಾರತವು ಛಿದ್ರಗೊಂಡು ಅನೇಕ ಸಾಮಂತ ಪ್ರಾಂತ್ಯಗಳಾಗಿ ಹಂಚಿ ಹೋಯಿತು. ಬಳ್ಳಾರಿ ನಾಯಕರ ಅಥವಾ ಪಾಳೆಗಾರರ ಆಳ್ವಿಕೆಗೆ ಒಳಪಟ್ಟಿತ್ತು. ಅಂತಿಮವಾಗಿ ಟಿಪ್ಪುಸುಲ್ತಾನನ ಅಧೀನವಾಗಿತ್ತು.

ಟಿಪ್ಪುವಿನ ಮರಣದ ನಂತರ ಈ ಜಿಲ್ಲೆಯು ಹೈದರಾಬಾದ್ ನಿಜಾಮನ ಕೈ ಸೇರಿತು. ಹೈದರಾಬಾದ್ ನಿಜಾಮನು ಯುದ್ಧಗಲ್ಲಿ ತನ್ನ ಸಹಾಯಕ್ಕೆ ಬಂದಿದ್ದ ಬ್ರಿಟಿಷರಿಗೆ ಬಹುಮಾನವಾಗಿ ಬಳ್ಳಾರಿ ಜಿಲ್ಲೆ ಮತ್ತು ಅದರ ಸುತ್ತಲಿರುವ ಪ್ರದೇಶಗಳನ್ನು ದತ್ತ ಮಂಡಲವಾಗಿ ಕೊಟ್ಟನು. ಹೀಗಾಗಿ ಬಳ್ಳಾರಿಯು ಬ್ರಿಟೀಷ್ ಆಳ್ವಿಕೆಗೆ ನೇರವಾಗಿ ಸೇರಿತು. ಬ್ರಿಟಿಷರು ಬಳ್ಳಾರಿ ಪ್ರದೇಶವನ್ನು ಮದರಾಸು ಪ್ರೆಸಿಡೆನ್ಸಿಗೆ ಸೇರಿಸಿಕೊಂಡರು.

ಭಾರತದಲ್ಲಿ ದೇಶದಲ್ಲಿ ಸ್ವಾತ್ರಂತ್ಯ ಚಳುವಳಿಯು ಮುಗಿಲು ಮುಟ್ಟಿತು. ಅದರ ಪ್ರಭಾವದಿಂದ ಬಳ್ಳಾರಿ ಜಿಲ್ಲೆಯು ಸ್ವಾತಂತ್ರ್ಯ ಹೋರಾಟದಲ್ಲಿ ಧುಮಿಕಿತ್ತು. ಬ್ರಿಟಿಷರು ಬಳ್ಳಾರಿ ಜಿಲ್ಲೆಯನ್ನು ೧೪೭ ವರ್ಷಗಳ ಕಾಲ ಆಳಿದರು (ಕ್ರಿ.ಶ. ೧೮೦೦ ರಿಂದ ೧೯೪೭ ರವರೆಗೆ). ೧೪೭ ವರ್ಷಗಳ ಆಳ್ವಿಕೆಯ ಕಾಲಾವಧಿಯಲ್ಲಿ ಬಳ್ಳಾರಿ ಜಿಲ್ಲೆಯ ಅನೇಕ ಹೋರಾಟಗಾರು, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದರು. ಬಳ್ಳಾರಿ ಜಿಲ್ಲೆಯು ಒಂದು ದ್ವಿಭಾಷಾ ಗಡಿ ಜಿಲ್ಲೆಯಾಗಿದೆ. ಕನ್ನಡ ಮತ್ತು ತೆಲುಗು ಭಾಷಿಕರು ಅನೇಕ ಶತಮಾನಗಳ ಕಾಲ ಪರಸ್ಪರ ಸಹಕಾರ ಮತ್ತು ಸೌಹಾರ್ದತೆಯಿಂದ ಇಲ್ಲಿ ಜೀವನ ನಡೆಸುತ್ತಿದ್ದಾರೆ.

೧.೨ ಬಳ್ಳಾರಿ ಹಾಗೂ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್

ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರ ಭಾಷಾವಾರು ಪ್ರಾಂತ್ಯ ರಚನೆ ಮಾಡುವುದಾಗಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ತಿಳಿಸಿತು. ದೇಶ ಸ್ವತಂತ್ರಗೊಂಡು, ರಾಷ್ಟ್ರದ ಅಧಿಕಾರ ಚುಕ್ಕಾಣಿ ತನ್ನ ಕೈಗೆ ಬಂದ ಮೇಲೆ ಭಾಷಾವಾರು ಪ್ರಾಂತ್ಯಗಳನ್ನು ರಚಿಸುವ ವಿಚಾರವನ್ನು ಕಾಂಗ್ರೆಸ್ ಮರೆತು ಬಿಟ್ಟಿತು. ಕೊಟ್ಟಮಾತಿನಂತೆ ನಡೆದುಕೊಳ್ಳದ ಕಾಂಗ್ರೆಸ್‌ನ ಧೋರಣೆಯಿಂದಾಗಿ ಅನೇಕ ಹೋರಾಟಗಾರರಿಗೆ, ಮುಖಂಡರುಗಳಿಗೆ ತೀವ್ರ ಅಸಮಾಧಾನವುಂಟಾಯಿತು. ಬಳ್ಳಾರಿ ಜಿಲ್ಲೆಯ ಜನರು ಈ ದಿಸೆಯಲ್ಲಿಯೇ ಯೋಚಿಸತೊಡಗಿದರು. ಕಾಂಗ್ರೆಸ್ಸಿನ ಈ ಧೋರಣೆ ತೆಲುಗರನ್ನು ಕೆಣಕಿತು. ಅವರು ಪ್ರತ್ಯೇಕ ಭಾಷಾವಾರು ಪ್ರಾಂತ್ಯದ ರಚನೆಯ ಬೇಡಿಕೆ ಮುಂದಿಟ್ಟರು. ಪೊಟ್ಟಿ ಶ್ರೀರಾಮುಲು ಎಂಬುವರು ಆಂಧ್ರ ಪ್ರದೇಶವನ್ನು ಭಾಷಾವಾರು ಪ್ರಾಂತ್ಯವಾಗಿ ಮಾಡಲು ಉಪವಾಸ ಸತ್ಯಾಗ್ರಹವನ್ನು ಮಾಡಿದರು. ೫೮ ದಿನಗಳ ಧೀರ್ಘ ಉಪವಾಸದ ನಂತರ ಅವರು ಉಪವಾಸ ಮಾಡುತ್ತಿದ್ದ ಸ್ಥಳದಲ್ಲಿಯೇ ಮರಣಹೊಂದಿದರು. ಆಂಧ್ರದಲ್ಲಿ ಗಲಭೆಗಳು ಉಂಟಾದವು.

ಅನೇಕ ಶತಮಾನಗಳ ಕಾಲ ಬಳ್ಳಾರಿ ಜಿಲ್ಲೆ ಹಾಗೂ ಆಂಧ್ರದ ಕರ್ನೂಲು, ಕಡಪ ಮತ್ತು ಅನಂತಪುರ ಜಿಲ್ಲೆಗಳು ಒಂದೇ ಆಡಳಿತದ ಅಡಿಲ್ಲಿದ್ದವು. ಈ ಪ್ರದೇಶಗಳಲ್ಲಿ ಅನೇಕ ಅರಸು ಮನೆತನಗಳು ಆಳ್ವಿಕೆ ನಡೆಸಿವೆ. ಇದರಿಂದ ಕಾಲ ಕಾಲಕ್ಕೆ ಇದರ ಗಡಿ ರೇಖೆಗಳು ಬದಲಾವಣೆ ಹೊಂದುತ್ತಿದ್ದವು. ಆದರೆ ಈ ಬದಲಾವಣೆಯು ಎರಡು ಭಾಷೆಗಳ ಸ್ಥಿತಿಗೆ ಯಾವುದೇ ಧಕ್ಕೆ ತರದೆ ಸೌಹಾರ್ದತೆಯಿಂದ ಮುಂದುವರೆದುಕೊಂಡು ಹೋಗಲು ಅನುವು ಮಾಡಿಕೊಟ್ಟಿತು.

ಮಧ್ಯಕಾಲೀನ ಕರ್ನಾಟಕದ ರಾಜಕೀಯ ಸಂದರ್ಭದಲ್ಲಿ ಸ್ಥಾಪನೆಯಾದ ವಿಜಯನಗರ ಸಾಮ್ರಾಜ್ಯವು ಗಡಿಗಳನ್ನು ಒಂದುಗೂಡಿಸಿತು. ಇದರಿಂದ ಅನೇಕ ಸಂಸ್ಕೃತಿಗಳು ಇಲ್ಲಿ ಬೆಳೆದವು. ಎರಡನೇ ಪ್ರೌಢದೇವರಾಯನು ಸಾಹಿತ್ಯ ಪ್ರಿಯನಾಗಿದ್ದನು. ಅನೇಕ ಪ್ರದೇಶಗಳಿಂದ ಕವಿಗಳನ್ನು ಬರಮಾಡಿಕೊಂಡು ಸಾಹಿತ್ಯವನ್ನು ಬೆಳೆಸಿದನು. ಈ ರೀತಿಯಾಗಿ ಆ ಕಾಲಕ್ಕೆ ಆಂಧ್ರಪ್ರಾಂತ್ಯದಿಂದ ವಿಜಯನಗರದ ರಾಜಧಾನಿಗೆ ಅನೇಕ ಕವಿಗಳು, ಕಲಾವಿದರು, ಶಿಲ್ಪಿಗಳು, ಪಂಡಿತರು ಅನೇಕ ವರ್ಗಗಳ ಜನರು ಇಲ್ಲಿಗೆ ಬಂದು ನೆಲೆಸಿದರು. ಹೀಗೆ ಅವರ ತೆಲುಗು ಸಂಸ್ಕೃತಿಯು ವಿಜಯನಗರದ ಬಹುಮುಖಿ ಸಂಸ್ಕೃತಿಯೊಂದಿಗೆ ಸೇರಿಕೊಂಡು ಬೆಳೆಯಿತು. ಕೃಷ್ಣದೇವರಾಯನ ಕಾಲದಲ್ಲಿ ಸಾಹಿತ್ಯ ಸಂಸ್ಕೃತಿಗಳು ಮತ್ತಷ್ಟು ಬೆಳೆದವು. ಆಸ್ಥಾನದಲ್ಲಿನ ಆತನ ಅಷ್ಟದಿಗ್ಗಜರು ತೆಲುಗು ಪಂಡಿತರಾಗಿದ್ದರು. ಅನೇಕ ಮಂತ್ರಿಗಳು ತೆಲುಗು ಭಾಷಿಕರಾಗಿದ್ದರು. ಕೃಷ್ಣದೇವರಾಯನ ಆಳ್ವಿಕೆಯ ಭಾಷೆ ಕನ್ನಡವಾಗಿದ್ದರೂ ಆತನ ಮಾತೃಭಾಷೆ ತೆಲುಗಾಗಿತ್ತು.

ಸಾಮ್ರಾಜ್ಯದಲ್ಲಿ ವ್ಯವಹಾರಿಕ ದೃಷ್ಟಿಯಿಂದ ತೆಲುಗು ಮತ್ತು ಕನ್ನಡ ತಿಳಿದಿರಬೇಕಾಗಿತ್ತು. ಇದು ಅಲ್ಲದೆ ಬಹಮನಿ ರಾಜ್ಯದ ಜನರು, ಮತ್ತು ಉತ್ತರದ ಮುಸ್ಲಿಮರು ಇಲ್ಲಿ ವ್ಯಾಪಾರಕ್ಕೆ ಬರುತ್ತಿದ್ದರು. ಅವರು ವ್ಯವಹಾರಕ್ಕಾಗಿ ಇಲ್ಲಿಯ ಕನ್ನಡ ಮತ್ತು ತೆಲುಗು ಎರಡು ಭಾಷೆಯನ್ನು ಬಲ್ಲವರಾಗಿರಬೇಕಾಗಿತ್ತು. ಈ ರೀತಿಯಾಗಿ ಕನ್ನಡ–ತೆಲುಗು ಭಾಷೆಗಳು ಬೆಳೆದುಕೊಂಡು ಬಂದವು.

ಆಧುನಿಕ ಕಾಲಕ್ಕೆ ದ್ವಿಭಾಷಿಕತೆಯು ಬಳ್ಳಾರಿ ಜಿಲ್ಲೆಯಲ್ಲಿ ಗಾಢವಾಗಿ ನೆಲೆನಿಂತಿದೆ. ಶತಮಾನಗಳಿಂದ ಬೆಳೆದು ಬಂದ ಸಂಬಂಧಗಳು ಒಂದೆಡೆಯಾದರೆ, ಎರಡು ಭಾಷೆಗಳ ಸ್ವರೂಪದಲ್ಲಿ, ಲಿಪಿಯಲ್ಲಿ, ಅಲ್ಪಸ್ವಲ್ಪ

ಬದಲಾವಣೆಯನ್ನು ಕಂಡರೂ ಅದರ ಮೂಲ ಒಂದೇ ಆಗಿದೆ. ಅನೇಕ ವರ್ಷಗಳ ಕಾಲ ಎರಡು ಭಾಷೆಗಳ ಜನರು ಒಂದೇ ಪ್ರದೇಶದಲ್ಲಿ ವಾಸವಾಗಿದ್ದು, ಅವರಲ್ಲಿ ಭಾಷೆಯ ಭಿನ್ನತೆಯು ಕಾಣಸಿಗದು, ಇಂದಿಗೂ ಬಳ್ಳಾರಿಯಲ್ಲಿ ಭಾಷೆಗೆ ಸಂಬಂಧಿಸಿದಂತೆ ಅಹಿತಕರ ಘಟನೆಗಳು ಸಂಭವಿಸಿದ ದಾಖಲೆ ಇಲ್ಲ. ಭಾಷೆ ಒಂದು ಮಾಧ್ಯಮ, ಪರಸ್ಪರ ತಿಳಿವಳಿಕೆಗಾಗಿ ವ್ಯವಹಾರಕ್ಕಾಗಿ ಇರುವ ಒಂದು ಸಂವಹನ ಸಾಧನ. ಹೀಗಾಗಿ ಕನ್ನಡಿಗರು ತೆಲುಗರೊಂದಿಗೆ ತೆಲುಗು ಕನ್ನಡಿಗರೊಂದಿಗೆ ಕನ್ನಡ ಭಾಷೆ ಬಳಸಿ ನಿತ್ಯ ಜೀವನ ನಡೆಸುತ್ತಿದ್ದಾರೆ.

೧.೩ ಬಳ್ಳಾರಿ ಜಿಲ್ಲೆಯಲ್ಲಿ ಭಾಷೆಯ ಪ್ರಶ್ನೆ

ಬಳ್ಳಾರಿ ಜಿಲ್ಲೆಯಲ್ಲಿ ಭಾಷೆಯ ಪ್ರಶ್ನೆ ಉದ್ಭವವಾದದ್ದು ಆಂಧ್ರ ರಾಜ್ಯದ ಉದಯದ ಸಂದರ್ಭದಲ್ಲಿ, ಅದಕ್ಕೂ ಮುಂಚೆ ಬಳ್ಳಾರಿ ಜಿಲ್ಲೆಯಲ್ಲಿ ಭಾಷೆಯ ವಿಚಾರದಲ್ಲಿ ಯಾವುದೇ ರೀತಿಯ ಗಲಾಟೆಗಳು ಆಗಿರಲಿಲ್ಲ. ಅಲ್ಲಿಯವರೆಗೂ ಅವರು ಅನ್ಯೋನ್ಯತೆಯಿಂದ ಬಾಳುತ್ತಿದ್ದರು. ಆಂಧ್ರದ ತೆಲುಗರು ಮತ್ತು ಕರ್ನಾಟಕದವರು ಬಳ್ಳಾರಿ ಜಿಲ್ಲೆ ತಮ್ಮ ರಾಜ್ಯಕ್ಕೆ ಸೇರಬೇಕು ಎಂದು ಎರಡು ಕಡೆಯವರು ವಾದವನ್ನು ಪ್ರಾರಂಭಿಸಿದರು. ಕರ್ನಾಟಕದವರು ಬಳ್ಳಾರಿ ಜಿಲ್ಲೆ ಅಚ್ಚ ಕನ್ನಡ ಜಿಲ್ಲೆಯಾಗಿದೆ, ಅದಕ್ಕಾಗಿ ಕರ್ನಾಟಕ್ಕೆ ಸೇರಬೇಕು ಎಂದು ತಮ್ಮ ಬೇಡಿಕೆಯನ್ನು ಮುಂದಿಟ್ಟರು. ಇದಕ್ಕೆ ನಿದರ್ಶನವಾಗಿ ಈ ಕೆಳಕಂಡ ಅಂಶಗಳನ್ನು ಸೂಚಿಸಿದರು.

೧. ಬಳ್ಳಾರಿ ಜಿಲ್ಲೆ ಶತಮಾನಗಳ ಕಾಲ ಕನ್ನಡದ ಪ್ರದೇಶವಾಗಿದೆ[೫].

೨. ಕರ್ನಾಟಕ ರಾಜಮನೆತಗಳು ಈ ಭಾಗವನ್ನು ಆಳಿದ್ದಾರೆ. ಇದಕ್ಕೆ ಅವರ ಕಾಲದಲ್ಲಿ ಹೊರಡಿಸಿದ ಶಾಸನಗಳು ಸಾಕ್ಷಿಯಾಗಿವೆ.

೩. ವಿಜಯನಗರ ಸಾಮ್ರಾಜ್ಯದ ಸ್ಥಾಪಕರು ಕನ್ನಡಿಗರು

೪. ಆ ಕಾಲದ ಶಾಸನ, ಸಾಹಿತ್ಯ ಮತ್ತು ಆಡಳಿತದ ಭಾಷೆಯಾಗಿ ಕನ್ನಡವನ್ನು ಬಳಸಿದ್ದಾರೆ. ವಿಜಯನಗರದಲ್ಲಿನ ಅನ್ಯ ಭಾಷೆಯ ಕವಿಗಳು ಕೂಡ ವಿಜಯನಗರ ಸಮ್ರಾಜ್ಯವನ್ನು "ಕರ್ನಾಟಕ ರಾಜ್ಯ ಲಕ್ಷ್ಮಿ" ಎಂದು ಕರೆದಿದ್ದನ್ನು ಇತಿಹಾಸಕಾರರು ಸ್ಪಷ್ಟಪಡಿಸಿದ್ದಾರೆ.

೫. ಕನ್ನಡ ಪ್ರದೇಶವಾದ ಮೈಸೂರು ಸಂಸ್ಥಾನದ ಜೊತೆಗೆ ಬಳ್ಳಾರಿ ಚಾರಿತ್ರಿಕ, ಆರ್ಥಿಕ, ಸಾಂಸ್ಕೃತಿಕ, ಸಂಬಂಧ ಹೊಂದಿದೆ. ಇದರಿಂದಾಗಿ ಕನ್ನಡಿಗರು ಬಳ್ಳಾರಿ ಜಿಲ್ಲೆಯನ್ನು ಕರ್ನಾಟಕದಲ್ಲಿ ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡಿದರು. ಕನ್ನಡಿಗರ ಈ ರೀತಿಯ ಹಕ್ಕೊತ್ತಾಯಗಳನ್ನು ಗಮನಿಸಿದ ಆಂಧ್ರದವರು ಬಳ್ಳಾರಿಯನ್ನು ತಮ್ಮದೆಂದು ದೃಢೀಕರಿಸಲು ಈ ಕೆಳಗಿನ ರೀತಿಯಲ್ಲಿ ಬೇಡಿಕೆಯನ್ನು ಮುಂದಿಟ್ಟರು.

೧. ಚಾರಿತ್ರಿಕವಾಗಿ ತೆಲುಗು ಮಾತನಾಡುವ ಜನರಿಗೂ ಬಳ್ಳಾರಿಗೂ ಅನ್ಯೋನ್ಯ ಸಂಬಂಧವಿದೆ.

೨. ಬಳ್ಳಾರಿಯನ್ನು ಆಳ್ವಿಕೆ ಮಾಡಿದ ವಿಜಯನಗರದ ಅರಸರು ತೆಲುಗು ಮೂಲದವರು.

೩. ವಿಜಯನಗರದ ಸಾಮ್ರಾಜ್ಯದ ಪ್ರಸಿದ್ಧ ದೊರೆ ಕೃಷ್ಣದೇವರಾಯನು ತೆಲುಗು ಭಾಷಿಕನಾಗಿದ್ದನೆಂದು, ಸ್ವತಃ ಅವನು ರಚಿಸಿರುವ ಕೃತಿಗಳು ತೆಲುಗಿನಲ್ಲಿವೆಯೆಂದು ಹಾಗೂ ಆತನ ಆಸ್ಥಾನದಲ್ಲಿದ್ದ ಅಷ್ಟದಿಗ್ಗಜರೂ ಸಹ ತೆಲುಗಿನವರು. ಈ ಸಾಮ್ರಾಜ್ಯದ ಭಾಗವಾಗಿದ್ದ ಬಳ್ಳಾರಿಯು ತಮ್ಮದು ಎನ್ನುವ ವಾದ.

೪. ಆಂಧ್ರದ ಅನೇಕ ಇತಿಹಾಸಕಾರರು ವಿಜಯನಗರವನ್ನು ಸ್ಥಾಪಿಸಿದವರು ಆಂಧ್ರದವರೆಂದು ಬಳ್ಳಾರಿ ಜಿಲ್ಲೆಯೂ ಆಂಧ್ರಪ್ರದೇಶದ ಭಾಗವೆಂದು ಪ್ರತಿಪಾದಿಸಿದ್ದಾರೆ. ಇದು ತಮ್ಮ ಬೇಡಿಕೆಗೆ ಪೂರಕವಾಗಿದೆ.

ಈ ರೀತಿ ಕನ್ನಡಿಗರು ಮತ್ತು ತೆಲುಗರು ತಮ್ಮ ವಾದಗಳಿಗೆ ಸಮರ್ಥನೆಗಳನ್ನು ಇಟ್ಟುಕೊಂಡು ತಮ್ಮ ಬೇಡಿಕೆಯನ್ನು ಭಾರತ ರಾಷ್ಟ್ರೀಯ ಕಾಂಗೆಸ್‌ನ ಮುಂದೆ ಇಟ್ಟರು. ಕಾಂಗೆಸ್‌ನವರು ಎರಡೂ ಕಡೆಯ ವಾದವನ್ನು ಪರಿಶೀಲಿಸಿ ಅಂತಿಮವಾಗಿ ಕನ್ನಡಿಗರ ವಾದವು ಉಚಿತವಾದುದು ಎಂದು ಪರಿಗಣಿಸಿತು. ಈ ರೀತಿಯಾಗಿ ಬಳ್ಳಾರಿ ಜಿಲ್ಲೆಯು ಕರ್ನಾಟಕ ಪ್ರಾಂತ್ಯಕ್ಕೆ ಸೇರಿತು.

ಈ ಹಂತದಲ್ಲಿ ಬಳ್ಳಾರಿಯು ಕರ್ನಾಟಕಕ್ಕೆ ವಿಲೀನಗೊಳ್ಳಲು ಹಲವಾರು ಮಹನೀಯರು ತಮ್ಮ ತನುಮನಗಳನ್ನು ಪ್ರಾಣವನ್ನು ಸಹ ಅರ್ಪಣೆ ಮಾಡಿದ್ದಾರೆ. ಈ ಕುರಿತು ಇದುವರೆಗೆ ಸಮಗ್ರ ಅಧ್ಯಯನ ನಡೆದಿದ್ದರೂ ಸಹ ಈ ಕಾರ್ಯದಲ್ಲಿ ಜನಸಾಮಾನ್ಯರ ಪಾತ್ರ ಕುರಿತು ನಡೆದಿರುವುದು ಕಂಡುಬರುವುದಿಲ್ಲ. ಇಂತಹ ಐತಿಹಾಸಿಕ ಘಟನೆಯಲ್ಲಿ ಅನೇಕ ಸಾಮಾನ್ಯ ಜನತೆ ತಮ್ಮ ಗ್ರಾಮಗಳಲ್ಲಿ, ತಮ್ಮ ಮನೆಗಳಲ್ಲಿ ಹಾಗೂ ತಾವು ಕೆಲಸ ಮಾಡುತ್ತಿದ್ದ ಜಮೀನ್ದಾರರ ಅಣತಿಯಂತೆ ರಜಾಕಾರರ ವಿರುದ್ಧ, ಬ್ರಿಟಿಷರ ವಿರದ್ಧ ಹಾಗೂ

ತೆಲುಗು ಭಾಷಿಕರ ವಿರುದ್ಧ ಹೋರಾಡಿ ಬಳ್ಳಾರಿಯನ್ನು ಕನ್ನಡ ನಾಡಿನಲ್ಲಿ ಉಳಿಯುವ ಹಾಗೆ ಮಾಡಿದ್ದಾರೆ. ಅಂತಹ ಮಹಾನ್ ವ್ಯಕ್ತಿಗಳ ಸಂದರ್ಶನ ಹಾಗೂ ಮಾಹಿತಿ ನೀಡುವುದು ನನ್ನ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.ಈ ನಿಟ್ಟಿನಲ್ಲಿ ನಾನು ಮಾಡಿರುವ ಕೆಲಸ ಅಲ್ಪ, ಮಾಡಬೇಕಾದುದು ಅಪಾರವಾಗಿದೆ. ಸಬಾಲ್ಟ್ರನ್ ಚರಿತ್ರೆಗೆ ಹೆಚ್ಚು ಒತ್ತು ನೀಡುತ್ತಿರುವ ಇಂದಿನ ಸನ್ನಿವೇಶದಲ್ಲಿ ಈ ಅಧ್ಯಯನದ ಮಹತ್ವ ಪ್ರಸ್ತುತವೆನಿಸುತ್ತದೆ.

ಈ ಸಂಶೋಧನಾತ್ಮಕ ಅಧ್ಯಯನಕ್ಕೆ ಬಹುಮುಖ್ಯವಾಗಿ 'ಕರ್ನಾಟಕದ ಗ್ಯಾಸೆಟಿಯರ್', ಮಹನೀಯರ ಕುರಿತು ಹೊರಬಂದಿರುವ ಸ್ಮರಣೀಯ ಪುಸ್ತಕಗಳು, ವಿವಿಧ ವಿದ್ವತ್‌ಪತ್ರಿಕೆಗಳಲ್ಲಿ ಪ್ರಕಟಗೊಂಡಿರುವ ಲೇಖನಗಳು, ಪತ್ರಿಕೆಗಳು, ನಿಯತಕಾಲಿಕೆಗಳು ಹಾಗೂ ಇಂದಿಗೂ ಕನ್ನಡ ನಾಡು ನುಡಿಗೆ ದುಡಿಯುತ್ತಿರುವ ಸಂಘ, ಸಂಸ್ಥೆಗಳ ಮುಖಂಡರನ್ನು ಭೇಟಿ ಮಾಡಿ ಮಾಹಿತಿಯನ್ನು ಸಂಗ್ರಹಿಸಿ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಅಡಿ ಟಿಪ್ಪಣಿಗಳು

೧. **ಬಳ್ಳಾರಿ ಜಿಲ್ಲಾ ಗೈಜೆಟಿಯರ್,** ಪುಟ - ೪೦

೨. **ಅದೇ,** ಪುಟ - ೧

೩. **ಅದೇ,** ಪುಟ ೧

೪. ಕಲಬುರ್ಗಿ ಎಂ.ಎಂ. **ಮಾರ್ಗ** ಪುಟ ೩೧೭

೫. **ಬಳ್ಳಾರಿ ಜಿಲ್ಲೆ ಸ್ವತಂತ್ರ್ಯ ಹೋರಾಟ** ಪುಟ ೫೭

೨

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ

೨.೧ ಉದ್ದೇಶ

೨.೧ ಮಹತ್ವ

೨.೩. ವ್ಯಾಪ್ತಿ

೨.೧. ಅಧ್ಯಯನದ ಉದ್ದೇಶ

ಕರ್ನಾಟಕ ಏಕೀಕರಣದಲ್ಲಿ ಬಳ್ಳಾರಿ ಜಿಲ್ಲೆ ಎಂಬ ಪ್ರಸ್ತುತ ಅಧ್ಯಯನವು ಕೆಳಕಂಡ ಉದ್ದೇಶಗಳನ್ನು ಹೊಂದಿದೆ.

ಭಾರತ ಸ್ವಾತಂತ್ರ್ಯವಾದ ನಂತರ ದೇಶವನ್ನು ಭಾಷಾವಾರು ಪ್ರಾಂತ್ಯಗಳನ್ನಾಗಿ ವಿಂಗಡಿಸುವ ನಿರ್ಣಯ ಭಾರತ ಸರ್ಕಾರ ತೆಗೆದುಕೊಂಡಿತು. ಕರ್ನಾಟಕವನ್ನು ಭಾಷಾವಾರು ಪ್ರಾಂತ್ಯವಾಗಿ ಮಾಡಲು ಅನೇಕ ತೊಂದರೆಗಳು ಇದ್ದವು. ಈಗಿನ ಕರ್ನಾಟಕ ರಾಜ್ಯವೆಂಬುದು ೧೯೫೬ರಲ್ಲಿ ಇರಲಿಲ್ಲ. ಇದಕ್ಕೆ ಮೊದಲು ಬಹುಕಾಲ ಕನ್ನಡ ಭಾಷಿಕರು ಅಧಿಕವಾಗಿಯೇ ಇದ್ದ ಪ್ರದೇಶಗಳು ಬೇರೆ ಬೇರೆ ಪ್ರಾಂತ್ರ್ಯ ಮತ್ತು ಸರ್ಕಾರಗಳಲ್ಲಿ ಹಂಚಿ ಹೋಗಿದ್ದವು. ಪ್ರಸ್ತುತ ಕರ್ನಾಟಕ ಏಕೀಕರಣದಲ್ಲಿ ಬಳ್ಳಾರಿ ಜಿಲ್ಲೆಯನ್ನು ಮಾತ್ರ ಅನುಲಕ್ಷಿಸಿ ಅಧ್ಯಯನ ಮಾಡುವ ಉದ್ದೇಶವಾಗಿದೆ. ಕರ್ನಾಟಕ ಏಕೀಕರಣ ಚಳವಳಿಯು ಒಂದು ಹೋರಾಟವಾಗಿದ್ದು, ಈ ಪ್ರಯತ್ನದಲ್ಲಿ ಬಳ್ಳಾರಿ ಜಿಲ್ಲೆಯು ತನ್ನ ಉಳಿವಿಗಾಗಿ ನಡೆಸಿದ ಹೋರಾಟ ಚಳವಳಿಗಳನ್ನು ಅಧ್ಯಯನದಲ್ಲಿ ಪ್ರಸ್ತಾಪಿಸಲಾಗಿದೆ.

ಕರ್ನಾಟಕ ಏಕೀಕರಣದ ಪೂರ್ವದಲ್ಲಿ ಭಾಷಾವಾರು ಪ್ರಾಂತ್ಯ ರಚನೆಗೆ ಕಾಂಗ್ರೆಸ್ ಸಮಿತಿಗಳನ್ನು ರಚಿಸಲು ತೀರ್ಮಾನಿಸಿದಾಗ, ಬಳ್ಳಾರಿ ಯಾವ ಪ್ರಾದೇಶಿಕ ಕಾಂಗ್ರೆಸ್ ಕಮಿಟಿಗೆ ಸೇರಬೇಕೆಂಬ ಪ್ರಶ್ನೆ ಉಂಟಾಯಿತು. ಆಂಧ್ರರು ಬಳ್ಳಾರಿ ಜಿಲ್ಲೆ ಆಂಧ್ರ ಪ್ರಾದೇಶಿಕ ಸಮಿತಿಯ ವ್ಯಾಪ್ತಿಯಲ್ಲಿ ಬರಬೇಕೆಂದು ಬೇಡಿಕೆ ಸಲ್ಲಿಸಿದರು. ಕನ್ನಡಿಗರು ಇಡೀ ಜಿಲ್ಲೆ ಕೆ.ಪಿ.ಸಿ.ಸಿ. ವ್ಯಾಪ್ತಿಯಲ್ಲಿ ಬರಬೇಕೆಂದು ಆಧಾರಗಳ ಮೂಲಕ ಬೇಡಿಕೆ ಸಲ್ಲಿಸಿದರು. ಬಳ್ಳಾರಿಯನ್ನು ಕರ್ನಾಟಕಕ್ಕೆ ಸೇರಿಸುವುದಕ್ಕಾಗಿ ನಡೆದ ಪ್ರಯತ್ನಗಳು ಮತ್ತು ಹೋರಾಟವನ್ನು ವಸ್ತುನಿಷ್ಠವಾಗಿ ಅಧ್ಯಯನ ಮಾಡುವುದೆ ಈ ಪ್ರಬಂಧದ ಮುಖ್ಯ ಉದ್ದೇಶವಾಗಿದೆ.

ಬಳ್ಳಾರಿ ಜಿಲ್ಲೆಯನ್ನು ಕರ್ನಾಟಕಕ್ಕೆ ಸೇರಿಸಲು ಜಿಲ್ಲೆಯ ಜನರು ಹಾಗೂ ಅನೇಕ ಮುಖಂಡರು ದುಡಿದಿದ್ದಾರೆ. ಅವರಲ್ಲಿ ಅನೇಕರು ಈ ಜಿಲ್ಲೆಯವರಾಗಿದ್ದು, ಅವರ ಕನ್ನಡಪರ ಹೋರಾಟವನ್ನು ವಿವರಿಸುವ ಮತ್ತು ಎಲೆಮರೆಯ ಕಾಯಿಯಂತೆ ಏಕೀಕರಣದಲ್ಲಿ ದುಡಿದ ವ್ಯಕ್ತಿಗಳನ್ನು ಈ ಅಧ್ಯಯದಲ್ಲಿ ಪ್ರಸ್ತಾಪಿಸುವ ಉದ್ದೇಶವಾಗಿದೆ.

ಬಳ್ಳಾರಿಯನ್ನು ಕರ್ನಾಟಕಕ್ಕೆ ಸೇರಿಸುವ ಹೋರಾಟದಲ್ಲಿ ಭಾಗಿಯಾದ ಜನಸಾಮಾನ್ಯರ ಆಶೋತ್ತರಗಳನ್ನು ಅವರ ನಂಬಿಕೆಗಳನ್ನು ಅಳಿವು ಉಳಿವಿನ ಬಗ್ಗೆ ಅವರಲ್ಲಿ ಇದ್ದಂತಹ ಆತಂಕಗಳನ್ನು ಹಾಗೂ ಏಕೀಕರಣದ ಸಮಯದಲ್ಲಿದ್ದ ಸಂಘ ಸಂಸ್ಥೆಗಳ ಹೋರಾಟವನ್ನು ಈ ಅಧ್ಯಯನದಲ್ಲಿ ಪ್ರಸ್ತಾಪಿಸಲಾಗಿದೆ.

ಏಕೀಕರಣದ ನಂತರ ಬಳ್ಳಾರಿ ಜಿಲ್ಲೆಯಲ್ಲಿನ ಸ್ಥಿತಿ–ಗತಿಗಳನ್ನು, ಆಧುನಿಕ ಬಳ್ಳಾರಿಯಲ್ಲಿ ಉದ್ಭವಿಸಿದ ಸಮಸ್ಯೆಗಳನ್ನು ಎದುರಾಗಿರುವ ಸವಾಲುಗಳನ್ನು ಯಾವ ರೀತಿಯಾಗಿ ಜಿಲ್ಲೆ ಎದುರಿಸುತ್ತಿದೆ ಎಂಬುದರ ಬಗ್ಗೆ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

೨. ಅಧ್ಯಯನದ ಪ್ರಾಮುಖ್ಯತೆ :

ಪ್ರಸ್ತುತ ಅಧ್ಯಯನವು ಅನೇಕ ದೃಷ್ಟಿಯಿಂದ ಮಹತ್ವವಾದುದಾಗಿದೆ. ಏಕೀಕರಣದ ಹೋರಾಟವು ಜಿಲ್ಲೆಯಲ್ಲಿ ಹೇಗೆ ಸಂಘಟಿತವಾಗಿತ್ತು, ಮತ್ತು ಅದರ ಬೆಳವಣಿಗೆಯನ್ನು ಇಲ್ಲಿ ತಿಳಿಸಲಾಗಿದೆ. ಈ ಕಾರಣದಿಂದ ಪ್ರಸ್ತುತ ಅಧ್ಯಯನವು ಪ್ರಮುಖವಾಗಿದೆ. ಎರಡನೆಯದಾಗಿ ಬಳ್ಳಾರಿ ಜಿಲ್ಲೆಯು ಒಂದು ದ್ವಿಭಾಷಿಕ ನೆಲೆಯಾಗಿ ಗುರುತಿಸುವುದರಿಂದ ಭಾಷೆಯು ಈ ಪ್ರದೇಶದಲ್ಲಿ ಯಾವ ರೀತಿಯಾಗಿ ತನ್ನ ಪ್ರಭಾವವನ್ನು ಬೀರಿತು ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ಮಹತ್ವದ ವಿಷಯವಾಗಿದೆ. ಅಧ್ಯಯನದಲ್ಲಿ ಸ್ಥಳೀಯವಾಗಿ ಸ್ಥಾಪಿತವಾದ

ಸಂಘ–ಸಂಸ್ಥೆಗಳನ್ನು ಮತ್ತು ಅದರ ಮೂಲಕ ಏಕೀಕರಣಕ್ಕೆ ಮಾಡಿದ ಕಾರ್ಯಗಳನ್ನು ಹಾಗೂ ನಡೆಸಿದ ಚಳುವಳಿಯನ್ನು ತಿಳಿಸುವುದು ಅಧ್ಯಯನದ ಮಹತ್ವವಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಅನೇಕ ಜನಸಾಮಾನ್ಯರನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ. ಏಕೀಕರಣದ ಸಂದರ್ಭದಲ್ಲಿ ಅವರ ಸ್ಥಿತಿ–ಗತಿಗಳನ್ನು ಸಮಸ್ಯೆಯನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಇದು ಅಲ್ಲದೆ ಸಾಮಾನ್ಯ ಜನರು ಏಕೀಕರಣದಲ್ಲಿ ಯಾವ ರೀತಿಯಾಗಿ ಭಾಗವಹಿಸಿ ತಮ್ಮ ಹೋರಾಟವನ್ನು ಮಾಡಿದರು ಎನ್ನುವುದನ್ನು ಈ ಅಧ್ಯಯನದಲ್ಲಿ ವಿವರಿಸಲಾಗಿದ್ದರಿಂದ ಮಹತ್ವದ್ದಾಗಿದೆ.

ಇಡೀ ಕರ್ನಾಟಕ ರಾಜ್ಯದಲ್ಲಿ ಬಳ್ಳಾರಿ ಜಿಲ್ಲೆಯು ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿದೆ. ಇಲ್ಲಿ ದ್ವಿಭಾಷೆ ಮಾತನಾಡುವ ಜನರು ಇದ್ದಾರೆ. ದ್ವಿಭಾಷೆಯು ಜನರನ್ನು ಪ್ರಾದೇಶಿಕವಾಗಿ ಪ್ರತ್ಯೇಕವಾಗಿರುವಂತೆ ಮಾಡಿದೆ. ಆದರೆ ಈ ಜಿಲ್ಲೆಯಲ್ಲಿ ಯಾವುದೇ ಕಾರಣಕ್ಕೂ ಭಾಷೆ ಸಮಸ್ಯೆಯನ್ನು ಕಾಣುವುದಿಲ್ಲ. ಅದೇ ರೀತಿಯಾಗಿ ಏಕೀಕರಣದ ಸಂದರ್ಭದಲ್ಲಿ ಕೂಡ ಇಲ್ಲಿಯ ಜನರು ತಮ್ಮ ಮತ, ಧರ್ಮ, ಜಾತಿಯನ್ನು ದೂರ ಇಟ್ಟು ಹೋರಾಡಿದ್ದರು. ಆಂಧ್ರಕ್ಕೆ ಸೇರಿದ ಮೇಲೆ ಆದವಾನಿ, ಆಲೂರು, ರಾಯದುರ್ಗಗಳಲ್ಲಿ ಏಕೀಕರಣಕ್ಕೆ ದುಡಿದ ವ್ಯಕ್ತಿಗಳು ಇದ್ದಾರೆ. ತಮ್ಮ ಪ್ರದೇಶಗಳನ್ನು ಕರ್ನಾಟಕಕ್ಕೆ ಸೇರುವಲ್ಲಿ ಮಾಡಿದ ಚಳುವಳಿಗಳು ಇಡೀ ರಾಜ್ಯ ಒಂದುಗೂಡುವುದಕ್ಕೆ ಸ್ಫೂರ್ತಿ ನೀಡಿದವು. ನಾಡಿನ ಚರಿತ್ರೆಯಲ್ಲಿನ ಈ ವಿವಿಧ ಹೋರಾಟಗಳು ಅಧ್ಯಯನಕ್ಕೆ ಬಹಳ ಮುಖ್ಯವಾಗಿವೆ.

ಕರ್ನಾಟಕ ಅಖಂಡವಾಗಿ ಒಂದುಗೂಡುವುದಕ್ಕೆ ಮೊದಲು ನಾಂದಿ ಹಾಡಿದ್ದೇ ಬಳ್ಳಾರಿ ಜಿಲ್ಲೆ. ಬಳ್ಳಾರಿ ಜಿಲ್ಲೆಯನ್ನು ಮೈಸೂರು ರಾಜ್ಯಕ್ಕೆ ಸೇರಿಸಲು ಎಲ್ಲ ಜನಾಂಗದವರು ಯಾವ ಮತ ಬೇಧಗಳಿಲ್ಲದೆ ಒಂದುಗೂಡಿದರು. ಹೋರಾಟದಲ್ಲಿ ಅನ್ಯ ಜನಾಂಗದವರು ನೀಡಿದ ಬೆಂಬಲದಿಂದ, ಸಕ್ರಿಯವಾಗಿ ನಡೆಸಿದ ಹೋರಾಟದಿಂದಾಗಿ ಜಿಲ್ಲೆಯನ್ನು ಮೈಸೂರಿನಲ್ಲಿ ಸೇರುವಂತೆ ಮಾಡಿದ್ದು ಒಂದು ಮಹತ್ವದ ಘಟನೆಯಾಗಿದೆ.

ಈ ಅಧ್ಯಯನಕ್ಕಾಗಿ ಕ್ಷೇತ್ರಕಾರ್ಯದ ಮೂಲಕ ಜಿಲ್ಲೆಯ ಹಲವು ಕಡೆಯಿಂದ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಲಾಗಿದೆ. ಏಕೀಕರಣಕ್ಕಾಗಿ ದುಡಿದ ಅನೇಕ ಹೋರಾಟಗಾರರನ್ನು ಸಂದರ್ಶಿಸಿ, ಅವರ ಅನುಭವಗಳನ್ನು ದಾಖಲಿಸಿಕೊಂಡು ಪ್ರಸ್ತುತ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ. ೧೯೫೩ ರಲ್ಲಿ ನಡೆದ ನೀರಿನ ಸತ್ಯಾಗ್ರಹ ಸಂದರ್ಭದಲ್ಲಿ ಕಾನೂನನ್ನು ಉಲ್ಲಂಘಿಸಿ ಜೈಲು ಸೇರಿದ ಹಲವು ವ್ಯಕ್ತಿಗಳ ಹೆಸರುಗಳನ್ನು ಮೊದಲ ಬಾರಿಗೆ ಬೆಳಕಿಗೆ ಬರುತ್ತಿವೆ. ಕೇಂದ್ರ ಕಾರಾಗೃಹದ ಹಳೆಯ ದಾಖಲೆಗಳಲ್ಲಿ ಮುಳುಗಿ ಹೋಗಿದ್ದ ಅವರ ಸಾಧನೆಯನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಇದು ಅಧ್ಯಯನಕ್ಕೆ ಮಹತ್ವದ ತಿರುವು ನೀಡಿದೆ.

೩. ಅಧ್ಯಯನದ ವ್ಯಾಪ್ತಿ

ಬಳ್ಳಾರಿ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಏಳು ತಾಲ್ಲೂಕುಗಳನ್ನು ಅಧ್ಯಯನದ ವ್ಯಾಪ್ತಿಗೆ ತೆಗೆದುಕೊಳ್ಳಲಾಗಿದೆ. ಹೊಸಪೇಟೆ, ಸಿರುಗುಪ್ಪ, ಕೂಡ್ಲಿಗಿ, ಸಂಡೂರು, ಬಳ್ಳಾರಿ ಹಡಗಲಿ, ಹಗರಿಬೊಮ್ಮನಹಳ್ಳಿ ಇವೇ ಆ ಏಳು ತಾಲ್ಲೂಕುಗಳು. ಇವಲ್ಲದೆ ಆಂಧ್ರರಾಜ್ಯಕ್ಕೆ ಹಂಚಿ ಹೋದ ಅಚ್ಚಗನ್ನಡದ ಪ್ರದೇಶಗಳನ್ನು ಪ್ರಾಸಂಗಿಕವಾಗಿ ಅಧ್ಯಯನದ ವ್ಯಾಪ್ತಿಗೆ ಬಳಸಿಕೊಳ್ಳಲಾಗಿದೆ.

೩

ಬಳ್ಳಾರಿ ಜಿಲ್ಲೆಯಲ್ಲಿ ಏಕೀಕರಣದ ಹಂತಗಳು

ಭಾರತ ದೇಶವು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಸಮಯದಲ್ಲಿ ಕರ್ನಾಟಕದ ಜನರು ಎರಡು ರೀತಿಯ ಹೋರಾಟವನ್ನು ಪ್ರಾರಂಭಿಸಿದರು. ಮೊದಲನೇಯದು ಭಾರತದ ಸ್ವಾತಂತ್ರ್ಯ ಚಳುವಳಿಯಾದರೆ, ಎರಡನೆಯದು ಕರ್ನಾಟಕ ಏಕೀಕರಣ ಚಳುವಳಿ. ಬಳ್ಳಾರಿ ಜಿಲ್ಲೆಯು ಕೂಡ ಈ ಎರಡು ರೀತಿಯ ಹೋರಾಟಕ್ಕೂ ಮುಂದಾಯಿತು. ಈ ವಿಷಯದಲ್ಲಿ ಬಳ್ಳಾರಿಯು ಸ್ವಲ್ಪ ವಿಶೇಷವೆಂದು ಹೇಳಬಹುದು. ಏಕೆಂದರೆ ಈ ಜಿಲ್ಲೆಯು ವಿಜಯನಗದರಸರು ಕಟ್ಟಿ, ಬೆಳೆಸಿದ ಪ್ರದೇಶವಾಗಿದೆ. ವಿಜಯನಗರ ಸಾಮ್ರಾಜ್ಯದ ಪತನದ ನಂತರ ಜಿಲ್ಲೆಯು ಛಿದ್ರಗೊಂಡು, ಮದ್ರಾಸ್ ರಾಜ್ಯದ ಅಧೀನವಾಗಿತ್ತು. ಅಂದಿನ ಮದ್ರಾಸ್ ರಾಜ್ಯದಲ್ಲಿ ಕನ್ನಡಿಗರ ಆಸೆ-ಆಕಾಂಕ್ಷೆಗಳ ಕೂಗು ಮದ್ರಾಸ್ ಪ್ರಾಂತಕ್ಕೆ ಕೇಳುತ್ತಿರಲಿಲ್ಲ[೧]. ಬಳ್ಳಾರಿ ಜಿಲ್ಲೆ ಬ್ರಿಟಿಷ್ ಮದ್ರಾಸ್ ಪ್ರಾಂತಕ್ಕೆ ಸೇರಿತ್ತು. ಆದರೆ ಮದ್ರಾಸಿನಲ್ಲಿ ದಕ್ಷಿಣ ಕನ್ನಡವನ್ನಷ್ಟೆಗೆ ಕನ್ನಡ ಪ್ರದೇಶವೆಂದು, ಬಳ್ಳಾರಿ ತೆಲುಗು ಪ್ರದೇಶವೆಂದೂ ಭಾವಿಸಿದ್ದರು[೨]. ಅನ್ಯರ ಅಧೀನದಲ್ಲಿದ್ದ ಬಳ್ಳಾರಿಯ ಕನ್ನಡಿಗರನ್ನು ಕರ್ನಾಟಕದಲ್ಲಿ ಸೇರಿಸಬೇಕೆಂದು ಅನೇಕ ನಾಯಕರು ಹೋರಾಟವನ್ನು ಪ್ರಾರಂಭಿಸಿದರು. ಬಳ್ಳಾರಿಯಲ್ಲಿ ಇವರ ಹೋರಾಟ ಹಾಗೂ ಸರ್ಕಾರದ ಕಾರ್ಯಕ್ರಮಗಳು ಮತ್ತು ಅದರ ಪರಿಣಾಮಗಳನ್ನು ವಿವಿಧ ಹಂತಗಳಲ್ಲಿ ನಾವು ನೋಡಬಹುದು.

೨.೧ ಪ್ರಥಮ ಹಂತ

ಬಳ್ಳಾರಿ ಜಿಲ್ಲೆಯು ೧೮೦೦ರಲ್ಲಿ ಬ್ರಿಟೀಷರ ವಶವಾದಂದಿನಿಂದ ಈ ಪ್ರದೇಶವೆಲ್ಲ ಮದ್ರಾಸು ಪ್ರಾಂತದಲ್ಲೇ ಸಮನ್ವಯಗೊಂಡಿತ್ತು. ಮಹಾತ್ಮಗಾಂಧಿಯವರ ಮುಖಂಡತ್ವದಲ್ಲಿ ರಾಷ್ಟ್ರೀಯ ಹೋರಾಟದಲ್ಲಿ ತನ್ನನ್ನು ತೋಡಗಿಸಿಕೊಂಡಾಗ ಭಾಷಾವಾರು ಪ್ರಾಂತೀಕರಣ ಕಾರ್ಯಕ್ರಮಕ್ಕೆ ಪ್ರಾಶಸ್ತ್ಯ ನೀಡಲಾಯಿತು. ೧೯೨೦ರಲ್ಲಿ ಕಾಂಗ್ರೇಸ್ ಸಂಸ್ಥೆ ತನ್ನ ಸಂಘಟನಾ ಕಾರ್ಯಕ್ಕೆ ಈ ತಳಹದಿಯನ್ನು ಒಪ್ಪಿಕೊಂಡಿತು. ಆಗ ಬಳ್ಳಾರಿಜಿಲ್ಲೆ ಯಾವ ಪ್ರಾಂತದ ಸಮಿತಿಯ ಕಕ್ಷೆಯಲ್ಲಿರಬೇಕೆಂಬ ವಿಷಯದಲ್ಲಿ ವಿವಾದವೆದ್ದಿತು. ಕಾಂಗ್ರೆಸ್ ಪಕ್ಷದಲ್ಲಿ ಅನೇಕ ಆಂಧ್ರದ ಧುರೀಣರು ಇದ್ದರು. ಇದರಿಂದ ಬಳ್ಳಾರಿಗೆ ಅನ್ಯಾಯವಾಗುವುದೆಂದು ಕರ್ನಾಟಕದ ಅನೇಕ ನಾಯಕರುಗಳು ವಿರೋಧಿಸಿದರು. ಈ ಸಮಸ್ಯೆಯನ್ನು ಬಗೆಹರಿಸಲು ಭಾರತ ರಾಷ್ಟ್ರೀಯ ಕಾಂಗ್ರೆಸ್ಸು ಕಾರ್ಯಕಾರಿಣಿಯಿಂದ ಎಸ್.ಸಿ. ಕೇಳ್ಕರ್ ಅವರು ನೇಮಕವಾದರು. ಅವರು ಇಡೀ ಪ್ರದೇಶವನ್ನು ಪರಿಶೀಲಿಸಿ ತೀರ್ಪನ್ನಿತ್ತರು. ಬಳ್ಳಾರಿ ಜಿಲ್ಲೆಯ ಆಲೂರು, ಆದವಾನಿ, ರಾಯದುರ್ಗವನ್ನು ಆಂಧ್ರ ಸಮಿತಿಯ ಕಕ್ಷೆಗೂ, ಉಳಿದ ಪ್ರದೇಶವನ್ನು ಕರ್ನಾಟಕ ಸಮಿತಿಯ ಕಕ್ಷೆಗೂ ನೀಡಲು ಶಿಫಾರಸ್ಸು ಮಾಡಿದರು. ಈ ತೀರ್ಪನ್ನು ಕಾಂಗ್ರೆಸ್ಸು ಸಂಸ್ಥೆ ಒಪ್ಪಿಕೊಂಡಿತ್ತು. ಅದೇ ರೀತಿಯಾಗಿ ಬಳ್ಳಾರಿ ಜಿಲ್ಲೆಯನ್ನು ಮೈಸೂರು ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ಸು ಸಮಿತಿಗೆ ಸೇರಿಸಲಾಯಿತು[೩]. ಪ್ರಥಮವಾಗಿ ಬಳ್ಳಾರಿಯನ್ನು ಕರ್ನಾಟಕ ಸಮಿತಿಗೆ ಸೇರಿದ ನಂತರ, ಆಂಧ್ರ-ಕರ್ನಾಟಕ ಭಾಷೆಯನ್ವಯ ರಾಜ್ಯಗಳ ಬೇಡಿಕೆಯು ಪ್ರಾರಂಭವಾಗಿತ್ತು. ಅದಕ್ಕಾಗಿ ಎಸ್.ಕೆ.ಧರ್ ಸಮಿತಿಯನ್ನು ನೇಮಕಮಾಡಲಾಯಿತು.

ಎಸ್.ಕೆ.ಧರ್ ಆಯೋಗ

ಭಾರತದ ಘಟನಾ ಸಮಿತಿಯು ಭಾಷಾವಾರು ಪ್ರಾಂತ ರಚನೆಗೆ ಸಂಬಂಧಿಸಿದಂತೆ ವರದಿ ನೀಡಲು ಅಲಹಾಬಾದ್ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶ ಎಸ್.ಕೆ. ಧರ್ ಅವರ ಅಧ್ಯಕ್ಷತೆಯಲ್ಲಿ ೧೭.೦೬.೧೯೪೮ರಂದು ಆಯೋಗವೊಂದನ್ನು ನೇಮಕಮಾಡಿತು. ಆ ಆಯೋಗದಲ್ಲಿ ಕರ್ನಾಟಕದ ಪರವಾಗಿ ಟೇಕೂರು ಸುಬ್ರಮಣ್ಯಂ ಮತ್ತು ಆರ್.ಆರ್. ದಿವಾಕರ್ ಸಹಾಯಕ ಸದಸ್ಯರಾಗಿದ್ದರು. ಆಯೋಗವು ಆಂಧ್ರ-ಕರ್ನಾಟಕ-ಕೇರಳ ಮತ್ತು ಮಹಾರಾಷ್ಟ್ರ ಇವುಗಳಲ್ಲಿ ಯಾವ ಹೊಸ ಪ್ರಾಂತಗಳ ರಚನೆ ಆಗಬೇಕು ಮತ್ತು ಇವುಗಳ ಖಚಿತ ಗಡಿಯ

ನಿರ್ಧಾರ ಆಗುವವರಗೆ ತಾತ್ಕಾಲಿಕ ಗಡಿ ಯಾವುದಿರಬೇಕು ಹಾಗೂ ಈ ಪ್ರಾಂತಗಳ ನಿರ್ಮಾಣದಿಂದ ಅವುಗಳ ಆಡಳಿತ, ಆರ್ಥಿಕ ಮತ್ತು ಇತರ ವಿಷಯಗಳ ಮೇಲೆ ಆಗುವ ಪರಿಣಾಮಗಳೇನು ಎಂಬುದನ್ನು ಆಯೋಗವು ಸಿದ್ಧಪಡಿಸಬೇಕಾಗಿತ್ತು. ೧೯.೦೭.೧೯೪೮ ರಂದು ದೆಹಲಿಯಲ್ಲಿ ಸಭೆ ಸೇರಿದ ಎಸ್.ಕೆ.ಧರ್ ಆಯೋಗವು ಕಾರ್ಯವನ್ನು ಆರಂಭಿಸಿತ್ತು. ಮೊದಲಿಗೆ ಭಾಷಾವಾರು ಪ್ರಾಂತ್ಯ ರಚನೆಯ ಅಗತ್ಯತೆ, ವಿಧಾನ, ಪರಿಣಾಮ ಇತ್ಯಾದಿಗಳ ಬಗ್ಗೆ ತಿಳಿಯಲು ಇಪ್ಪತ್ತು ಪ್ರಶ್ನೆಗಳನ್ನು ಸಿದ್ಧಪಡಿಸಿ, ೧೬.೦೮.೧೯೪೮ರ ಅಂದರೆ ೨೮ ದಿನಗಳ ಒಳಗಾಗಿ ಉತ್ತರವನ್ನು ದೆಹಲಿಗೆ ತಲುಪಿಸುವಂತೆ ಸೂಚಿಸಿ ಪ್ರಶ್ನಾವಳಿಯನ್ನು ಪ್ರಕಟಿಸಿತು. ಆಯೋಗದ ಪ್ರಶ್ನೆಗಳಿಗೆ ಜನರು ಗಂಭೀರವಾಗಿ ಉತ್ತರಿಸಿದ್ದರು. ಆಗಸ್ಟ್ ತಿಂಗಳ ಕೊನೆಯ ವಾರದಲ್ಲಿ ಆಯೋಗವು ದೆಹಲಿಯಲ್ಲೇ ಕೆಲವು ಸಾಕ್ಷಿಗಳನ್ನು ಪರಿಶೀಲಿಸಿತು. ಸೆಪ್ಟೆಂಬರ್, ಅಕ್ಟೋಬರ್ ತಿಂಗಳುಗಳಲ್ಲಿ ವಿಶಾಖಪಟ್ಟಣ, ಮದರಾಸ್, ಮಧುರೈ, ಮಂಗಳೂರು, ಕಲ್ಲಿಕೋಟೆ, ಕೊಯಮತ್ತೂರು, ನಾಗಪುರ, ಹುಬ್ಬಳ್ಳಿ, ಪುಣೆ ಮತ್ತು ಮುಂಬಾಯಿಗಳಲ್ಲಿ ಸಾಕ್ಷಿಗಳನ್ನು ಸಂದರ್ಶಿಸಿ, ಮಾಹಿತಿ ಸಂಗ್ರಹಿಸಿ, ೧೦೦೦ಕ್ಕೂ ಹೆಚ್ಚು ಮನವಿಗಳನ್ನು ಸ್ವೀಕರಿಸಿ, ಸುಮಾರು ೭೦೦ ಸಾಕ್ಷಿಗಳನ್ನು ಪರೀಕ್ಷಿಸಿದ್ದಾಗಿ ಆಯೋಗವು ತಿಳಿಸಿತು. ಧರ್ ಆಯೋಗದ ಪ್ರಶ್ನವಳಿಗೆ ದಕ್ಷಿಣಕನ್ನಡ ಜಿಲ್ಲೆ, ನೀಲಗಿರಿ ಜಿಲ್ಲೆ, ಕೊಯಮತ್ತೂರು, ಪೆನುಗೊಂಡ, ಬಳ್ಳಾರಿ, ಬೆಜವಾಡ, ಮದ್ರಾಸು, ಕೊಳ್ಳೆಗಾಲ, ಹೊಸೂರು ಮತ್ತು ಕಾಸರಗೋಡಿನ ಹಲವು ನಾಯಕರು ಉತ್ತರ ಸಲ್ಲಿಸಿದರು.

ಬಳ್ಳಾರಿಯಲ್ಲಿ ಕರ್ನಾಟಕ ಏಕೀಕರಣ ಸಮಿತಿ ಕಾರ್ಯದರ್ಶಿಗಳಾದ ಕೋ. ಚನ್ನಬಸಪ್ಪನವರು ಧರ್ ಆಯೋಗದ ಪ್ರಶ್ನಾವಳಿಗೆ ಉತ್ತರಿಸುತ್ತಾ ಬಳ್ಳಾರಿ ಜಿಲ್ಲೆಯು ಇಡಿಯಾಗಿ ಒಂದೇ ಘಟಕವಾಗಿದೆ. ಅಲ್ಲಿಯ ಅಧಿಕ ಸಂಖ್ಯೆಯಲ್ಲಿರುವವರು ಕನ್ನಡಿಗರು ಮತ್ತು ಅವರೆಲ್ಲರೂ ತಾವು ಕರ್ನಾಟಕದಲ್ಲಿ ವಿಲೀನಗೊಳ್ಳುವ ಅಭಿಪ್ರಾಯ ಇದೆ ಎಂದು ಆಯೋಗಕ್ಕೆ ತಿಳಿಸಿದರು[೪]

ಧರ್ ಆಯೋಗವು ತನ್ನ ವರದಿಯನ್ನು ನವೆಂಬರ್ ೨೦ ಮತ್ತು ೨೧ರಂದು ಸಭೆ ಸೇರಿ ವಿಚಾರ ವಿನಿಮಯ ಮಾಡಿ ಡಿಸೆಂಬರ್ ೧೦ರಂದು ತನ್ನ ವರದಿಯನ್ನು ಘಟನಾ ಸಮಿತಿಗೆ ಸಲ್ಲಿಸಿತು. ಆಯೋಗವು ಸಲ್ಲಿಸಿದ ವರದಿಯಲ್ಲಿ ಭಾಷಾವಾರು ಪ್ರಾಂತ ಶಾಖೆಗೆ ವಿಶೇಷವಾಗಿ ಆಂಧ್ರ, ಕರ್ನಾಟಕ ಮತ್ತು ಕೇರಳಗಳಲ್ಲಿರುವ ಭಿನ್ನಾಭಿಪ್ರಾಯಗಳನ್ನು ಪ್ರಸ್ತಾಪಿಸಲಾಗಿತ್ತು. ಈ ಭಿನ್ನಾಭಿಪ್ರಾಯಗಳು ಭಾಷಾವಾರು ಪ್ರಾಂತ ರಚನೆಗೆ ಅಡ್ಡಿಯಾಗಿವೆ ಎಂದು ತಿಳಿಸಿದ ಆಯೋಗವು, ಕರ್ನಾಟಕ ಪ್ರಾಂತ ರಚನೆಯೇ ಹೆಚ್ಚು ತೊಡಕಾಗಿದೆ ಎಂದು ಸೂಚನೆ ನೀಡಿತು. ಆಯೋಗದ ಅಭಿಪ್ರಾಯದಲ್ಲಿ ಸಧ್ಯಕ್ಕೆ ರಾಷ್ಟ್ರವು ಗಂಡಾಂತರ ಪರಿಸ್ಥಿತಿಯಲ್ಲಿದೆ. ಈಗಿನ ಕಾಲದಲ್ಲಿ ಹಿಂದೂಸ್ತಾನವನ್ನು ಒಂದು ರಾಷ್ಟ್ರವನ್ನಾಗಿಸುವುದು ಮೊದಲನೇ ಮತ್ತು ಕೊನೆಯ ಅವಶ್ಯಕತೆಯಾಗಿದೆ. ರಾಷ್ಟ್ರೀಯ ಭಾವನೆಗೆ ಪೋಷಕವಿದ್ದುದ್ದೆಲ್ಲವನ್ನು ಕೈಗೊಳ್ಳತಕ್ಕದ್ದು, ಅದರ ಮಾರ್ಗದಲ್ಲಿ ತೊಂದರೆಗಳನ್ನು ನೀಡುವ ಎಲ್ಲಾ ಅಂಶಗಳನ್ನು ನಿರಾಕರಿಸತಕ್ಕದ್ದು ಅಥವಾ ತಡೆಹಿಡಿಯತಕ್ಕದು ಎಂದು ತಿಳಿಸಿ ಸದ್ಯದ ಪರಿಸ್ಥಿತಿಯಲ್ಲಿ ಭಾಷಾವಾರು ಪ್ರಾಂತ ರಚನೆ ಸಮರ್ಥನೀಯವಲ್ಲ ಎಂದು ತಿಳಿಸಿತು.

ಪರಿಣಾಮವಾಗಿ ಆಂಧ್ರ, ಕರ್ನಾಟಕ, ಕೇರಳದ ರಾಜ್ಯಗಳ ರಚನೆಗೆ ಇನ್ನು ಸಮಯ ಇದೇ ಎನ್ನುವಂತೆ ಸಧ್ಯದ ಪರಿಸ್ಥಿತಿ ಅನುಕೂಲವಾಗಿಲ್ಲವೆಂದು ತಿಳಿಸಿದ ಅಯೋಗವು ಅನೇಕ ನಾಯಕರ ಪ್ರಯತ್ನದ ಫಲವು ಕೂಡಿ ಅಲ್ಪ ಜನರು ಜೊತೆಗೆ ಬಳ್ಳಾರಿ ಜನರ ಕರ್ನಾಟಕಕ್ಕೆ ಸೇರುವ ಆಸೆಯು ಇನ್ನು ಆಸೆಯಾಗಿಯೇ ಉಳಿದಿತ್ತು. ಮುಂದಿನ ದಿನಗಳಲ್ಲಿ ಹೋರಾಟವನ್ನು ಇನ್ನೂ ತೀವ್ರಗೊಳಿಸುವ ಯೋಜನೆಗಳನ್ನು ಹಾಕುವುದರಲ್ಲಿ ರಾಷ್ಟ್ರದ ನಾಯಕರು ಕಾರ್ಯಪ್ರವೃತ್ತಿಯಲ್ಲಿ ತೊಡಗಿದ್ದರು.

೨.೨ ದ್ವಿತೀಯ ಹಂತ :-

ಜೆ.ವಿ.ಪಿ. ಆಯೋಗ

ದ್ವಿತೀಯ ಹಂತದಲ್ಲಿ ಧರ್ ಆಯೋಗದ ವರದಿ ಸಲ್ಲಿಕೆಯ ನಂತರ ಆಯೋಗದ ವರದಿಯನ್ನು ಪರಿಶೀಲಿಸಲು ರಾಷ್ಟ್ರೀಯ ಕಾಂಗ್ರೆಸ್ ಮೂವರು ಸದಸ್ಯರ ಸಮಿತಿಯೊಂದನ್ನು ರಚಿಸಿತ್ತು. ಇದನ್ನು ತ್ರಿಮೂರ್ತಿ ಅಥವಾ ಜೆ.ವಿ.ಪಿ. ಸಮಿತಿಯೆಂದು ಕರೆದರು. ಈ ಸಮಿತಿಯಲ್ಲಿ ಸರ್ದಾರ್ ವಲ್ಲಭಾಯಿ ಪಟೇಲ್,

ಪಟ್ಟಾಭಿಸೀತಾರಾಮಯ್ಯ ಮತ್ತು ಜವಾಹರಲಾಲ್ ನೆಹರೂ ಇದ್ದರು. ಈ ಸಮಿತಿಯು ತನ್ನ ವರದಿಯನ್ನು ೦೧.೦೪.೧೯೪೯ರಂದು ಪ್ರಕಟಿಸಿತು. ವರದಿಯಲ್ಲಿ ಧರ್ ಆಯೋಗದ ವರದಿಯನ್ನು ಇದು ಎತ್ತಿ ಹಿಡಿಯಿತು. ಕೇರಳ ಮತ್ತು ಕರ್ನಾಟಕ ಪ್ರಾಂತ ರಚನೆಯು ಸಮಸ್ಯಾತ್ಮಕವಾಗಿದೆ ಎಂಬ ಅಭಿಪ್ರಾಯದಿಂದ ಹೊಸದಾಗಿ ರಾಷ್ಟ್ರ ನಿರ್ಮಾಣವಾಗುತ್ತಿರುವ ಸಂದರ್ಭದಲ್ಲಿ ಭಾಷಾವಾರು ಪ್ರಾಂತ ರಚನೆಯು ರಾಷ್ಟ್ರದ ಐಕ್ಯತೆ ಹಾಗೂ ಆರ್ಥಿಕ ಪ್ರಗತಿಗೆ ಧಕ್ಕೆ ತರಬಹುದು ಎಂಬ ಸಂಶಯವನ್ನು ಜೆ.ವಿ.ಪಿ. ಸಮಿತಿ ವ್ಯಕ್ತಪಡಿಸಿತು.

ತ್ರಿಮೂರ್ತಿ ಸಮಿತಿಯ ವರದಿಯ ಬಗ್ಗೆ ಇಡೀ ಕರ್ನಾಟಕದಲ್ಲಿ ಅತೃಪ್ತಿ ಉಂಟಾಯಿತು. ಕರ್ನಾಟಕದ ಏಕೀಕರಣದ ಮಹಾಸಮಿತಿಯು ಸಭೆ ಸೇರಿ ಕರ್ನಾಟಕ ಪ್ರಾಂತ ನಿರ್ಮಾಣವಾಗದಿದ್ದರೆ ಕನ್ನಡ ನಾಡಿನಲ್ಲೆಲ್ಲಾ ಅತ್ಯಂತ ಅತೃಪ್ತಿ ಮತ್ತು ಅಸಂತೋಷಗಳುಂಟಾಗಿ ಜನತೆಯ ತಾಳ್ಮೆಯು ಕೊನೆಯ ಮಟ್ಟಕ್ಕೆ ಮುಟ್ಟುತ್ತದೆ ಎಂದು ಗೊತ್ತುವಳಿಯನ್ನು ಸ್ವೀಕರಿಸಿತು. ಈ ಮಧ್ಯೆ ಕಾಂಗ್ರೆಸ್ಸು ಸಮಿತಿಯು ೧೬.೧೧.೧೯೪೯ರಂದು ಕೇವಲ ಆಂಧ್ರಪ್ರದೇಶ ರಚನೆಗೆ ಗೊತ್ತುವಳಿ ಸ್ವೀಕರಿಸಿತು. ಇದನ್ನು ಪ್ರತಿಭಟಿಸಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ಕರ್ನಾಟಕ ಪ್ರಾಂತ ರಚನೆ ಅವಶ್ಯಕತೆಯು ನ್ಯಾಯಯುತವಾಗಿದೆ ಎಂದು ಕೇಂದ್ರ ಕಾಂಗ್ರೆಸ್ಸಿಗೆ ಮನವರಿಕೆ ಮಾಡಿತು. ಆದರೆ ಕೇಂದ್ರ ಕಾಂಗ್ರೆಸ್ ಸಮಿತಿಯು ಇದನ್ನು ವಿರೋಧಿಸಿತು. ಇದರಿಂದಾಗಿ ಕೇಂದ್ರ ಹಾಗೂ ಪ್ರಾಂತ ಶಾಸನ ಸಭೆಗಳಲ್ಲಿನ ಕರ್ನಾಟಕದ ಪ್ರತಿನಿಧಿಗಳು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದರು. ಸಮಿತಿಯು ರಾಜೀನಾಮೆಗಳನ್ನು ಸ್ವೀಕರಿಸಲಿಲ್ಲ. ಈ ಮಧ್ಯೆ ಆಂದ್ರಪ್ರದೇಶದ ರಚನೆಯ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಯ ವಿಭಜನೆಗಾಗಿ ನಡೆಯುತ್ತಿದ್ದ ಸನ್ನಾಹವನ್ನು ಆದವಾನಿಯ ಜನರು ವಿರೋಧಿಸಿದರು. ೨೬.೧.೧೯೫೦ ರಂದು ಭಾರತವು ಗಣರಾಜ್ಯವಾಯಿತು, ಆದರೆ ಭಾಷಾವಾರು ಪ್ರಾಂತ ರಚನೆ ಆಗಲಿಲ್ಲ. ಈ ಮಧ್ಯೆ ಆಂಧ್ರ ಪ್ರಾಂತ ರಚನೆಗೆ ಒತ್ತಾಯ ತೀವ್ರವಾಗಿ ಕೇಂದ್ರದ ಮೇಲೆ ಒತ್ತಡ ಹಾಕುತ್ತಿದ್ದರಿಂದ, ಕೇಂದ್ರ ಸರ್ಕಾರವು ಆಂಧ್ರ ಪ್ರಾಂತ ರಚನೆಗೆಯ ಬಗ್ಗೆ ವರದಿ ನೀಡಲು ಕೆ.ಎಸ್. ವಾಂಛೂ ಸಮಿತಿಯನ್ನು ನೇಮಿಸಿತು.

ಕೆ.ಎಸ್. ವಾಂಛೂ ಆಯೋಗ

ಆಂಧ್ರ ಪ್ರಾಂತ ರಚನೆಯ ಬಗ್ಗೆ ಅಧ್ಯಯನ ಮಾಡಿ ವರದಿ ಸಲ್ಲಿಸಲು ಕೇಂದ್ರ ಸರ್ಕಾರವು ರಾಜಸ್ಥಾನದ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ ಕೆ.ಎಸ್. ವಾಂಛೂ ಅವರ ನೇತೃತ್ವದಲ್ಲಿ ೫.೧.೧.೧೯೫೩ ರಂದು ಆಯೋಗ ನೇಮಿಸಿ ೩.೧.೧.೧೯೫೩ ರೊಳಗೆ ಆಯೋಗವು ವರದಿಯನ್ನು ನೀಡಬೇಕೆಂದು ತಿಳಿಸಲಾಯಿತು. ೧೯೪೯ರಲ್ಲಿ ಮದ್ರಾಸ್ ಸರಕಾರವು ನೇಮಿಸಿದ್ದ ಆಂಧ್ರ ವಿಭಜನಾ ಸಮಿತಿಯ ಸದಸ್ಯರಲ್ಲಿ ಕನ್ನಡಿಗರು ಯಾರು ಇರಲಿಲ್ಲ. ಆ ಸಮಿತಿಯು ನೀಡಿದ್ದ ವರದಿಯ ಪ್ರಕಾರ ಕೇಳ್ಕರ್ ವರದಿಯನ್ವಯದಂತೆ ಆಲೂರು, ಆದವಾನಿ ಮತ್ತು ರಾಯದುರ್ಗ ತಾಲೂಕುಗಳು, ಇಡೀ ಚಿತ್ತೂರು ಮತ್ತು ಅನಂತಪುರ ಜಿಲ್ಲೆಗಳನ್ನು ಸೇರಿಸಿ ಆಂಧ್ರ ಪ್ರಾಂತದ ರಚನೆಯಾಗಬೇಕೆಂದು ಶಿಫಾರಸ್ಸು ಮಾಡಿತು. ಬಳ್ಳಾರಿ ತಾಲೂಕು ಆಂಧ್ರ ಪ್ರಾಂತಕ್ಕೆ ಸೇರಬೇಕೆಂದು ಅದು ಪ್ರಸ್ತಾಪಿಸಿರಲಿಲ್ಲ. ವಾಂಛೂ ಅವರನ್ನು ಅನೇಕ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ರಾಜಕೀಯ ಪಕ್ಷದವರು ಭೇಟಿ ಮಾಡಿ ಮನವಿಗಳನ್ನು ಸಲ್ಲಿಸಿದರು. ವಾಂಛೂ ಬಳ್ಳಾರಿ ಜಿಲ್ಲೆಯು ಆಂಧ್ರದೊಡನೆ ಸೇರಲು ಹಲವು ತೊಂದರೆಗಳಿರುವುದನ್ನು ಗಮನಿಸಿದರು. ಆಂಧ್ರಪರ ವಾದಿಸಿದವರು ಬಳ್ಳಾರಿ ಜಿಲ್ಲೆಯು ಇಡಿಯಾಗಿ ಆಂಧ್ರಕ್ಕೆ ಸೇರಬೇಕೆಂದು ಒತ್ತಾಯಿಸಿದರು. ವಿಜಯನಗರ ಅರಸರ ಕಾಲದಿಂದಲೂ ಅದು ತೆಲುಗರಿಗೇ ಸೇರಿದ್ದು ಎಂಬುದು ಅವರ ನಂಬಿಕೆಯಾಗಿತ್ತು. ಆಲೂರು, ಆದವಾನಿ ಮತ್ತು ರಾಯದುರ್ಗಗಳಲ್ಲದೆ ಬಳ್ಳಾರಿ ನಗರ ಸೇರಿದಂತೆ ಬಳ್ಳಾರಿ ತಾಲ್ಲೂಕು ಸಹ ತೆಲುಗು ಭಾಷಿಕರೇ ಅಧಿಕ ಸಂಖ್ಯಾತರಾಗಿರುವ ಪ್ರದೇಶವಾದ್ದರಿಂದ, ಬಳ್ಳಾರಿ ಜಿಲ್ಲೆಯು ಇಡಿಯಾಗಿ ಆಂಧ್ರಕ್ಕೆ ಸೇರಬೇಕೆಂಬ ಅವರ ವಾದವನ್ನು ಕನ್ನಡಿಗರು ಎಂದೂ ಒಪ್ಪಲು ಸಾಧ್ಯವಿರಲಿಲ್ಲ. ಇತಿಹಾಸ ಕಾಲದಿಂದ ಈವರೆಗೆ ನಿರಂತರವಾಗಿ ಬಳ್ಳಾರಿ ಜಿಲ್ಲೆಯು ಕನ್ನಡಿಗರದೇ ಎಂದು ಕನ್ನಡಿಗರು ಸಾಬೀತು ಮಾಡಲು ಪ್ರಯತ್ನಿಸಿದರು.

ವಾಂಛೂ ಅವರ ವರದಿ

ನ್ಯಾಯಮೂರ್ತಿ ವಾಂಛೂ ಅವರು ಅನೇಕರ ವಾದ ಪ್ರತಿವಾದಗಳನ್ನು ಕೇಳಿ, ಮನವಿಗಳನ್ನು ಅಭ್ಯಸಿಸಿ, ಬಳ್ಳಾರಿ ಜಿಲ್ಲೆಯಲ್ಲಿನ ವಾಸ್ತವ ಪರಿಸ್ಥಿತಿಯನ್ನು ಖುದ್ದಾಗಿ ನೋಡಿ ಸಿದ್ಧಪಡಿಸಿದ ವರದಿಯನ್ನು ೭-೨-೧೯೫೩ರಂದು ಸರ್ಕಾರಕ್ಕೆ ಸಲ್ಲಿಸಿದರು. ವಾಂಛೂ ಅವರು ಕರ್ನಾಟಕ ಏಕೀಕರಣ ಸಮಿತಿಯ ಸದಸ್ಯರ ನಿಯೋಗಕ್ಕೆ ಸಂದರ್ಶನದ ಅವಕಾಶ ನಿರಾಕರಿಸಿದರು. ಗದಗಿನಿಂದ ಬಂದ ಅವಕಾಶ ಬೇಡಿಕೆಯ ಪತ್ರವನ್ನು ಗಮನಿಸಿದ ವಾಂಛೂ ಗದಗ ಇರುವುದು ಬೊಂಬಾಯಿ ಪ್ರಾಂತದಲ್ಲಿ, ಅಲ್ಲಿನ ಜನರಿಗೂ ಆಂಧ್ರ ಸಮಸ್ಯೆಗೂ ಸಂಬಂಧವಿಲ್ಲ ಎಂಬ ಕಾರಣ ನೀಡಿದರು. ಆದರೆ ಕೆ.ಪಿ.ಸಿ.ಸಿ. ಅಧ್ಯಕ್ಷ ನಿಜಲಿಂಗಪ್ಪನವರ ನೇತೃತ್ವದ ನಿಯೋಗವನ್ನು ಭೇಟಿ ಮಾಡಿದರೆಂದು ಎಸ್. ನಿಜಲಿಂಗಪ್ಪನವರು ತಮ್ಮ ಆತ್ಮಚರಿತ್ರೆಯಲ್ಲಿ ಉಲ್ಲೇಖಿಸಿದ್ದಾರೆ. ಅವರ ವರದಿಯ ಪ್ರಕಾರ ಹೈದರಬಾದ್ ಮತ್ತು ಮದ್ರಾಸ್ ರಾಜ್ಯಗಳಲ್ಲಿ ಮಾತ್ರ ಸೇರಿರುವ ತೆಲುಗೇ ಅಧಿಕ ಜನರ ಮಾತೃಭಾಷೆಯಾಗಿರುವ ೧೧ ಜಿಲ್ಲೆಗಳನ್ನು ಮಾತ್ರ ಕೂಡಿಸಿ ಆಂಧ್ರ ಪ್ರಾಂತ ರಚನೆ ಮಾಡಬಹುದೆಂದು;ಬಳ್ಳಾರಿ ಜಿಲ್ಲೆಯ ಮೂರು ತಾಲೂಕುಗಳನ್ನು ಆಂಧ್ರಕ್ಕೆ ಸೇರಿಸಬಹುದಾದರು ಅಲ್ಲಿಯೂ ಕನ್ನಡಿಗರ ಸಂಖ್ಯೆ ತೀರ ಗೌಣವಾಗಿಲ್ಲ ಎಂದು ತಿಳಿಸಿದರು. ಹೊಸದಾಗಿ ಕಾಣಿಸಿಕೊಂಡಿದ್ದ ಬಳ್ಳಾರಿ ತಾಲ್ಲೂಕಿನ ಸಮಸ್ಯೆಯ ಬಗೆಗೆ ಅವರು ಯಾವುದೇ ಖಚಿತ ನಿರ್ಧಾರಕ್ಕೆ ಬರಲು ಸಾಧ್ಯವಾಗಲಿಲ್ಲ. ಹೈದರಾಬಾದ್ ಮತ್ತು ಮದ್ರಾಸ್ ಸರ್ಕಾರಗಳು ಸಂಯುಕ್ತವಾಗಿ ಕೈಗೊಂಡಿದ್ದ ತುಂಗಭದ್ರ ಅಣೆಕಟ್ಟಿನ ಮುಗಿಯಬೇಕಾದ ಕೆಲಸ ಅದರ ಬಳಕೆಯ ಪಾಲು ಇತ್ಯಾದಿಗಳ ಬಗೆಗೂ ವಾಂಛೂ ಅವರು ಸ್ಪಷ್ಟವಾದ ತೀರ್ಪು ಕೊಡಲಾಗಲಿಲ್ಲ ಬಳ್ಳಾರಿ ಜಿಲ್ಲೆಯನ್ನು ಇಡಿಯಾಗಿ ಕರ್ನಾಟಕ ಪ್ರಾಂತ ನಿರ್ಮಾಣವಾಗುವವರೆಗೆ ಆಂಧ್ರದೊಡನೆಯೇ ಸೇರಿಸಬಹುದೆಂದು ತೀರ್ಮಾನಿಸಿದರೆ ಕನ್ನಡಿಗರು ಪ್ರಬಲವಾಗಿ ವಿರೋಧಿಸುವವರಿದ್ದರು. ಇನ್ನೂ ಕರ್ನಾಟಕ ಪ್ರಾಂತ ನಿರ್ಮಾಣದ ನಿರ್ಧಾರವೇ ಆಗಿಲ್ಲದಿದ್ದುದರಿಂದ ಬಳ್ಳಾರಿ ಜಿಲ್ಲೆಯನ್ನು ವಿಭಜಿಸಿ, ಮೂರು ತಾಲೂಕುಗಳನ್ನು ಆಂಧ್ರಕ್ಕೆ ನೀಡಿದರೆ ಉಳಿದ ತಾಲೂಕುಗಳ ಭವಿಷ್ಯವು ಅತಂತ್ರವಾಗುತ್ತಿತ್ತು, ಅವುಗಳಲ್ಲಿ ಆರು ತಾಲೂಕುಗಳು ಸ್ಪಷ್ಟವಾಗಿ ಕನ್ನಡದವೇ ಆಗಿದುದರಿಂದ ಮೈಸೂರಿನ ಜೊತೆ ಸೇರಿಸುವುದು ಕಷ್ಟವಾಗಿರಲಿಲ್ಲ. ಆದರೆ ಬಳ್ಳಾರಿ ನಗರ ಮತ್ತು ತಾಲೂಕುಗಳು ಹೊಸ ಸಮಸ್ಯೆಯನ್ನು ಸೃಷ್ಟಿಸಿದ್ದವು. ಹೀಗಾಗಿ ವಾಂಛೂ ಅವರು ಹೊಸ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗಲಿಲ್ಲ.

ಕೇಂದ್ರದ ಕಾರ್ಯ:

೧೯೨೧ ರಲ್ಲಿ ಕೇಳ್ಕರ್ ಅವರ ಶಿಫಾರಸ್ಸಿನ ಮೇಲೆ ಬಳ್ಳಾರಿ ಜಿಲ್ಲೆಯ ಆಲೂರು, ಆದವಾನಿ ಮತ್ತು ರಾಯದುರ್ಗ ತಾಲೂಕುಗಳು ಆಂಧ್ರ ಪ್ರದೇಶ ಕಾಂಗ್ರೆಸ್ ಸಮಿತಿಯ ವ್ಯಾಪ್ತಿಗೆ ಸೇರಬೇಕೆಂದು ಸಭೆಯಲ್ಲಿ ನಿರ್ಧರಿಸಲಾಯಿತು. ಆದ್ದರಿಂದ ಬಳ್ಳಾರಿ ಜಿಲ್ಲೆಯ ಬಗ್ಗೆ ಸ್ಪಷ್ಟ ತೀರ್ಮಾನ ಕೊಡಲು ವಿಫಲವಾದ ವಾಂಛೂ ವರದಿಯನ್ನು ಆಧರಿಸಿ ೨೫-೩-೧೯೫೩ ರಂದು ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಪ್ರಕಟಿಸಿದ ನಿರ್ಧಾರ ಕೆಳಕಂಡಂತಿದೆ.[೫]

೧. ಬಳ್ಳಾರಿ ಜಿಲ್ಲೆಯನ್ನು ಆಂಧ್ರ ಅಥವಾ ಕರ್ನಾಟಕಕ್ಕೆ ಸೇರಿಸುವ ಸಂದರ್ಭದಲ್ಲಿ ಅದನ್ನು ಒಂದೇ ಘಟಕವೆಂದು ಪರಿಗಣಿಸಲು ಸಾಧ್ಯವಿಲ್ಲ.

೨. ಬಳ್ಳಾರಿ ಜಿಲ್ಲೆಯಲ್ಲಿ ತೆಲುಗರು ಅಧಿಕ ಸಂಖ್ಯಾತರಾಗಿರುವ ಆಲೂರು, ಆದವಾನಿ ಮತ್ತು ರಾಯದುರ್ಗ ತಾಲೂಕುಗಳನ್ನು ಆಂಧ್ರ ಪ್ರಾಂತ್ಯದಲ್ಲಿ ಸೇರಿಸಬಹುದು.

೩. ಹರಪನಹಳ್ಳಿ, ಹಡಗಲಿ, ಹೊಸಪೇಟೆ, ಕೂಡ್ಲಿಗಿ, ಸೊಂಡೂರು ಮತ್ತು ಸಿರುಗುಪ್ಪ ಈ ಆರು ತಾಲೂಕುಗಳಲ್ಲಿ ಕನ್ನಡಿಗರು ಅಧಿಕ ಸಂಖ್ಯಾತರಾಗಿರುವುದರಿಂದ ಅವುಗಳನ್ನು ಮೈಸೂರು ರಾಜ್ಯಕ್ಕೆ ಸೇರಿಸಬಹುದು.

ಬಳ್ಳಾರಿ ತಾಲೂಕು ಮಿಶ್ರಭಾಷೆಯ ಪ್ರದೇಶವೆಂದು ವಾದಗ್ರಸ್ಥವಾದ್ದರಿಂದ ಆ ಬಗ್ಗೆ ಯಾವ ತೀರ್ಮಾನವನ್ನು ಮಾಡಲಿಲ್ಲ.[೬] ಇದರಿಂದ ವಾಂಛೂ ವರದಿಯು ಕೂಡ ಬಳ್ಳಾರಿಯ ಸಮಸ್ಯೆಯನ್ನು ತೀರಿಸದೆ, ಅತಂತ್ರ ಸ್ಥಿತಿಯನ್ನುಂಟುಮಾಡಿತ್ತು. ಇದರ ಪರಿಹಾರಕ್ಕಾಗಿ ಕೇಂದ್ರ ಸರ್ಕಾರವು ಮತ್ತೊಂದು ಉನ್ನತವಾದ ಆಯೋಗವನ್ನು ನೇಮಿಸಿತು.

೨.೩. ತೃತೀಯ ಹಂತ : ಮಿಶ್ರಾ ಆಯೋಗ

ಈ ತೃತೀಯ ಹಂತವು ಬಹಳ ಮಹತ್ವದಾಗಿದೆ. ಇದು ಬಳ್ಳಾರಿ ಜಿಲ್ಲೆಯ ಭವಿಷ್ಯತ್ತನ್ನು ನಿರ್ಧರಿಸುವಂತಹ ಹಂತವಾಗಿತ್ತು. ಈ ಹಂತದಲ್ಲಿ ಬಳ್ಳಾರಿಯ ನಾಯಕರು ಸಾಮಾನ್ಯ ಜನರು ಬಹಳ ಎಚ್ಚರಿಕೆಯಿಂದ ತಮ್ಮ ವಾದವನ್ನು ವಿಚಾರಗಳನ್ನು ಆಯೋಗದ ಮುಂದೆ ಮಂಡಿಸುವ ಮೂಲಕ ಬಳ್ಳಾರಿಯ ಸಮಸ್ಯೆಯನ್ನು ಬಗೆಹರಿಸುವಲ್ಲಿ ಭಾಗಿಯಾದರು.

ವಾಂಛೂ ವರದಿಯಲ್ಲಿ ಬಳ್ಳಾರಿ ತಾಲೂಕಿನ ಮಿಶ್ರ ಭಾಷೆಯ ಸಮಸ್ಯೆಯೊಂದೇ ಅಲ್ಲದೆ, ಮತ್ತೆ ಕೆಲವು ವಿಷಯಗಳನ್ನು ಪರಿಶೀಲಿಸದೆ, ಅಂತಿಮ ನಿರ್ಧಾರಕ್ಕೆ ಬರುವುದು ಸಾಧ್ಯವಿಲ್ಲವೆಂದು ತಿಳಿದು ಕೇಂದ್ರ ಸರ್ಕಾರ ಈ ವಿಷಯವನ್ನು ಮುಂದೆ ತಳ್ಳಿತು. ೨೧-೪-೧೯೫೩ರಂದು ಭಾರತದ ಅಧ್ಯಕ್ಷರು, ಹೈದರಾಬಾದ್ ಮುಖ್ಯ ನ್ಯಾಯಾಧೀಶರ ಅಧಿಕಾರದ ಜೊತೆಗೆ, ೨೩-೪-೧೯೫೩ರಿಂದ ಬಳ್ಳಾರಿ ತಾಲೂಕಿನ ಭವಿಷ್ಯವನ್ನು ನಿರ್ಧರಿಸಲು, ವಿವಿಧ ಸಮಸ್ಯೆಗಳನ್ನು ಕುರಿತು ವಿಚಾರಣೆ ನಡೆಯಿಸಿ ಒಂದು ವರದಿಯನ್ನೊಪ್ಪಿಸಲು ಎಲ್.ಎಸ್. ಮಿಶ್ರಾ ಅವರನ್ನು ನೇಮಿಸಿದರು. ೨೮-೬-೧೯೫೩ರಂದು ಭಾರತದ ಸರಕಾರದ ಒಳಾಡಳಿತ ಮಂತ್ರಿಗಳು ಹೊರಡಿಸಿದ ಹೇಳಿಕೆ ಇಂತಿದೆ:-

ಬಳ್ಳಾರಿ ತಾಲೂಕಿನ ಭವಿಷ್ಯವನ್ನು ನಿರ್ಧರಿಸುವ ಮೊದಲು ಅವಶ್ಯಕವಾದ ಎಲ್ಲಾ ವಿಷಯಗಳ ಪೂರ್ಣ ಮಾಹಿತಿ ಪಡೆಯಲು ನ್ಯಾಯಾಧೀಶರೊಬ್ಬರನ್ನು ನೇಮಿಸಬೇಕು. ಅವರು ಪರಿಶೀಲಿಸುವ ವಿಷಯಗಳಲ್ಲಿ, ವಿವಿಧ ಭಾಷೆಗಳ ಜನಸಂಖ್ಯೆ, ಸಾಂಸ್ಕೃತಿಕ ಸಂಬಂಧ, ಆಡಳಿತ ಸೌಕರ್ಯ ಹಾಗೂ ಆರ್ಥಿಕ ಭದ್ರತೆ - ಇವು ಮುಖ್ಯ. ಈ ಪರಿಶೀಲನೆಗೆ ಹೈದರಾಬಾದ್ ಮುಖ್ಯ ನ್ಯಾಯಾಧೀಶರಾದ ಮಾನ್ಯ ಲಕ್ಷ್ಮೀಶಂಕರ ಮಿಶ್ರಾ ಅವರನ್ನು ನೇಮಿಸಿ ಮುಖ್ಯ ವಿಷಯಗಳನ್ನು ಸಾಧ್ಯವಾದಷ್ಟು ಶೀಘ್ರವಾಗಿ ಪರಿಶೀಲಿಸಿ, ವರದಿಯನ್ನೊಪ್ಪಿಸಬೇಕೆಂದು ಕೇಳಿಕೊಳ್ಳಲಾಗಿತ್ತು, ಅವರು ಯಾವುದಾದರೂ ಸಣ್ಣ ಪುನರ್ವಿಂಗಡನೆಯನ್ನು ಸೂಚಿಸಬಹುದು. ಮುಖ್ಯವಾಗಿ ಅಂಥ ವಿಂಗಡಣೆಯನ್ನು ಗಡಿ ನಿರ್ಣಯ ಸಮಿತಿ ಕೈಕೊಳ್ಳುವುದು. ಅಂಥ ಸಮಿತಿಯನ್ನು ಆಂಧ್ರ ಪ್ರಾಂತ್ಯ ನಿರ್ಮಾಣದ ನಂತರ ನೇಮಿಸಲಾಗುವುದು. ೧೫-೫-೧೯೫೩ ರೊಳಗಾಗಿ ವಿಚಾರಣೆಯನ್ನು ನ್ಯಾಯಮೂರ್ತಿ ಎಲ್.ಎಸ್. ಮಿಶ್ರಾರು ಮುಗಿಸಬೇಕೆಂದು ಬಯಸುತ್ತದೆ. ಸರ್ಕಾರದ ಈ ಬಗ್ಗೆ ತನ್ನ ವಿಚಾರವನ್ನು ಬಹಿರಂಗವಾಗಿ ತಿಳಿಸಿ ಇದರ ಪರಿಹಾರವನ್ನು ಎಲ್ಲಾ ಮಂತ್ರಿಗಳು ಬಯಸುತ್ತಿರುವುದಾಗಿ ತಿಳಿಸಿದೆ.

ಎಲ್.ಎಸ್. ಮಿಶ್ರರವರು ತಮಗೆ ದೊರೆತ ಮಾಹಿತಿ ಸಾಮಾಗ್ರಿಯಿಂದ ಅವರು ೨೩-೪-೧೯೫೩ ರಂದೇ ದೆಹಲಿಯಲ್ಲಿ ಕೆಲಸವನ್ನು ಪ್ರಾರಂಭಿಸಿದರು. ಮಿಶ್ರಾ ಆಯೋಗವು ಬಳ್ಳಾರಿ ಪಟ್ಟಣದಲ್ಲಿ ೨೭-೪-೧೯೫೩ರಂದು ಕಛೇರಿಯನ್ನು ತೆರೆದು ಬಳ್ಳಾರಿ ತಾಲೂಕಿನ ಭವಿಷ್ಯದ ಬಗ್ಗೆ ಆಸಕ್ತಿಯಿದ್ದವರೆಲ್ಲರ ಮನವಿಗಳನ್ನು ಸ್ವಿಕರಿಸಿತ್ತು. ವಿಚಾರಣೆಗೆ ಸಹಾಯಕರವಾಗಬಹುದಾದ ಕೆಲವು ಅಂಕಿ ಅಂಶಗಳನ್ನು ಮಿಶ್ರಾರವರು ಐ.ಎ.ಎಸ್ ಅಧಿಕಾರಿಗಳಿಂದ ಸಂಗ್ರಹಿಸಿಕೊಂಡರು. ಅವರು ೧-೫-೧೯೫೩ ರಿಂದ ೮-೫-೧೯೫೩ರ ವರೆಗೆ ಎರಡೂ ದಿನ ಬಳ್ಳಾರಿಯಲ್ಲಿ ವಿಚಾರಣೆಯನ್ನು ನಡೆಸಿದರು. ಮಿಶ್ರಾರವರು ಮೈಸೂರು ಸರಕಾರದ ಮನವಿಗೆ ಸಂಬಂಧಿಸಿದ ವಿಚಾರಗಳನ್ನು ಮೈಸೂರಿನಮುಖ್ಯ ಮಂತ್ರಿ ಮತ್ತು ಇತರ ಅಧಿಕಾರಿಗಳೊಡನೆ ಚರ್ಚಿಸಿದರು. ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದ ಪ್ರಾಚೀನ ಸಾಮಾಗ್ರಿಯನ್ನು ಹೈದರಾಬಾದಿನ ಸೆಕ್ರೆಟರಿಯವರಲ್ಲಿ ಇದ್ದ ಕಾಗದ ಪತ್ರಗಳನ್ನು ತರಿಸಿಕೊಂಡರು.

ಮಿಶ್ರಾರವರ ವಿಚಾರಣೆಯ ಸಮಯದಲ್ಲಿ ಬಂದ ೩೫೪ ಮನವಿಗಳಲ್ಲಿ, ಹುಟ್ಟಿನಿಂದ ಆಂಧ್ರರಾದ ಹಾಗೂ ಆಂಧ್ರ ಪಕ್ಷಪಾತಿಗಳು ಕೊಟ್ಟ ಮನವಿಗಳು ೧೩೨, ಹಾಗೆಯೇ ಕನ್ನಡಿಗರು ಮತ್ತು ಕನ್ನಡಿಗರ ನಿಲುವುಗಳನ್ನು ಸಮರ್ಥಿಸಿದವರಿಂದ ಬಂದ ಮನವಿಗಳು ೨೨೨, ಇವುಗಳಲ್ಲಿ ಹೆಚ್ಚಾಗಿ ಆಗತಾನೇ ಹುಟ್ಟಿ ಬಂದ ಸಂಘ ಸಂಸ್ಥೆಗಳು ಒಪ್ಪಿಸಿದ ಮನವಿಗಳೆಂದೂ, ಅವುಗಳು ಆಯಾ ಪಕ್ಷಗಳ ಪ್ರಾಬಲ್ಯವನ್ನು ಆಯೋಗದ ಮುಂದೆ ತೋರಿಸಲು ಸೃಷ್ಟಿಸಿದವು. ಈ ವಿಚಾರದಲ್ಲಿ ಆಯೋಗಕ್ಕೆ ಮೈಸೂರು ಸರ್ಕಾರ, ಸ್ಪೆಷಲ್ ಆಫೀಸರ್ ಆಗಿದ್ದ ಶ್ರೀಯುತ ಶೇಷಗಿರಿರಾವ್, ಐ.ಎ.ಎಸ್. ಅವರ ಮುಖಾಂತರ ಮನವಿಯನ್ನು ಒಪ್ಪಿಸಿತು. ಮದ್ರಾಸ್ ಸರಕಾರವು ಇಬ್ಬರು ಮಂತ್ರಿಗಳನ್ನು ಆಯೋಗಕ್ಕೆ ಕಳುಹಿಸಿತು. ಅವರುಗಳಲ್ಲಿ ಶ್ರೀ ಶಂಕರರೆಡ್ಡಿ ಆಂಧ್ರ ವಾದವನ್ನು ವಿಶದಪಡಿಸಿದರು. ಡಾ॥ ನಾಗನಗೌಡರು ಕನ್ನಡಿಗರ ವಾದವನ್ನು ವಿವರಿಸಿದರು. ಇದು ಅಲ್ಲದೆ, ವೈಯಕ್ತಿವಾಗಿ

ಅಥವಾ ಸಂಘ ಸಂಸ್ಥೆಗಳ ಪ್ರತಿನಿಧಿಗಳಾಗಿ ಬಂದ ಒಟ್ಟು ಸಾವಿರ ಜನರನ್ನು ಆಯೋಗವು ಸಂದರ್ಶಿಸಿತ್ತು. ಅಲ್ಲದೆ ಬಳ್ಳಾರಿ ನಗರ ಹಾಗೂ ಸಮೀಪ ಸರಹದ್ದಿನ ಹಳ್ಳಿಗಳ ಸರಕಾರಿ ಕಟ್ಟಡಗಳನ್ನು ಪರಿಶೀಲಿಸಿತ್ತು. ಆಯೋಗವು ಸುತ್ತಮುತ್ತಲಿರುವ ಹೊಸಪೇಟೆ ಮತ್ತು ಇತರ ಮುಖ್ಯ ಹಳ್ಳಿಗಳಿಗೂ ಭೇಟಿಕೊಡಬೇಕೆಂದುಕೊಂಡಿತ್ತು. ಆದರೆ ಇದರಿಂದ ಕೆಲವು ಹಿಂಸಾಕೃತ್ಯಗಳೂ ನಡೆದದ್ದರಿಂದ ಆಯೋಗ ತನ್ನ ನಿರ್ಧಾರವನ್ನು ಬದಲಿಸಿಕೊಂಡು ತನ್ನ ಕಾರ್ಯವನ್ನು ಮುಂದುವರೆಸಿಕೊಂಡು ಹೋಯಿತು. ಮಿಶ್ರಾ ಆಯೋಗದ ಮುಂದೆ ಆಂಧ್ರ -ಕನ್ನಡ ಪರ ವಾದವನ್ನು ಆಯಾ ಪಕ್ಷದರು ಈ ಮುಂದಿನಂತೆ ವಿವರಿಸಿದರು.

ಕನ್ನಡಿಗರ ವಾದ:

- ಬಳ್ಳಾರಿ ನಗರವನ್ನೊಳಗೊಂಡ ಇಡೀ ತಾಲೂಕನ್ನು ಒಂದೇ ಘಟಕವಾಗಿ ಪರಿಗಣಿಸಬೇಕು.

- ಬಳ್ಳಾರಿ ತಾಲೂಕಿನಲ್ಲಿ ಕನ್ನಡಿಗರೇ ಬಹುಸಂಖ್ಯಾತರು, ಹಳ್ಳಿಗಳಲ್ಲಿ ಹತ್ತಿರದ ಸಂಬಂಧವಿದ್ದು, ಅಲ್ಲಿಯೂ ಕನ್ನಡಿಗರ ಸಂಖ್ಯೆಯೇ ಹೆಚ್ಚಿರುವುದಲ್ಲದೇ ನಗರದಲ್ಲಿಯೂ ಅವರೇ ಹೆಚ್ಚಿದ್ದು, ಅವರದೇ ಆಸ್ತಿ-ಪಾಸ್ತಿ ತುಂಬಿರುವುದರಿಂದ ಈ ತಾಲೂಕಿನ ಮುಖ್ಯ ಜನಾಂಗ ಎಂದರೆ ಕನ್ನಡಿಗರೇ ಆಗಿದ್ದಾರೆ.

- ಬಳ್ಳಾರಿ ನಗರದಲ್ಲಿ ಜನಸಂಖ್ಯೆಯನ್ನು ಮಾತ್ರ ಪರಿಶೀಲಿಸಿದಾಗ ಶೇಖಡಾ ಆಂಧ್ರರ ಸಂಖ್ಯೆ ಸ್ವಲ್ಪ ಹೆಚ್ಚು ಎಂದು ಕಂಡರೂ, ಆಂಧ್ರೇತರ ಜನರ ಶೇಖಡಾವಾರು ಸಂಖ್ಯೆ ನೋಡಿದರೆ ಅದು ಬಹಳ ಕಡಿಮೆ.

- ಬಳ್ಳಾರಿ ನಗರ ಇಡೀ ತಾಲೂಕಿನ ಹಾಗೂ ಪಶ್ಚಿಮ ತಾಲೂಕುಗಳ ಹೃದಯ ಭಾಗವಾಗಿರುವುದರಿಂದಲೂ ನಗರದ ಸುತ್ತಲೂ ಕನ್ನಡ ಹಳ್ಳಿಗಳೇ ಇರುವುದರಿಂದಲೂ ಈ ನಗರ ಆಂಧ್ರ ಪ್ರಾಂತ್ಯಕ್ಕೆ ಕೊಡಲ್ಪಟ್ಟರೆ, ಪಶ್ಚಿಮ ತಾಲೂಕುಗಳ ಬಾಳ್ವೆ ಮತ್ತು ವ್ಯಾಪಾರದ ಅಸ್ತಿತ್ವಕ್ಕೆ ಭಂಗ ಬರದಿರದು, ಯಾವ ರೀತಿಯಿಂದಲೂ ಭೂಪಟ್ಟಿಯನ್ನು (Corridor) ಕೊಟ್ಟು, ನಗರಕ್ಕೆ ಆಂಧ್ರ ಭಾಗಗಳಲ್ಲಿ ಜಂಟಿಸುವುದು ಅವ್ಯವಹಾರವಾಗಿರುವುದಲ್ಲದೇ, ಅಂಥ ಭೂಪಟ್ಟಿಯು ಅನಿವಾರ್ಯವಾಗಿ ಕನ್ನಡಿಗರೇ ಬಹು ಸಂಖ್ಯಾತರಾಗಿ ಬಾಳುತ್ತಿರುವ ಅಥವಾ ಆಂಧ್ರೇತರ ಜನರಿರುವ ಭಾಗಗಳನ್ನು ಕಬಳಿಸದೇ ಇಂದು, ಕಾರಣ ಅಂಥಹ ಭೂಪಟ್ಟಿಯನ್ನು ಕೊಟ್ಟು, ಆಂಧ್ರ ಪ್ರಾಂತ್ಯಕ್ಕೆ ಸೇರಿಸಕೂಡದು, ಆದುದರಿಂದ ಆಂಧ್ರರವಾದ ಅನುಚಿತ ಮಾತ್ರವಲ್ಲದೆ ಅವ್ಯವಹಾರವೂ ಆಗಿದೆ.

- ಬಳ್ಳಾರಿ ತಾಲೂಕಿಗೇ ಏಕೆ, ಇಡೀ ಜಿಲ್ಲೆಯ ಮೇಲೆ ಕನ್ನಡಿಗರಿಗಿರುವ ಹಕ್ಕನ್ನು ಪೂರ್ವದಲ್ಲಿ ಪರಿಗಣಿಸುತ್ತಾ ಬಂದಿದ್ದಾರೆ, ೧೯೨೧ರಲ್ಲಿ ಬಂದ "ಕೇಳ್ಕರ ಕೊಡುಗೆ"ಯೂ ಇದನ್ನು ಒಪ್ಪಿದೆ. ತ್ರಿಮೂರ್ತಿಯರ (ಪಂಡಿತ-ಪಾಟೇಲ್-ಪವ್ವಾಧಿ) ವರದಿ(೧೯೪೭)ಯಲ್ಲಿ ಈ ಹಕ್ಕು ನಿರ್ವಿವಾದವೆಂದು ಒಪ್ಪಿಕೊಂಡಿದೆ. ೧೯೪೯ರಲ್ಲಿ ಮದ್ರಾಸ್ ಸರಕಾರ ನೇಮಿಸಿದ ವಿಭಜನಾ ಸಮಿತಿ (Partition committee) ಯೂ ಬಳ್ಳಾರಿ ನಗರ ಮತ್ತು ತಾಲೂಕು ಕನ್ನಡ ಭಾಗಗಳೆಂದು ಪರಿಗಣಿಸಿದೆ. ಅಲ್ಲದೆ, ವಾಂಛೂ ವರದಿಯಲ್ಲಿಯೂ ಬಳ್ಳಾರಿ ನಗರ ಮತ್ತು ತಾಲೂಕುಗಳು ಕನ್ನಡ ಭಾಗಗಳೆಂದು ಪರಿಗಣಿಸಲಾಗಿದೆ ಎಂದು ಊಹಿಸಬಹುದು. ಇಂದಿನಂತಹ ವಿರುದ್ಧ ಅಭಿಪ್ರಾಯ ಆಗ ಬಂದಿರಲಿಲ್ಲ. ಅಲ್ಲದೇ, ಆಡಳಿತೆಯ ಸೌಕರ್ಯ, ಸಂಸ್ಕೃತಿ ಅಥವಾ ಆರ್ಥಿಕ ಸಮಸ್ಯೆಯನ್ನು ತಂದೊಡ್ಡಿ ಅದನ್ನು ಆಂಧ್ರಕ್ಕೆ ಸೇರಿಸುವ ವಿಷಯವೇ ಬಂದಿರಲಿಲ್ಲ.

- ತಾ॥೧೯.೧೨.೧೯೫೨ರಂದು ಪ್ರಧಾನಮಂತ್ರಿಗಳು, ಲೋಕಸಭೆಯಲ್ಲಿ ಕೊಟ್ಟ ಹೇಳಿಕೆಯಲ್ಲಿ ಕೇಂದ್ರ ಸರಕಾರ, ಆಂಧ್ರ ಮಾತನಾಡುವ ಜನರಿರುವ ಭಾಗಗಳನ್ನು ಕೂಡಿಸಿ, ಪ್ರಾಂತ್ಯ ನಿರ್ಮಾಣ ಮಾಡಿ ಏಕರೀತಿಯ ಜನರ ಏಳ್ಗೆಗೆ ಅವಕಾಶ ಕಲ್ಪಿಸಬೇಕೆಂದು ತಿಳಿಸಿದೆ. ಅಂದರೆ, ಆಂಧ್ರ ಪ್ರಾಂತ್ಯದಲ್ಲಿ ಸೇರುವ ಭಾಗಗಳು ಸಂಪೂರ್ಣ ಬಹುಸಂಖ್ಯಾತರ ಆಂಧ್ರದಿಂದ ಕೂಡಿರಬೇಕು ಎಂದು ಊಹಿಸಬಹುದು.

- ತೆಲುಗು ಮಾತಾನಾಡುವ ಜನರ ಸಂಖ್ಯೆಯನ್ನೇ ಗಮನಿಸಿ ಬಳ್ಳಾರಿ ನಗರದ ಭವಿಷ್ಯವನ್ನು ನಿರ್ಧರಿಸುವುದು ಯೋಗ್ಯವಲ್ಲ. ಸರ್ವೇಸಾಮಾನ್ಯವಾಗಿ ವ್ಯಾಪಾರ, ಉದ್ದಿಮೆಗಳ ಕಾರಣವಾಗಿ ಎಲ್ಲಾ ನಗರಗಳು ಮಿಶ್ರ ಜನಸಂಖ್ಯೆಯುಳ್ಳವು. ಇದಕ್ಕೆ ಮುಂಬಯಿ, ಕಲ್ಕತ್ತ, ದೆಹಲಿ ಮತ್ತು ಮದ್ರಾಸ್ ನಗರಗಳೇ ಸಾಕ್ಷಿ, ಅಂಥ ವಿಂಗಡಣೆಯನ್ನು ಭಾಷೆಯೊಂದರ ತತ್ವದ ಮೇಲೆ ಮಾಡಿದರೆ, ದುಷ್ಪರಿಣಾಮಗಳು ಮೂಡುವವು.

- ಬಳ್ಳಾರಿ ತಾಲೂಕು ಮತ್ತು ಮೈಸೂರಿಗಳಿಗೆ ಚಾರಿತ್ರಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸಂಬಂಧಗಳಿವೆ. ಈ ತಾಲೂಕನ್ನು ಆಂಧ್ರಕ್ಕೆ ಸೇರಿಸಿದರೆ, ಇಲ್ಲಿ ನಿರ್ವಿವಾದವಾಗಿ ಬಹುಸಂಖ್ಯಾತರಾಗಿದ್ದವರೇ ಹೊಸ ಪ್ರಾಂತ್ಯದಲ್ಲಿ ಅತಿ ಅಲ್ಪ ಸಂಖ್ಯಾತರಾಗಿ ಭಾಷಾ ದೃಷ್ಟಿಯಿಂದಲೇ ಪ್ರಾಂತ್ಯ ಕಟ್ಟಿಕೊಂಡ ಆ ಬಹು ಸಂಖ್ಯಾತ ಆಂಧ್ರರ ಕೈಯಲ್ಲಿ ಅಲ್ಪಸಂಖ್ಯಾತರು ಅತೀವ ಕಷ್ಟಕ್ಕೆ ಗುರಿಯಾಗುತ್ತಾರೆ, ಹಾಗಲ್ಲದೆ, ಮೈಸೂರಿಗೆ ಸೇರಿದರೆ, ಅವರೊಡನೆ ನೈಸರ್ಗಿಕವಾಗಿ ಸಾಮಿಪ್ಯವನ್ನು ಪಡೆದಿರುವರಿಂದ ಅವರ ಬಾಳ್ಗೆಗೆ ಬಹಳ ಅವಕಾಶವಿದೆ.

ಕನ್ನಡಿಗರ ವಾದಕ್ಕೆ ಬಳ್ಳಾರಿ ಜಿಲ್ಲೆ ಮುಸ್ಲಿಮರು ಹಾಗೂ ಬಳ್ಳಾರಿ ಮುನಿಸಿಪಲ್ ಕೌನ್ಸಿಲ್‌ನ ಹಾಗೂ ತಾಲೂಕಿನ ೪೧ ಪಂಚಾಯತಿಗಳಲ್ಲಿ ೩೨ ಪಂಚಾಯತಿಗಳ ಬೆಂಬಲ ದೊರಕಿತ್ತು.

ಆಂಧ್ರದ ವಾದ

- ಪೂರ್ವ ಕಾಲದಿಂದಲೂ ತೆಲುಗು ಮಾತನಾಡುವ ಜನರಿಗೂ, ಬಳ್ಳಾರಿಗೂ ಚಾರಿತ್ರಿಕ ಸಂಬಂಧವಿದೆ, ಬಳ್ಳಾರಿ ತಾಲೂಕನ್ನು ಕಟ್ಟಿದವರಲ್ಲಿ ವಿಜಯನಗರದ ಸೈನ್ಯಾಧಿಕಾರಿಗಳೂ, ರಾಜರೂ, ಸಾಮ್ರಾಟರೂ ಪ್ರಮುಖ ಪಾತ್ರವಹಿಸಿದ್ದರು. ಈ ತಾಲೂಕಿನ ಇಂದಿನ ಸಮೃದ್ಧಿಯ ಕೀರ್ತಿ ಅವರಿಗೇ ಸಲ್ಲಬೇಕು. ಇಷ್ಟಲ್ಲದೆ, ಇಲ್ಲಿನ ಜನಜೀವನ, ರೀತಿ ನೀತಿ, ಸಂಸ್ಕೃತಿ ಹಾಗೂ ವ್ಯಾಪಾರ ಈ ನಾಯಕರ ಪ್ರೋತ್ಸಾಹದ ಫಲವಾಗಿದೆ.

- ಪಕ್ಕದಲ್ಲಿರುವ ಆಂಧ್ರ ಭಾಗಕ್ಕೆ, ಬಳ್ಳಾರಿ ತಾಲೂಕನ್ನು ಸೇರಿಸುವ ಮುಖ್ಯಕಾರಣವೆಂದರೆ, ವ್ಯಾಪಾರಕ್ಕೆ ಯೋಗ್ಯವಾದ ರಸ್ತೆಗಳು ಇರುವುದರಿಂದ ಈ ಸಂಬಂಧ ಕಡಿದುಹೋಗಲು ಅವಕಾಶ ಕೊಡಕೂಡದು.

- ಆದೇ ರೀತಿ ಬಳ್ಳಾರಿಯ ಜನರಿಗೆ ಸಾಂಸ್ಕೃತಿಕ ಹಾಗು ಸಾಮಾಜಿಕ ಸಂಬಂಧ ಆಂಧ್ರರೊಡನೆ ಇದೆ. ಹೀಗಿರುವಾಗ, ಅವರನ್ನು ಮೈಸೂರಿಗೆ ಸೇರಲು ಒತ್ತಾಯಪಡಿಸಿದರೆ ಆಂಧ್ರ ದೇಶದೊಡನಿರುವ ಅವರ ಸಂಬಂಧ ಹಾಳಾಗುತ್ತದೆ.

- ಆದವಾನಿ, ಆಲೂರು, ರಾಯದುರ್ಗ ಮತ್ತು ಬಳ್ಳಾರಿ ತಾಲೂಕುಗಳ ವ್ಯಾಪಾರ ಮತ್ತು ಆಡಳಿತಗಳ ಕೇಂದ್ರವೇ ಬಳ್ಳಾರಿ ನಗರ, ಅದನ್ನು ಬೇರ್ಪಡಿಸಿದರೆ ಸಂಬಂಧ ಕಡಿದಂತೆ ಆಗಿ ಉಳಿದ ಮೂರು ತಾಲೂಕುಗಳ ಆರ್ಥಿಕ ಮಟ್ಟ ತಲೆಕೆಳಗಾಗುವುದು ಎಂದು.

- ಬಳ್ಳಾರಿ ನಗರವು ರಾಯಲಸೀಮೆ ಜಿಲ್ಲೆಗಳ ಮಾತ್ರವಲ್ಲದೆ ಮದ್ರಾಸ್ ಸಂಸ್ಥೆಯದ ಜಿಲ್ಲೆಗಳ ಹೃದಯ ಭಾಗವಾಗಿದೆ. ಇಲ್ಲಿ ಪ್ರಾದೇಶಿಕ ಕಛೇರಿಗಳು ಶಾಲೆ ಸಂಸ್ಥೆಗಳೂ ಹೇರಳವಾಗಿವೆ. ಅವುಗಳನ್ನು ಸ್ಥಳಾಂತರಿಸಲು ವೃಥಾ ಹಣ ವ್ಯಯವಾಗುವುದಲ್ಲದೆ, ಕಷ್ಟವೂ ಆಗುತ್ತದೆ, ಹೊಸ ಜೈಲು ಮತ್ತು ಜೈಲು ಅಧಿಕಾರಿಗಳ ನಿವಾಸಗಳನ್ನು ನಿರ್ಮಿಸುವುದೂ ಅಷ್ಟೇ ಕಷ್ಟದ ಕೆಲಸವಾದ್ದರಿಂದ, ಈಗತಾನೇ ಆಸ್ತಿತ್ವಕ್ಕೆ ಬರುತ್ತಿರುವ ಆಂಧ್ರ ಪ್ರಾಂತ್ಯ ಇಂಥ ಅನಾವಶ್ಯಕ ಖರ್ಚುಗಳನ್ನು ಈಗಿನಿಂದಲೇ ಹೊತ್ತುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಮನವಿಯಲ್ಲಿ ತಿಳಿಸಿದರು.

- ನಗರದ ಶೇಕಡ ೬೦ ಕ್ಕಿಂತ ಹೆಚ್ಚು ಸ್ವಂತ ಆಸ್ತಿಗಳು ಆಂಧ್ರರಿಗೆ ಸೇರಿವೆ, ಆದಕಾರಣ ಅವರಿಗೆ ನಗರದಲ್ಲಿ ಹೆಚ್ಚು ಪ್ರಾಮುಖ್ಯತೆ ಇದೆ. ಅವರು ದೊಡ್ಡ ವ್ಯಾಪಾರಿಗಳೂ, ಉದ್ದಿಮೆದಾರರೂ ಆಗಿರುವುದರಿಂದ, ಸತತವಾಗಿ ಬಂದಿರುವ ನಗರದ ಸಮೃದ್ಧಿಗೆ ಮುಖ್ಯ ಕಾರಣರಾಗಿದ್ದಾರೆ, ಬಳ್ಳಾರಿಯ ಭವಿಷ್ಯದ ಬಗ್ಗೆ ಕೊನೆಯ ನಿರ್ಧಾರಕ್ಕೆ ಬರುವಾಗ ಈ ವಿಷಯವನ್ನು ಮರೆತುಬಿಡಬಾರದೆಂದು ಆಯೋಗಕ್ಕೆ ತಿಳಿಸಿದರು.

- ಮುನಿಸಿಪಲ್ ಕೌನ್ಸಿಲ್‌ಗೆ ಸದಸ್ಯರಾಗಿ ಬಹುಜನ ಆಂಧ್ರರು ಆರಿಸಿ ಬಂದಿರುವುದೂ, ಅಸೆಂಬ್ಲಿ ಸ್ಥಳಕ್ಕೆ ಆಂಧ್ರರೊಬ್ಬರು ಆರಿಸಿಬಂದಿರುವುದೂ ಈ ನಗರದ ಜನರಿಗೆ ಆಂಧ್ರರ ಬಗ್ಗೆ ಇರುವ ಒಲವನ್ನು ಸೂಚಿಸುತ್ತದೆ. ಇದರ ಜೊತೆಗೆ, ಎಷ್ಟೋ ಪಂಚಾಯಿತಿ ಬೋರ್ಡುಗಳು ಆಂಧ್ರಕ್ಕೆ ಸೇರಲು ಇಷ್ಟಪಡುವುದನ್ನು ವಿಶದವಾಗಿಯೂ, ನಿರ್ಭಿತೆಯಿಂದಲೂ ತಿಳಿಸಿರುತ್ತಾರೆ.

- ನಗರದ ಮುನಿಸಿಪಲ್ ಮತ್ತು ಸರಕಾರಿ ಶಾಲೆಗಳಲ್ಲಿ ತೆಲುಗು ಭಾಷೆಯೇ ಶಿಕ್ಷಣ ಮಾಧ್ಯಮವಾಗಿರುವುದೂ, ಬಳ್ಳಾರಿಯ ವ್ಯಾಪಾರಿಗಳು ತಮ್ಮ ಲೆಕ್ಕ ಪತ್ರಗಳನ್ನು ಬಹುವಾಗಿ ತೆಲುಗಿನಲ್ಲಿಯೇ ಬರೆಯುತ್ತಿರುವುದೂ, ನಗರದ ಜನರಿಗಿರುವ ಆಂಧ್ರದ ಒಲವನ್ನು ಸೂಚಿಸುತ್ತವೆ.

ಈ ಎಲ್ಲಾ ಅಂಶಗಳನ್ನು ಒಳಗೊಂಡಂತಹ ಮನವಿಗಳನ್ನು ಮಿಶ್ರಾ ಆಯೋಗಕ್ಕೆ ಸಲ್ಲಿಸಲಾಗಿತ್ತು. ಈ ರೀತಿ ಮನವಿ ಪಾಲಿಸಿದವರಲ್ಲಿ ಧಾರವಾಡದ ಕನ್ನಡ ಸಂಶೋಧಕ ಸಂಸ್ಥೆಯ ನಿವೃತ್ತ ನಿರ್ದೇಶಕ ಆರ್.ಎಸ್. ಪಂಚಮುಖಿಯವರೂ ಒಬ್ಬರಾಗಿದ್ದರು[೭]. ೫-೫-೧೯೫೩ ರಂದು ಅವರಿಗೆ ಬಳ್ಳಾರಿಯ ಕರ್ನಾಟಕ ಕ್ರಿಯಾ ಸಮಿತಿಯವರಿಂದ ತಕ್ಷಣವೇ ಬಳ್ಳಾರಿಗೆ ಒಂದು ಮಿಶ್ರಾ ಅವರಿಗೆ ಬಳ್ಳಾರಿಯು ಕರ್ನಾಟಕ್ಕೆ ಸೇರಬೇಕಾದ ಔಚಿತ್ಯದ ಬಗೆಗೆ ತಿಳುವಳಿಕೆ ನೀಡಬೇಕೆಂದು ತಂತಿ ಸಂದೇಶ ಬಂದಿತು ದಿನಾಂಕ ೯.೫.೧೯೫೩ ರಂದು

ಪಂಚಮುಖಿಯವರು ಮಿಶ್ರಾ ಅವರನ್ನು ಕಾಣಲು ಹೋದರು. ಅಲ್ಲಿ ವಿಚಾರಣೆಯು ಅಂತಿಮ ಹಂತದಲ್ಲಿತ್ತು. ಮಿಶ್ರಾ ರವರು ನಿರ್ಗಮನದ ಸಿದ್ಧತೆಯಲ್ಲಿ ಇದ್ದರು. ಮೊದಲಿಗೆ ಮಿಶ್ರಾ ಅವರು ಪಂಚಮುಖಿಯವರ ಸಂದರ್ಶನಕ್ಕೆ ಅವಕಾಶ ನೀಡದೆ ಮನವಿಯನ್ನು ಮಾತ್ರ ಸ್ವೀಕರಿಸಲು ಒಪ್ಪಿದರು. ಆದರೆ ಅನೇಕ ನಾಯಕರ ಒತ್ತಾಯದ ಮೇರೆಗೆ ಕೇವಲ ಮೂರು ನಿಮಿಷಗಳ ಕಾಲಾವಕಾಶ ನೀಡಿ ತಾವು ಈಗಾಗಲೇ ಆಂಧ್ರದ ಪ್ರತಿನಿಧಿಗಳಿಂದ ಮತ್ತು ಅವರು ಒದಗಿಸಿದ ಕೆಲವು ಗ್ರಂಥಗಳಿಂದ ಅಲ್ಲಿನ ಇತಿಹಾಸದ ಬಗೆಗೆ ತಿಳಿದಿರುವುದಾಗಿಯೂ, ಕೇವಲ ಹೊಸ ವಿಚಾರಗಳೇನಾದರೂ ಇದ್ದರೆ ಮಾತ್ರ ತಿಳಿಸಬೇಕಾಗಿಯೂ ಸೂಚಿಸಿದರು. ಪಂಚಮುಖಿ ಅವರು ವಿಜಯನಗರ ಕಾಲದ ಶಾಸನಗಳ, ಸಾಹಿತ್ಯ, ಕೃತಿಗಳ ಮತ್ತು ವಾಸ್ತುಶಿಲ್ಪಗಳ ಮೂಲಕ ಆ ಭಾಗವು ಎಷ್ಟರಮಟ್ಟಿಗೆ ಕನ್ನಡದ್ದೆ ಆಗಿತ್ತು. ಕನ್ನಡದವರದೇ ಆಗಿತ್ತು ಎಂದು ಮನವರಿಕೆ ಮಾಡಿದರು. ಆ ಸಂಬಂಧಿತವಾಗಿ ಹಿರಿಯ ಇತಿಹಾಸಕಾರರ ಅಭಿಪ್ರಾಯಗಳು ಪ್ರಕಟವಾಗಿರುವ ಕೃತಿಗಳು ಮತ್ತು ಛಾಯಾ ಚಿತ್ರಗಳನ್ನೆಲ್ಲ ಮಿಶ್ರಾ ಅವರ ಗಮನಕ್ಕೆ ತಂದರು. ಪ್ರಾಗೈತಿಹಾಸಿಕ ಯುಗದಿಂದ ೧೭೯೯ರ ವರೆಗೆ ಅದು ಹೇಗೆ ಕನ್ನಡಿಗರದೇ ಆಗಿತ್ತು ಎಂದು ಮನವರಿಕೆ ಮಾಡಿದ್ದರು. ಕಳೆದ ಕೆಲವು ವರ್ಷಗಳಿಂದೀಚೆಗೆ ಬಂದು ಬಲಗೊಂಡ ಜನ, ಆ ನೆಲ ಮೊದಲಿನಿಂದಲೂ ತಮ್ಮದೇ ಆಗಿತ್ತು ಎಂದು ಹಕ್ಕು ಸ್ಥಾಪಿಸಲು ಪ್ರಯತ್ನಿಸುತ್ತಿರುವುದನ್ನು ಪಂಚಮುಖಿ ಬಯಲಿಗೆಳೆದರು. ಮೂರು ನಿಮಿಷಗಳ ಅವಕಾಶ ನೀಡಿ ನಲವತ್ತು ನಿಮಿಷಗಳಿಗೂ ಹೆಚ್ಚು ಕಾಲ ಪಂಚಮುಖಿ ಅವರ ವಾದವನ್ನು ಕೇಳಿದ ಮಿಶ್ರಾರವರು ರೂಪಿಸಿಕೊಂಡಿದ್ದ ಅಭಿಪ್ರಾಯವನ್ನು ಬದಲಿಸಿಕೊಳ್ಳಲೇಬೇಕಾಗಿದೆಯೆಂಬ ಮಾತನ್ನಾಡಿದರು. ಅನೇಕ ಪ್ರಶ್ನೆಗಳನ್ನು ಕೇಳುತ್ತಾ ತಮ್ಮ ಕುತೂಹಲ ಮತ್ತು ಆಸಕ್ತಿಗಳನ್ನು ವ್ಯಕ್ತಪಡಿಸಿದರು.

ಬಳ್ಳಾರಿ ನಗರದಲ್ಲಿ ತೆಲುಗು ಸಂಖ್ಯೆ ಅಧಿಕವೆನಿಸಿದರೂ (ಮಿಶ್ರ ಭಾಷೆಯ ಜನ ವಾಸಿಸುವ ನಗರವಾದ್ದರಿಂದ) ಇಡಿಯಾಗಿ ಬಳ್ಳಾರಿ ತಾಲ್ಲೂಕಿನಲ್ಲಿ ಕನ್ನಡಿಗರ ಸಂಖ್ಯೆಯೇ ಅಧಿಕವಾಗಿರುವುದರಿಂದ ಇಡೀ ತಾಲ್ಲೂಕನ್ನು ಒಂದು ಘಟಕವಾಗಿ ಪರಿಗಣಿಸಬೇಕು ಎಂಬುದು ಕನ್ನಡಿಗರ ಪ್ರಮುಖ ವಾದವಾಗಿತ್ತು. ಬಳ್ಳಾರಿ ನಗರದ ಕನ್ನಡೇತರರು ವಲಸೆ ಬಂದು ನೆಲೆಗೊಂಡವರೆಂದು ತಿಳಿಸಲಾಗಿತ್ತು. ಕೇಳ್ಕರ್ ವರದಿಯ ಪ್ರಕಾರವೂ ಬಳ್ಳಾರಿ ತಾಲ್ಲೂಕು ಕರ್ನಾಟಕಕ್ಕೆ ಸೇರಿತ್ತು. ಆದರೆ ಆಂಧ್ರದವರು ಬಳ್ಳಾರಿಯು ಆಂಧ್ರದೊಡನೆ ಹೆಚ್ಚು ಸಂಪರ್ಕ ಪಡೆದಿದೆ, ಅಲ್ಲಿನ ಶಿಕ್ಷಣ ಮಾಧ್ಯಮ, ವ್ಯಾಪಾರ ವ್ಯವಹಾರಗಳ ಭಾಷೆಯೆಲ್ಲಾ ತೆಲುಗೇ ಆಗಿದೆ ಎಂಬ ವಾದವನ್ನು ಮುಂದೂಡಿದರು. ಜನರ ಅಭಿಪ್ರಾಯಗಳು ಗೊಂದಲಕಾರಿ ಎನಿಸಿದಾಗ ಮಿಶ್ರಾ ರವರು ೧೯೫೧ ಜನಗಣತೆಯ ಅಂಕಿ - ಅಂಶಗಳನ್ನು ಪರಿಶೀಲಿಸಿದರು. ಆ ಪ್ರಕಾರ ಬಳ್ಳಾರಿ ನಗರ ಮತ್ತು ತಾಲ್ಲೂಕುಗಳಲ್ಲಿನ ಪ್ರಮುಖ ಭಾಷಾವಾರು ಜನಸಂಖ್ಯೆ ಕೆಳಗಿನಂತಿತ್ತು[೮].

ಪ್ರದೇಶ	ಒಟ್ಟು ಜನಸಂಖ್ಯೆ	ಕನ್ನಡ	ತೆಲುಗು	ಇತರೆ
ಒಟ್ಟು ಬಳ್ಳಾರಿ ತಾಲ್ಲೂಕು	೧,೮೪,೭೩೩	೯೧,೧೬೯	೫೧,೬೪೧	೪೯,೯೨೩
ಬಳ್ಳಾರಿ ಹಳ್ಳಿಗಳು	೧,೧೪,೨೭೦	೭೩,೮೩೬	೨೮,೬೦೮	೧೧,೮೨೬
ಬಳ್ಳಾರಿ ನಗರ	೭೦,೪೬೩	೧೭,೩೩೩	೨೩,೦೩೩	೨೦,೦೯೭

ಮೇಲಿನ ಅಂಕಿ–ಅಂಶಗಳ ಪ್ರಕಾರ ಬಳ್ಳಾರಿ ನಗರದಲ್ಲಿ ಮಾತ್ರ ಕನ್ನಡಿಗರ ಪ್ರಮಾಣ ಉಳಿದ ಭಾಷಿಕರ ಪ್ರಮಾಣಕ್ಕಿಂತ ಕಡಿಮೆಯಾಗಿದೆ. ಆದರೆ ನಗರದ ಜನಸಂಖ್ಯೆಯಲ್ಲಿ ವ್ಯಾಪಾರ ಮತ್ತು ಉದ್ಯೋಗಗಳಿಗೆ ಬಂದಿದ್ದ ತಾತ್ಕಾಲಿಕ ನೆಲೆಯ ಜನರೂ ಇರುತ್ತಾರೆಂಬುದನ್ನು ಮರೆಯುವಂತಿರಲಿಲ್ಲ. ಮಿಶ್ರಾಅವರೇ ನಿರ್ಧರಿಸಿದ ಪ್ರಕಾರ ಇಡಿಯಾಗಿ ಬಳ್ಳಾರಿ ತಾಲೂಕಿನಲ್ಲಿ ಕನ್ನಡಿಗರ ಪ್ರಮಾಣ ಶೇಕಡಾ ೫೨.೫೨ ತೆಲುಗರ ಪ್ರಮಾಣ ೨೫.೨೯ ಮತ್ತು ಇತರರ ಪ್ರಮಾಣ ೨೨.೦೯. ಇದರಿಂದ ತಾಲ್ಲೂಕಿನಲ್ಲಿ ಕನ್ನಡಿಗರೇ ಬಹು ಸಂಖ್ಯಾತರು ಎಂಬುದು ನಿರ್ಧಾರವಾಯಿತು. ತಕರಾರು ಇದ್ದುದೆಲ್ಲಾ ರೂಪನಗುಡಿ ಬಳ್ಳಾರಿ ಮತ್ತು ಮೋಕಾ ಫಿರ್ಕಾಗಳಿಗೆ ಸಂಬಂಧಿಸಿದಂತೆ ಮಾತ್ರ, ಈ ಪ್ರದೇಶಗಳಲ್ಲಿ ಉರ್ದು ಭಾಷೆ ಮನೆಮಾತಾಗಿ ಉಳ್ಳ ಮುಸ್ಲಿಮರ ಸಂಖ್ಯೆಯು ಅಧಿಕವೇ ಅಗಿರುವುದನ್ನು ಗಮನಿಸಿದ ಮಿಶ್ರಾ ಅವರು ಹಳ್ಳಿ, ಫಿರ್ಕಾ, ತಾಲ್ಲೂಕು – ಹೀಗೆ ಯಾವ ದೃಷ್ಟಿಯಿಂದ ನೋಡಿದರೂ, ಬಳ್ಳಾರಿ ನಗರ ಮತ್ತು ತಾಲ್ಲೂಕು ಭಾಷಿಕವಾಗಿ ಆಂಧ್ರಕ್ಕೆ ಸೇರಲು ಸಾಧ್ಯವಿಲ್ಲ,

ಆಂಧ್ರರದು ನ್ಯಾಯುತವಾದ ಬೇಡಿಕೆಯಲ್ಲ ಎಂಬ ಅಭಿಪ್ರಾಯಕ್ಕೆ ಬಂದರು, ೧೮೯೧ ರಿಂದ ೧೯೫೧ರ ವರೆಗೆ ನಡೆದ ಜನಗಣತಿಯ ಅಂಕಿ ಅಂಶಗಳ ಪ್ರಕಾರ ಎಲ್ಲಾ ಸಂದರ್ಭಗಳಲ್ಲೂ ಬಳ್ಳಾರಿ ಜಿಲ್ಲೆಯಲ್ಲಿ ಕನ್ನಡಿಗರು ಅರ್ಧಕ್ಕಿಂತಲೂ ಅಧಿಕವಾಗಿರುವುದನ್ನು ಮಿಶ್ರಾ ಸಮಿತಿ ಗುರ್ತಿಸಿತು. ಬಳ್ಳಾರಿ ಜಿಲ್ಲಾ ಮ್ಯಾನ್ಯೂಯಲ್ (೧೮೭೨), ಬಳ್ಳಾರಿ ಜಿಲ್ಲಾ ಗೆಜೆಟಿಯರ್ (೧೯೦೪) ಮತ್ತು ಇಂಪೀರಿಯಲ್ ಗೆಜೆಟಿಯರ್ ಆಫ್ ಇಂಡಿಯಾ (೧೯೦೮) ಗಳಲ್ಲಿ ಬಳ್ಳಾರಿ ತಾಲ್ಲೂಕಿನ ಪ್ರಚಲಿತ ಭಾಷೆಯು ಕನ್ನಡ ಎಂದು ನಿರ್ವಿವಾದವಾಗಿ ದಾಖಲಾಗಿದ್ದು, ಇತ್ತೀಚಿನ ಜನಗಣತಿಯ ಅಂಕಿ ಅಂಶಗಳಲ್ಲಿ ಮಾತ್ರ ಕೆಲವು ವೈಪರೀತ್ಯಗಳು ಕಂಡುಬಂದಿವೆ ಎಂದು ಮಿಶ್ರಾ ತಿಳಿದರು. ಐತಿಹಾಸಿಕ ಅಂಶಗಳು, ಸಾಂಸ್ಕೃತಿಕ ಸಂಬಂಧಗಳು, ಆಡಳಿತಾನುಕೂಲ, ಆರ್ಥಿಕ ಪ್ರಗತಿ ಇತ್ಯಾದಿ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಮಿಶ್ರಾ ಅವರು ಮೇಲೆ ಹೇಳಿದ ಮಾತುಗಳಿಂದ, ಬಳ್ಳಾರಿ ತಾಲೂಕು ಸಂಪೂರ್ಣವಾಗಿ ಕೆಲವು ತಾತ್ಕಾಲಿಕ ಮಧ್ಯ ಕಾಲದ ಏರ್ಪಾಡುಗಳಿಗೆ ಒಳಪಟ್ಟು ಮೈಸೂರಿಗೆ ಸೇರಬೇಕೆಂದು ವಿಶದವಾಗುತ್ತದೆ ಎಂದು ಅಂತಿಮ ತೀರ್ಪುನೀಡಿ ತಾತ್ಕಾಲಿಕ ಮಧ್ಯಕಾಲಿಕ ಏರ್ಪಾಡುಗಳಿಗೂ ಕೆಲವು ಸಲಹೆ ನೀಡಿದರು.

೧೮.೦೫.೧೯೫೩ರಂದು ಮಿಶ್ರಾ ಅವರು ಭಾರತ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ವರದಿಯನ್ನು ಕೇಂದ್ರ ಸರ್ಕಾರದ ಸಚಿವ ಸಂಪುಟದ ಸಭೆ ೨೦.೦೩.೧೯೫೩ರಂದು ಸ್ವೀಕರಿಸಿತು. ನಿಯಮಿತ ಕಾಲಾವಧಿಯಲ್ಲಿ ನಿಷ್ಠೆಯಿಂದ ಕಾರ್ಯನಿರ್ವಹಿಸಿ ಸಕಾಲಕ್ಕೆ ವರದಿ ಸಲ್ಲಿಸಿದ ಮಿಶ್ರಾರಿಗೆ ಕೃತಜ್ಞತೆಯನ್ನರ್ಪಿಸಿದ ಸರ್ಕಾರ ಮಿಶ್ರಾ ಅವರ ವರದಿಯನ್ನು ಅಂಗೀಕರಿಸಿರುವುದಾಗಿ ಪ್ರಕಟಿಸಿತು. ಈ ವರದಿಯನ್ನು ಆಂಧ್ರದ ಅಧ್ಯಕ್ಷರು, ಉಪಾಧ್ಯಕ್ಷರು ಆಂಧ್ರ ಪ್ರಜಾ ಸೋಷಲಿಸ್ಟ್ ಪಾರ್ಟಿ ಎಲ್ಲಾರೂ ಒಪ್ಪಿಕೊಂಡು ಸಮ್ಮತಿಸಿದರು. ಮಿಶ್ರಾ ವರದಿಯ ನಂತರ ಆಂಧ್ರಪ್ರದೇಶದ ರಚನೆಯ ದಿನ ದೂರವಿಲ್ಲವೆಂಬುದು ಖಚಿತವಾಯಿತು. ಆದರೆ ಕರ್ನಾಟಕ ಪ್ರಾಂತ ರಚನೆಯ ಮಾತು ದೂರವೇ ಉಳಿಯಿತು. ಮಿಶ್ರಾ ಅವರ ವರದಿಯು ಬಳ್ಳಾರಿ ತಾಲೂಕನ್ನು ಒಡೆಯುತ್ತದೆಂಬ ಸಂಶಯ ಬಹುತೇಕ ಕನ್ನಡಿಗರಿಗಿದ್ದರೂ ವರದಿ ಪ್ರಕಟವಾಗಿ ಅದು ಸ್ವೀಕಾರವಾದ ನಂತರ ಆ ಸಂಶಯವೇನೋ ನಿವಾರಣೆಯಾಯಿತು. ಈ ಘಟ್ಟದಲ್ಲಿ ಒಂದು ಸಮಸ್ಯೆ ಉದ್ಭವಿಸಿತು. ಬಳ್ಳಾರಿ ತಾಲೂಕು ಆಡಳಿತ ಮತ್ತು ಭಾಷಾ ದೃಷ್ಟಿಯಿಂದ ಕರ್ನಾಟಕ ಪ್ರದೇಶವೆಂದು ಮಿಶ್ರಾ ಆಯೋಗ ತೀರ್ಪು ಕೊಟ್ಟಿದ್ದರಿಂದ ಅದು ಆಂಧ್ರ ಪ್ರಾಂತಕ್ಕೆ ಸೇರಬೇಕೆಂಬ ವಾದ ತಿರಸ್ಕೃತವಾಯಿತು, ಇನ್ನು ಕರ್ನಾಟಕ ಪ್ರಾಂತ ರಚನೆಯ ಆಲೋಚನೆಯೂ ಇರಲಿಲ್ಲ. ಬಳ್ಳಾರಿಯ ೬ ತಾಲೂಕುಗಳು ಆಂಧ್ರದಲ್ಲಿ ಸೇರಲು ಇಚ್ಛಿಸಲಿಲ್ಲ. ಹಾಗಾದರೆ ಕರ್ನಾಟಕ ಪ್ರಾಂತ ರಚನೆ ಆಗುವವರೆಗೆ ಬಳ್ಳಾರಿ ಎಲ್ಲಿರಬೇಕು? ಈ ಪ್ರಶ್ನೆ ಬಂದಾಗ ವಿಧಿಯಿಲ್ಲದೆ ನೆರೆಯ ಮೈಸೂರು ಸೀಮೆಗೆ ಸೇರಿಕೊಳ್ಳುವುದೊಂದೇ ಉಳಿದಿದ್ದ ದಾರಿ. ಆದರೆ ಮೈಸೂರು ಸೀಮೆಯಲ್ಲಿ ಸೇರಿಸಿಕೊಳ್ಳುವುದಕ್ಕೆ ಅಂದಿನ ಸರ್ಕಾರ ಸಂಪೂರ್ಣ ಸಿದ್ಧವಿರಲಿಲ್ಲ. ಮದ್ರಾಸಿನಲ್ಲಿ ಉಳಿಸಿಕೊಳ್ಳಲು ರಾಜಾಜಿ ಸಿದ್ಧವಿರಲಿಲ್ಲ. ಆಗ ಬಳ್ಳಾರಿಯ ಕರ್ನಾಟಕ ಕ್ರಿಯಾ ಸಮಿತಿ ಮಾಡಿದ ಪ್ರಚಂಡ ಪ್ರಯತ್ನದಿಂದ ಮುಖ್ಯಮಂತ್ರಿ ಹನುಮಂತಯ್ಯನವರಿಗೆ ಏಕೀಕರಣಕ್ಕೂ, ಬಳ್ಳಾರಿ ಮೈಸೂರಿನಲ್ಲಿ ಸೇರುವುದಕ್ಕೂ ಸಮ್ಮತಿಯಿತ್ತು. ಆದರೆ ಹಳೆ ಮೈಸೂರಿನ ಕೆಲವು ಶಾಸಕರಿಗೆ ಅಷ್ಟೊಂದು ಆಸಕ್ತಿ ಇರಲಿಲ್ಲ. ಆದ್ದರಿಂದ ಬಳ್ಳಾರಿಯ ಕರ್ನಾಟಕ ಕ್ರಿಯಾ ಸಮಿತಿಯ ನಿಯೋಗವೊಂದು ಮುಖ್ಯಮಂತ್ರಿಗಳನ್ನು ಅವರ ಸಚಿವ ಸಂಪುಟದ ಸದಸ್ಯರನ್ನು ಶಾಸಕರನ್ನು ಭೇಟಿ ಮಾಡಿ, ಬಳ್ಳಾರಿ ಜಿಲ್ಲೆಯನ್ನು ಮೈಸೂರು ರಾಜ್ಯಕ್ಕೆ ಸೇರಿಸಿಕೊಳ್ಳಬಹುದೆಂಬ ಮನವಿಗೆ ಸಹಿ ಪಡೆದು ಮಾನ್ಯ ಮುಖ್ಯಮಂತ್ರಿಗಳಿಗೆ ಅರ್ಪಿಸಿದರು. ಮೈಸೂರು ವಿಧಾನಸಭೆಯಲ್ಲಿ ಬಳ್ಳಾರಿಯನ್ನು ಮೈಸೂರಿನಲ್ಲಿ ವಿಲೀನ ಮಾಡಬೇಕೆಂದು ಸರ್ವಾನುಮತದ ಗೊತ್ತುವಳಿಯನ್ನು ಅಂಗೀಕರಿಸಿತು.

೦೧.೧೦.೧೯೫೩ರಂದು ಆಂಧ್ರರಾಜ್ಯ ಉದಯವಾಗಿತ್ತು. ಅದೇ ಸಮಯಕ್ಕೆ ಬಳ್ಳಾರಿ ಜಿಲ್ಲೆಯನ್ನು ಮೈಸೂರು ಪ್ರಾಂತಕ್ಕೆ ಸೇರಿಸಲಾಯಿತು. ಈ ಘಟನೆಯನ್ನು ಬಳ್ಳಾರಿ ಜಿಲ್ಲೆಯಲ್ಲಿ ಸಂಭ್ರಮದಿಂದ ಆಚರಿಸಿಕೊಂಡರು.

೦೨.೧೦.೧೯೫೩ರಂದು ಮೈಸೂರು ರಾಜ್ಯದ ಮುಖ್ಯಮಂತ್ರಿ ಕೆ. ಹನುಮಂತಯ್ಯ ಅವರು ಬಳ್ಳಾರಿಯ ಬಿ.ಡಿ.ಎ.ಎ. ಮೈದಾನದಲ್ಲಿ ನಡೆದ ಬಳ್ಳಾರಿ–ಮೈಸೂರು ವಿಲೀನ ಸಮಾರಂಭದಲ್ಲಿ ಭಾಗವಹಿಸಿ ಕರ್ನಾಟಕ ಏಕೀಕರಣದಲ್ಲಿ ಇದು ಮೊದಲ ಹೆಜ್ಜೆ ಎಂದು ತಿಳಿಸುತ್ತಾ ನನ್ನ ಮನಸ್ಸನ್ನು ದೇಹವನ್ನು ನಿಮ್ಮ ಸೇವೆಗೆ ಮುಡಿಪಾಗಿ ಇಡುತ್ತೇನೆ ಎಂದು ಬಳ್ಳಾರಿಯ ಜನತೆಗೆ ಆಶ್ವಾಸನೆ ನೀಡಿದರು.

೨.೪ ಚತುರ್ಥ ಹಂತ

ಫಜಲ್ ಅಲಿ ಆಯೋಗ : ರಾಜ್ಯ ಪುನರ್ವಿಂಗಡನೆಯ ಸಮಿತಿ :

ರಾಜ್ಯ ಪುನರ್ವಿಂಗಡನೆಯ ಸಮಿತಿಯನ್ನು ಕೇಂದ್ರ ಸರ್ಕಾರವು ನೇಮಿಸಿತು. ಅದು ರಾಷ್ಟ್ರದಲ್ಲಿನ ಭಾಷಾವಾರು ಪ್ರಾಂತಗಳ ರಚನೆಯಲ್ಲಿ ರಾಷ್ಟ್ರದ ಐಕ್ಯತೆಗೆ ಭಂಗ ಬರದಂತೆ ವಾಸ್ತವಿಕ ಸತ್ಯಗಳಿಂದ ಆಧರಿಸಿ ರಾಜ್ಯಗಳ ಪುನರ್ವಿಂಗಡಣೆಯಾಗಬೇಕೆಂಬ ಉದ್ದೇಶದಿಂದ ಈ ಸಮಿತಿಯನ್ನು ರಚಿಸಿದರು. ರಾಜ್ಯ ಪುನರ್ವಿಂಗಡಣಾ ಆಯೋಗದ ಅಧ್ಯಕ್ಷರಾಗಿ ಸೈಯದ್ ಫಜಲ್ ಅಲಿ ಅವರು ನೇಮಕಗೊಂಡರು ಇವರು ಫೆಡರಲ್ ಕೋರ್ಟಿನ ನ್ಯಾಯಮೂರ್ತಿಗಳಾಗಿ ನಿವೃತ್ತಿ ಹೊಂದಿ, ಒರಿಸ್ಸಾ ಪ್ರಾಂತದ ರಾಜ್ಯಪಾಲರಾಗಿದ್ದರು. ಆಯೋಗದ ಒಬ್ಬ ಸದಸ್ಯರಾದ ಕೆ. ಎಂ. ಫಣಿಕ್ಕರ್ ಅವರು ಖ್ಯಾತ ಇತಿಹಾಸಕಾರರಾಗಿದ್ದರು. ಮತ್ತೊಬ್ಬ ಸದಸ್ಯ ಹೃದಯನಾಥ ಕುಂಜ್ರೂ ಅವರು ರಾಜನೀತಿ ನಿಪುಣರು, ಮುತ್ಸದಿಗಳಾಗಿ ಮತ್ತು ಉತ್ತಮ ಅರ್ಥಶಾಸ್ತ್ರಜ್ಞರಾಗಿದ್ದರು.

ರಾಜ್ಯ ಪುನರ್ವಿಂಗಡಣಾ ಆಯೋಗವು ಭಾರತ ಗಡಿರಾಜ್ಯದ ಎಲ್ಲಾ ರಾಜ್ಯಗಳು ನಿರ್ಮಾಣವಾದ ಪರಿಸ್ಥಿತಿಯನ್ನು ಪರಿಶೀಲಿಸಬೇಕಾಗಿತ್ತು. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಬೇರೆ ಬೇರೆ ಕಾರಣಗಳಿಂದಾಗಿ ರೂಪುಗೊಂಡ ರಾಜ್ಯಗಳ ಅಸಮತೋಲನೆ– ವಿಫಲತೆ ಇತ್ಯಾದಿಗಳನ್ನು ಗುರುತಿಸಿ, ಕಾಲಕಾಲಕ್ಕೆ ಒಡೆದುಹೋದ ಪ್ರಾಂತಗಳನ್ನು ಸಮರ್ಪಕವಾಗಿ ಪುನರ್ವಿಂಗಡಣೆ ಮಾಡಲು ಆವರೆಗೆ ಆಗಿರುವ ಪ್ರಯತ್ನಗಳನ್ನು ಗುರುತಿಸಿ, ಸ್ವಾತಂತ್ರ್ಯ ನಂತರ ಭಾರತ ಗಡಿರಾಜ್ಯದಲ್ಲಿ ಸೇರ್ಪಡೆಯಾದ ಸಂಸ್ಥಾನಗಳ ಸಮಸ್ಯೆಯನ್ನು ನಿವಾರಿಸಿ, ರಾಜ್ಯಗಳ ಪುನರ್ವಿಂಗಡಣೆ ಬಗೆಗೆ ವರದಿ ನೀಡುವ ಗಂಭೀರ ಜವಾಬ್ದಾರಿ ಆಯೋಗದ್ದಾಗಿತ್ತು. ಎಲ್ಲಾ ಪ್ರಾಂತಗಳ ಐತಿಹಾಸಿಕ ಹಿನ್ನೆಲೆ. ಭಾಷಿಕ ಮತ್ತು ಸಾಂಸ್ಕೃತಿಕ ಸಂಬಂಧ, ಭೌಗೋಳಿಕ ಸಂಲಗ್ನತೆ ಆರ್ಥಿಕ ಸಾಧ್ಯತೆ, ಇತ್ಯಾದಿ ಬಹುಮುಖ ಅಂಶಗಳನ್ನು ಪರಿಗಣಿಸಿ ರಾಜ್ಯಗಳ ಪುನರ್ವಿಂಗಡಣೆ ಆಗಬೇಕಾಗಿತ್ತು, ಎ.ಬಿ.ಸಿ. ಎಂದು ಮೂರು ವರ್ಗಗಳಲ್ಲಿ ಭಾರತೀಯ ಗಣರಾಜ್ಯದ ಪ್ರಾಂತ್ಯಗಳನ್ನು ಗುರುತಿಸುವ ಕಾರ್ಯವಾಗಿತ್ತು.

ಕರ್ನಾಟಕಕ್ಕೆ ಸಂಬಂಧಿಸಿದಂತೆ 'ಎ' ವರ್ಗಕ್ಕೆ ಸೇರಿದ ಮುಂಬಯಿ ಮತ್ತು ಮದ್ರಾಸ್ ಪ್ರಾಂತ್ಯದಲ್ಲಿನ ಕನ್ನಡ ಭಾಗಗಳು, 'ಬಿ' ವರ್ಗಕ್ಕೆ ಸೇರಿದ ಮೈಸೂರು ಸಂಸ್ಥಾನ ಮತ್ತು ಹೈದರಾಬಾದ್ ಸಂಸ್ಥಾನದ ಕನ್ನಡ ಭಾಗಗಳು, 'ಸಿ' ವರ್ಗಕ್ಕೆ ಸೇರಿದ ಸಣ್ಣ ದೇಶೀಯ ಸಂಸ್ಥಾನಗಳು ಇವೆಲ್ಲಾ ಸೇರಿ ಕರ್ನಾಟಕ ರಾಜ್ಯವಾಗಬೇಕಾಗಿತ್ತು. ಇವುಗಳ ಎಲ್ಲಾ ಸಮಸ್ಯೆಗಳನ್ನು ಆಯೋಗವು ಗಮನಕ್ಕೆ ತಂದುಕೊಳ್ಳಬೇಕಾಗಿತ್ತು.

ಫಜಲ್ ಆಲಿ ಆಯೋಗವು ತನ್ನ ಕಾರ್ಯವನ್ನು ಆರಂಭಿಸಿದಾಗ ಮನವಿಗಳ ಮಹಾಪುರವೇ ಹರಿಯಿತು. ೧೯೫೪ರಲ್ಲಿ ಕಲ್ಕತ್ತೆಯಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್‌ನ ೩೯ನೇ ಅಧಿವೇಶನದಲ್ಲಿ ಪ್ರಾಂತೀಯ ಕಾಂಗ್ರೆಸ್ ಸಮಿತಿಗಳು ಫಜಲ್ ಆಯೋಗಕ್ಕೆ ರಾಜ್ಯ ಪುನರ್ವಿಂಗಡಣೆಗೆ ಸಂಬಂಧಿಸಿದಂತೆ ಮನವಿಯನ್ನು ಸಲ್ಲಿಸಿದರು. ಹುಬ್ಬಳ್ಳಿಯಲ್ಲಿ ೦೪.೦೨.೧೯೫೪ರಂದು ಸೇರಿದ ಕೆ.ಪಿ.ಸಿ.ಸಿ.ಯ ಮಹಾಸಭೆಯು ಭಾರತ ಸರ್ಕಾರದ ಮತ್ತು ಕಾಂಗ್ರೆಸ್ ಸಮಿತಿಯ ನಿರ್ಣಯಗಳನ್ನು ಸ್ವಾಗತಿಸಿತು. ೨೯.೦೪.೧೯೪೯ರಂದು ದಾವಣಗೆರೆಯಲ್ಲಿ ನಡೆದ ಅಖಿಲ ಕರ್ನಾಟಕ ಪ್ರತಿನಿಧಿಗಳ ಸಮ್ಮೇಳನದಲ್ಲಿ ಬಿ ಬಸವಲಿಂಗಪ್ಪನವರು ಮಂಡಿಸಿ, ಕೋ ಚೆನ್ನಬಸಪ್ಪನವರು ಅನುಮೋದಿಸಿದ ನಿರ್ಣಯದ ಪ್ರಕಾರ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ಎಲ್ಲಾ ಕನ್ನಡಿಗರ ಪರವಾಗಿ ಸಿದ್ಧವಾಗಿರುವ ಮನವಿಯನ್ನು ರಾಜ್ಯ ಪುನರ್ವಿಂಗಡಣಾ ಆಯೋಗಕ್ಕೆ ಸಲ್ಲಿಸಲು ಕೆ.ಪಿ.ಸಿ.ಸಿ. ವಿರೋಧಿ ಅಧಿವೇಶನವು ಕೆ.ಪಿ.ಸಿ.ಸಿ. ಅಧ್ಯಕ್ಷರಾದ ಎಸ್. ನಿಜಲಿಂಗಪ್ಪನವರಿಗೆ ಅಧಿಕಾರ ನೀಡಿತು.

ಕರ್ನಾಟಕವು ತನ್ನ ಮನವಿಯಲ್ಲಿ ಕರ್ನಾಟಕ ರಾಜ್ಯ ರಚನೆಯ ಬಗ್ಗೆ ಮತ್ತು ಅದಕ್ಕೀಗಿರುವ ಅನ್ಯಾಯದ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಆಯೋಗಕ್ಕೆ ಕೊಟ್ಟಿತು. ಇದರಲ್ಲಿ ಕರ್ನಾಟಕಕ್ಕೆ ಯಾವ ಯಾವ ಭಾಗಗಳು ಸೇರಿಸಿ ಕರ್ನಾಟಕ ರಚಿಸಬೇಕು ಎನ್ನುವುದನ್ನು ಮನವಿಯಲ್ಲಿ ತಿಳಿಸಿದ್ದರು.

ಮನವಿ :

೧೯೫೪ರ ಜೂನ್ ತಿಂಗಳಲ್ಲಿ ರಾಜ್ಯ ಪುನರ್ವಿಂಗಡಣಾ ಆಯೋಗವು ಕರ್ನಾಟಕದಲ್ಲಿ ಪ್ರವಾಸನವನ್ನಾರಂಭಿಸಿ ಸಾಕ್ಷ್ಯಗಳನ್ನು ಸಂಗ್ರಹಿಸಿತು. ಮನವಿಗಳನ್ನು ಸ್ವೀಕರಿಸಿತು. ೦೮.೦೨.೧೯೫೪ರಂದು

ಹುಬ್ಬಳ್ಳಿಯಲ್ಲಿ ನಡೆದ ಪತ್ರಿಕಾ ಪ್ರತಿನಿಧಿಗಳ ಸಮ್ಮೇಳನದಲ್ಲಿ ಮಾತನಾಡಿದ ಕೆ. ಹನುಮಂತಯ್ಯವರು ಕನ್ನಡಿಗರು ಒಂದು ಆಡಳಿತದಲ್ಲಿ ಸೇರುವುದರಿಂದ ರಾಷ್ಟ್ರೀಯ ಐಕ್ಯತೆಗೆ ಯಾವ ರೀತಿಯಲ್ಲಿ ಭಂಗ ಬರುವುದಿಲ್ಲವೆಂದು ತಿಳಿಸಿದರು. ಕರ್ನಾಟಕ ಏಕೀಕರಣದ ವಿಳಂಬಕ್ಕೆ ವಿಷಾದಿಸಿದ ಹನುಮಂತಯ್ಯನವರು ರಾಜ್ಯ ಪುನರ್ವಿಂಗಡಣಾ ಆಯೋಗವು ಮಧ್ಯಂತರ ವರದಿಯೊಂದನ್ನು ಸಲ್ಲಿಸುವುದು ಅವಶ್ಯಕವೆಂದು ಆಶಿಸಿದರು. ಮೈಸೂರು ವಿಧಾನ ಪರಿಷತ್ತಿನಲ್ಲು ಅದೇ ಮಾತುಗಳನ್ನಾಡಿ ಕರ್ನಾಟಕ ಏಕೀಕರಣದ ಅವಶ್ಯಕತೆಯನ್ನು ಪ್ರಬಲವಾಗಿ ಸಮರ್ಥಿಸಿದ ಹನುಮಂತಯ್ಯನವರು ಬಳ್ಳಾರಿಯಲ್ಲಿ ಆಂಧ್ರಪರ ನಿಲುವಿನ ಕೆಲವು ಅಧಿಕಾರಿಗಳ ವರ್ತನೆಯನ್ನು ಖಂಡಿಸಿದರು. ಕೆ.ಪಿ.ಸಿ.ಸಿಯು ರಾಜ್ಯ ಪುನರ್ವಿಂಗಡಣಾ ಆಯೋಗಕ್ಕೆ ಸಲ್ಲಿಸಲು ಸಿದ್ಧಪಡಿಸಿದ್ದ ಮನವಿಯಂತೆಯೇ ಅಖಿಲ ಕರ್ನಾಟಕ ಪ್ರತಿನಿಧಿ ಸಮಾವೇಶವು (ದಾವಣಗೆರೆ) ಮನವಿಯನ್ನು ಸಿದ್ಧಪಡಿಸಿ, ಏಕೀಕೃತ ಕರ್ನಾಟಕದಲ್ಲಿ ಸೇರಬೇಕಾದ ಪ್ರದೇಶಗಳನ್ನು ಗುರುತಿಸಿ ಆಯೋಗಕ್ಕೆ ಕೊಟ್ಟಿತು.

೧೬.೦೬.೧೯೫೪ರಂದು ಫಜಲ್ ಆಲಿ ನೇತೃತ್ವದ ರಾಜ್ಯ ಪುನರ್ವಿಂಗಡಣಾ ಆಯೋಗವು ಹುಬ್ಬಳ್ಳಿಗೆ ಬಂದಾಗ ಉತ್ತರ ಕರ್ನಾಟಕದ ಬಹುತೇಕ ಸಂಘ, ಸಂಸ್ಥೆಗಳು ಮತ್ತು ವ್ಯಕ್ತಿಗಳು, ಆಯೋಗದ ಸದಸ್ಯರನ್ನು ಕಂಡು ಮನವಿಗಳನ್ನು ನೀಡಿದರು. ಬಳ್ಳಾರಿ ಜಿಲ್ಲೆಯ ಪರವಾಗಿ ಕೋ ಚೆನ್ನಬಸಪ್ಪನವರು ಆಯೋಗದ ಸದಸ್ಯರನ್ನು ಕಂಡು ಕರ್ನಾಟಕದಲ್ಲಿ ಸೇರಬೇಕಾದ ಬಳ್ಳಾರಿ ಜಿಲ್ಲೆಯ ನಕ್ಷೆಯನ್ನು ನೀಡಿದಾಗ, ಫಜಲ್ ಅಲಿಯವರು ಗಡಿ ನಿರ್ಧಾರಕ್ಕೆ ಪ್ರತ್ಯೇಕ ಸಮಿತಿಯೊಂದಿದ್ದು ನಕ್ಷೆಯನ್ನು ಅವರಿಗೆ ನೀಡಬಹುದೆಂಬ ಸಲಹೆ ನೀಡಿದರು. ಮನವಿಯನ್ನು ಸಲ್ಲಿಸಿದವರಲ್ಲಿ ಅನೇಕ ಸಂಘ–ಸಂಸ್ಥೆಗಳು ಇದ್ದವು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ, ಕರ್ನಾಟಕ ಏಕೀಕರಣ ಸಂಘ, ಕರ್ನಾಟಕ ಏಕೀಕರಣ ಪಕ್ಷ, ಅ. ಕ. ರಾ. ನಿ. ಪರಿಷತ್ತು, ಕಮ್ಯೂನಿಸ್ಟ್ ಪಕ್ಷ, ಕ್ರಿಶ್ಚಿಯನ್ ಸೆಂಟನರಿ ಆಸೋಸಿಯೇಷನ್ ಸೊಲ್ಲಾಪುರ ಜಿಲ್ಲೆಯ ಪ್ರತಿನಿಧಿಗಳು, ಕಾರವಾರ ಸೆಂಟನರಿ ಜಿಲ್ಲೆಯ ಪ್ರತಿನಿಧಿಗಳು, ಆದವಾನಿ, ಆಲೂರು, ರಾಯದುರ್ಗಗಳ ಪ್ರತಿನಿಧಿಗಳು ಹುಬ್ಬಳ್ಳಿ ವಕೀಲರ ಸಂಘದವರು ಮನವಿಗಳನ್ನು ಸಲ್ಲಿಸಿದರು. ವೈಯಕ್ತಿಕವಾಗಿ ಹ.ರಾ.ಮೊಹರೆ ಗೋಡೆಬೋಲೆ, ಸಿ.ಎಫ್. ಅಂಗಡಿ, ಅ.ಕ.ರಾ.ನಿ ಪರಿಷತ್ತಿನವರು ಏಕೀಕರಣದ ಪರವಾಗಿ ಒಂದೇ ದಿನದಲ್ಲಿ ಸಂಗ್ರಹಿಸಿದ್ದ ೧೦,೦೦೦ ಸಹಿಗಳನ್ನು ಆಯೋಗಕ್ಕೆ ಸಲ್ಲಿಸಿದರು. ರಾಜಶೇಖರಯ್ಯ ಮತ್ತು ಕೊ. ಚೆನ್ನಬಸಪ್ಪ ಬಹಳ ಮುಖ್ಯರಾಗಿದ್ದರು[೧೦].

ಸೆಪ್ಟೆಂಬರ್ ೯ರಂದು ರಾಜ್ಯಪುನರ್ನಿರ್ಮಾಣ ಆಯೋಗದ ಸದಸ್ಯರು ಬಳ್ಳಾರಿಗೆ ಬಂದರು. ಆಲೂರು, ಆದವಾನಿ ಮತ್ತು ರಾಯದುರ್ಗ ತಾಲೂಕುಗಳ ಕನ್ನಡಿಗರ, ಕ್ರಿಶ್ಚಿಯನ್ನರ ಮಂಡಳಿಯೊಂದು ಆಯೋಗಕ್ಕೆ ಮನವಿಯನ್ನು ಸಲ್ಲಿಸಿ, ತಮ್ಮನ್ನು ಕರ್ನಾಟಕಕ್ಕೆ ಸೇರಿಸುವಂತೆ ಕೋರಿದರು. ಆ ಮೂರು ತಾಲೂಕುಗಳ ಸುಮಾರು ೩೦ ಕ್ಕೂ ಹೆಚ್ಚು ಪಂಚಾಯಿತಿ ಬೋರ್ಡ್ ಸದಸ್ಯರ ಪರವಾಗಿ ಬಳ್ಳಾರಿ ವಕೀಲ ಕೋ. ಚೆನ್ನಬಸಪ್ಪನವರು ಮನವಿಯನ್ನು ಸಲ್ಲಿಸಿದರು. ಬಳ್ಳಾರಿಯಲ್ಲೇ ರಾ.ಪು. ಆಯೋಗದ ಸದಸ್ಯರನ್ನು ಭೇಟಿಮಾಡಿದ ಮೈಸೂರು ರಾಜ್ಯದ ಶಾಸಕ ಎ .ಜಿ. ರಾಮಚಂದ್ರರಾವ್ ಮತ್ತು ವ್ಯವಸಾಯ ಮಂತ್ರಿ, ಡಾ॥ ಆರ್. ನಾಗನಗೌಡರು ಕರ್ನಾಟಕ ಏಕೀಕರಣದ ಪರವಾಗಿ ಮನವಿಗಳನ್ನು ಸಲ್ಲಿಸಿದರು. ಅದೇ ಸಂಧರ್ಭದಲ್ಲಿ ಬಳ್ಳಾರಿಯ ಮುಸಲ್ಮಾನ ಜನರ ಪರವಾಗಿ ಅಬ್ದುಲ್ ರಜಾಕ್ ನೇತೃತ್ವದಲ್ಲಿ ೨೦ ಮಂದಿ ಪ್ರತಿನಿಧಿಗಳು ಆಯೋಗದ ಸದಸ್ಯರನ್ನು ಕಂಡು ತಾವು ಮೈಸೂರು ರಾಜ್ಯದಲ್ಲಿ ಸುಖವಾಗಿರುವುದಾಗಿಯೂ, ಅಲ್ಲೇ ಮುಂದುವರಿಯುವುದಾಗಿಯೂ ಕರ್ನಾಟಕವನ್ನು ಒಂದು ಮಾಡಲು ಆಯೋಗವು ಶಿಫಾರಸ್ಸು ಮಾಡಬೇಕೆಂದು ಮನವಿ ಮಾಡಿದರು[೧೧].

ವರದಿ ಸಲ್ಲಿಕೆ :

ರಾಜ್ಯ ಪುನರ್ವಿಂಗಡನಾ ಆಯೋಗವು ಭಾಷಾವಾರು ಪ್ರಾಂತ ರಚನೆಗೆ ಸಂಬಂಧಿಸಿದಂತೆ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿತು. ಕರ್ನಾಟಕಕ್ಕೆ ಸಂಬಂಧಿಸಿದಂತೆ ಹಲವು ಶಿಫಾರಸ್ಸುಗಳನ್ನು ಸೂಚಿಸಿತು. ಅವುಗಳು ಈ ಕೆಳಗಿನಂತಿವೆ.

- ಸಧ್ಯದ ಮೈಸೂರು ರಾಜ್ಯದಲ್ಲಿನ ಬಳ್ಳಾರಿ, ಹೊಸಪೇಟೆ, ಸಿರುಗುಪ್ಪ, ತಾಲೂಕುಗಳು ಮತ್ತು ತುಂಗಭದ್ರಾ ಅಣೆಕಟ್ಟು ಹಾಗೂ ಎಂಜಿನಿಯರಿಂಗ್ ಕಾರ್ಯ ನಡೆಯುತ್ತಿರುವ ಮಲ್ಲಾಪುರಂ ಸಬ್ ತಾಲೂಕು ಇವುಗಳನ್ನು ಬಿಟ್ಟು ಉಳಿದೆಲ್ಲಾ ಮೈಸೂರು ರಾಜ್ಯಕ್ಕೆ ಸೇರತಕ್ಕದ್ದು.

- ಮುಂಬಯಿ ರಾಜ್ಯದ ದಕ್ಷಿಣ ಭಾಗದ ಕನ್ನಡ ಭಾಷೆಯನ್ನಾಡುವ ಜಿಲ್ಲೆಗಳಾದ ಬೆಳಗಾವಿ ಜಿಲ್ಲೆ (ಚಂಡಿಗಡ ತಾಲೂಕು ಬಿಟ್ಟು) ವಿಜಾಪುರ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು.
- ಹೈದರಾಬಾದ್ ರಾಜ್ಯದ ರಾಯಚೂರು ಮತ್ತು ಕಲ್ಬುರ್ಗಿ ಜಿಲ್ಲೆಗಳು
- ಕಾಸರಗೋಡು ತಾಲೂಕನ್ನು ಬಿಟ್ಟು ಉಳಿದ ದಕ್ಷಿಣ ಕನ್ನಡ ಜಿಲ್ಲೆ
- ಮದರಾಸ್ ರಾಜ್ಯದ ಕೊಯಮತ್ತೂರು ಜಿಲ್ಲೆಯ ಕೊಳ್ಳೆಗಾಲ ತಾಲೂಕು ಮತ್ತು ಕೊಡಗು[೧೨].

ಹೀಗೆ ಸೂಚಿತವಾದ ಕರ್ನಾಟಕ ರಾಜ್ಯವು ಪ್ರಧಾನವಾಗಿ ಕನ್ನಡ ಭಾಷಿಕರು ಅಧಿಕವಾಗಿರುವ ಪ್ರದೇಶಗಳನ್ನೇ ಒಳಗೊಂಡಿದ್ದರೂ ಬಳ್ಳಾರಿ ಜಿಲ್ಲೆಯನ್ನು ಆಯೋಗದಲ್ಲಿ ನೀಡಿದ್ದ ವರದಿಯಿಂದ ಅಘಾತ ಉಂಟಾಯಿತು. ಆಯೋಗದಲ್ಲಿ ಬಳ್ಳಾರಿಯೂ ಆಂಧ್ರ ಪ್ರದೇಶಕ್ಕೆ ಸೇರಿಸುವುದಾಗಿ ತಿಳಿಸಿತು. ಅದಕ್ಕೆ ಅನೇಕ ಕಾರಣಗಳನ್ನು ಮಂಡಿಸಿತ್ತು. ಅದು ಮಿಶ್ರರ ದೃಷ್ಟಿಕೋನವನ್ನು ವಿರೋಧವಾಗಿ ಅವರ ತೀರ್ಪಿಗೆ ಭಿನ್ನವಾದ ವಾದವನ್ನು ತಿಳಿಸಿದರು. ಮಿಶ್ರರವರು ಕೇವಲ ಭಾಷೆಯನ್ನೇ ಮೂಲವಾಗಿಸಿದ್ದಾರೆ ಎಂದು ಅವರು ತಿಳಿಸಿದರು. ಇದು ಅಲ್ಲದೇ ಬಹಳ ಮುಖ್ಯವಾಗಿ ತುಂಗಭದ್ರ ಆಣೆಕಟ್ಟನ್ನು ದೃಷ್ಟಿಯಾಗಿಸಿಕೊಂಡು ಫಜಲ್ ಅಭಿಪ್ರಾಯ ಶಿಫಾರಸ್ಸು ಮಾಡಿರುವುದಾಗಿ ತಿಳಿದುಬಂದಿತ್ತು[೧೩]. ಈ ರೀತಿಯಾಗಿ ಆಯೋಗದ ಶಿಫಾರಸ್ಸುಗಳು ಬಳ್ಳಾರಿಯ ವಿರೋಧವಾಗಿ ವರದಿಯಲ್ಲಿ ಇರುವವು.

ಆಯೋಗದ ವರದಿಯಿಂದ ಕನ್ನಡಿಗರಿಗೆ ಅಘಾತವಾಯಿತು. ಕೇವಲ ಎರಡು ವರ್ಷದಹಿಂದೆ ಮೈಸೂರಿಗೆ ಸೇರಿದ್ದ ಬಳ್ಳಾರಿ ಜಿಲ್ಲೆಯ ಪ್ರಮುಖವಾದ ಮೂರು ತಾಲೂಕುಗಳು ಕೈ ತಪ್ಪುವುದಲ್ಲದೆ ಇಡಿಯಾಗಿ ಬಳ್ಳಾರಿ ಜಿಲ್ಲೆ ತಪ್ಪುವುದರಲ್ಲಿತ್ತು. ಇದರಿಂದ ೧೧.೧೦.೧೯೫೫ರಿಂದಲೇ ಬಳ್ಳಾರಿಯಲ್ಲಿ ರಾಜ್ಯ ಪುನರ್‌ವಿಂಗಡಣಾ ಆಯೋಗದ ವರದಿಯ ವಿರುದ್ಧದ ಚಟುವಟಿಕೆಗಳು ಚುರುಕಾಗಿ ಆರಂಭವಾದವು. ಇಡೀ ಜಿಲ್ಲೆಯು ಆಯೋಗದ ತೀರ್ಮಾನವನ್ನು ತಿರಸ್ಕರಿಸಿತು. ಹಳ್ಳಿ ಹಳ್ಳಿಗಳಲ್ಲಿ ಹರತಾಳ, ಸತ್ಯಾಗ್ರಹ ಇತ್ಯಾದಿ ಚಟುವಟಿಕೆಗಳು ಆರಂಭವಾದವು. ೧೬.೧೦.೧೯೫೫ರಂದು ಹುಬ್ಬಳ್ಳಿಯಲ್ಲಿ ಅ. ಕ. ರಾ. ನಿ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸಭೆ ನಡೆದು ಅದರಲ್ಲಿ ನವೆಂಬರ್ ೧೫ ರೊಳಗೆ ಭಾರತ ಸರ್ಕಾರವು ಬಳ್ಳಾರಿಯ ಬಗೆಗೆ ತಾನು ಮಿಶ್ರಾ ವರದಿಯನ್ನೇ ಅಂತಿಮವಾಗಿ ಸ್ವೀಕರಿಸುವುದಾಗಿ ಆಶ್ವಾಸನೆ ನೀಡಬೇಕೆಂದು ಒತ್ತಾಯಿಸಿತು. ಈ ಸಭೆಗೆ ೧೬೦ಕ್ಕೂ ಹೆಚ್ಚು ಜನ ನಾಯಕರು ಆಗಮಿಸಿದ್ದರು. ಬಳ್ಳಾರಿ ಜಿಲ್ಲಾ ಕ್ರಿಯಾ ಸಮಿತಿಯ ಅಧ್ಯಕ್ಷ ಜೆ. ಗಾದಿಲಿಂಗಪ್ಪ ವಿಲೀನ ಪೂರ್ವದ ಬಳ್ಳಾರಿ ಜಿಲ್ಲೆಯನ್ನು ಇಡಿಯಾಗಿ ಕರ್ನಾಟಕದಲ್ಲಿ ಉಳಿಸಲು ಬಳ್ಳಾರಿ ಜನ ಮಾತ್ರವಲ್ಲದೇ ಕನ್ನಡಿಗರೆಲ್ಲರೂ ಎಂಥ ತ್ಯಾಗಕ್ಕಾದರೂ ಸಿದ್ಧರಾಗಬೇಕೆಂದು ಕರೆ ನೀಡಿದರು. ಬಳ್ಳಾರಿ ಜಿಲ್ಲೆಯಾದ್ಯಂತ ಆಯೋಗದ ಸೂಚನೆಗಳ ವಿರುದ್ಧ ಸಭೆಗಳು, ಪ್ರತಿಭಟನೆಗಳು ನಡೆದವು.

ಆಂಧ್ರದಲ್ಲೂ ಕಮ್ಯೂನಿಸ್ಟ್ ಪಕ್ಷದವರು ಬಳ್ಳಾರಿ ಜಿಲ್ಲೆಯು ಆಂಧ್ರಕ್ಕೆ ಸೇರಬೇಕೆಂದು ಕೇಳಲಿಲ್ಲ. ತೆಲಂಗಾಣದ ಕಾಂಗ್ರೆಸ್ ಪಕ್ಷವು ಈಗಾಗಲೇ ತೀರ್ಮಾನಿತವಾಗಿರುವ ಬಳ್ಳಾರಿಯ ಪ್ರಶ್ನೆಯನ್ನು ಮತ್ತೆ ಎತ್ತಬಾರದೆಂದೂ ಅನಂತಪುರ, ಮಡಕಶಿರ ತಾಲೂಕು ಕರ್ನಾಟಕಕ್ಕೆ ಸೇರುವುದು ಸೂಕ್ತವೆಂದು ನಿರ್ಧರಿಸಿತು[೧೪].

ಬಳ್ಳಾರಿ ಜಿಲ್ಲೆಯನ್ನು ಕುರಿತು ಮಿಶ್ರಾ ತೀರ್ಪನ್ನೇ ಒಪ್ಪಿ ಆಶ್ವಾಸನೆ ನೀಡಲು ಕೇಂದ್ರ ಸರ್ಕಾರಕ್ಕೆ ೧೬.೧೦.೧೯೫೫ರವರೆಗೆ ಗಡವು ನೀಡಿದ್ದ ಅ. ಕ. ರಾ. ನಿ. ಪರಿಷತ್ತು ನವೆಂಬರ್ ೧೦ನೇ ತಾರೀಕು ಹಂಪೆಯಲ್ಲಿ ಸಭೆ ಸೇರಿ ಮುಂದೆ ಚಳುವಳಿಯ ವಿಧಾನಗಳನ್ನು ಕುರಿತು ಚರ್ಚಿಸಿತು. ತುಂಗಭದ್ರಾ ಜಲಾಶಯವೇ ಹೊಸದಾಗಿ ಸೃಷ್ಟಿತವಾದ ಸಮಸ್ಯೆಗೆ ಕಾರಣವಾದ್ದರಿಂದ, ತುಂಗಭದ್ರಾ ಬೋರ್ಡಿಗೆ ಮೊದಲೇ ಸೂಚನೆ ನೀಡಿ ಮೈಸೂರು ರಾಜ್ಯದಲ್ಲಿ ಉಳಿಯುವ ಬಳ್ಳಾರಿ ಜಿಲ್ಲೆಯ ಜನರು ಆಜ್ಞೆಯ ಉಲ್ಲಂಘನೆ ಮಾಡಿ ತಮ್ಮ ಪ್ರದೇಶಕ್ಕೆ ನೀರನ್ನು ಬಳಸಿಕೊಳ್ಳುವ ಚಳುವಳಿ ಮಾಡಬೇಕೆಂದು ತೀರ್ಮಾನಿಸಿತು. ಅದೇ ರೀತಿಯಾಗಿ ೧೬.೧೧.೧೯೫೫ರಿಂದ ಅ.ಕ.ರಾ.ನಿ ಪರಿಷತ್ತು ಶಾಂತಿಯುತ ಹಾಗೂ ಅಹಿಂಸಾತ್ಮಕ ವೈಯುಕ್ತಿಕ ಸತ್ಯಾಗ್ರಹವನ್ನು ಆರಂಭಿಸಲು ನಿರ್ಧರಿಸಿತು. ೧೬.೧೧.೧೯೫೩ ಬೆಳಿಗ್ಗೆ ಸರಿಯಾಗಿ ೯.೦೦ ಗಂಟೆಗೆ ಸರಿಯಾಗಿ ಸಿರುಗುಪ್ಪ ತಾಲೂಕು ಕೊಂಚಿಗೇರಿಯಲ್ಲಿ ಯರ್ರಿತಾತ ನೇತೃತ್ವದ ೫೮ ಜನರ ತಂಡವು ನೀರಿನ ಸತ್ಯಾಗ್ರಹವನ್ನು ಆರಂಭಿಸಿತು. ಸತ್ಯಾಗ್ರಹಿಗಳು ನಿರ್ಧಾರಿತ ಸ್ಥಳಕ್ಕೆ ಬಂದು ತಮ್ಮ ಕೊಡಗಳಲ್ಲಿ ಹರಿಯುತ್ತಿದ್ದ ತುಂಗಭದ್ರೆಯ ನೀರನ್ನು ತುಂಬಿಕೊಂಡು ಕಾನೂನನ್ನು ಉಲ್ಲಂಘಿಸಿ ಬಂಧನಕ್ಕೆ ಒಳಗಾದರು. ೧೬.೧೧.೧೯೫೫ರಿಂದ ೩೦.೧೧.೧೯೫೫ರವರೆಗೆ ೧೫ ತಂಡಗಳು

ವಿವಿಧ ನಾಯಕರುಗಳ ನೇತೃತ್ವದಲ್ಲಿ ನೀರಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಬಂಧನಕ್ಕೊಳಗಾದರು. ನೀರಿನ ಸತ್ಯಾಗ್ರಹದ ಪ್ರಥಮ ತಂಡದ ನಾಯಕತ್ವವನ್ನು ಶ್ರೀ ಎಂ. ಸತ್ಯವಂತ ರಾಯರು ವಹಿಸಿದ್ದರು. ನೀರಿನ ಸತ್ಯಾಗ್ರಹ ನಂತರವೂ ಮುಂದುವರಿದು ೦೮.೧೨.೧೯೫೫ರ ವೇಳೆಗೆ ಬಂಧಿತರ ಸಂಖ್ಯೆ ೧೨೦೦ಅನ್ನು ದಾಟಿತು. ಶಿಸ್ತನ್ನು ಪಾಲಿಸುತ್ತಿದ್ದ ನೀರಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡ ಜನರ ಶಿಸ್ತು ಸಂಯಮಗಳು ಎಲ್ಲರಿಗೂ ಮೆಚ್ಚುಗೆಯಾದವು. ಬಡವ-ಬಲ್ಲಿದ ಎಂಬ ಭೇದವಿಲ್ಲದೆ ನೀರಿನ ಸತ್ಯಾಗ್ರಹದಲ್ಲಿ ಬಳ್ಳಾರಿ ಜಿಲ್ಲೆಯ ಜನರು ಪಾಲ್ಗೊಂಡರು.

ಬಳ್ಳಾರಿ ಜಿಲ್ಲೆಯು ಮೈಸೂರಿನಲ್ಲೇ ಉಳಿಯುತ್ತದೆ ಎಂದು ಭಾರತ ಸರ್ಕಾರ ಒಪ್ಪಿಕೊಂಡ ತಕ್ಷಣ ನೀರಿನ ಸತ್ಯಾಗ್ರಹವನ್ನು ನಿಲ್ಲಿಸಲಾಯಿತು. ೧೯೫೬ರ ಜನವರಿ ೪ ಮತ್ತು ೫ ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಉಪ ಸಮಿತಿಯು ದೆಹಲಿಯಲ್ಲಿ ಸಭೆ ಸೇರಿ ರಾಜ್ಯ ಪುನರ್‌ವಿಂಗಡಣಾ 'ಆಯೋಗದ ವರದಿ' ಕಾಂಗ್ರೆಸ್ ಸಮಿತಿ ನೇಮಿಸಿದ್ದ ಉಪ ಸಮಿತಿಯ ವರದಿ ಇತ್ಯಾದಿಗಳನ್ನು ಪರಿಶೀಲಿಸಿ, ಚರ್ಚಿಸಿ ಬಳ್ಳಾರಿ ಜಿಲ್ಲೆಯನ್ನು ಕರ್ನಾಟಕಕ್ಕೆ ಸೇರಿಸಲು ನಿರ್ಧರಿಸಿತು. ಇದಕ್ಕೆ ಮೊದಲು ೧೯೫೫ ಡಿಸೆಂಬರ್ ಮೊದಲ ವಾರದಲ್ಲಿ ಕರ್ನಾಟಕ ರಾಜ್ಯ ರಚನೆಯಾಗಬೇಕೆಂದು ಮೈಸೂರು ವಿಧಾನ ಸಭೆಯು ಗೊತ್ತುವಳಿ ಸ್ವೀಕರಿಸಿದಾಗ ಪರವಾಗಿ ೫೭ ಸದಸ್ಯರು ವಿರುದ್ಧವಾಗಿ ೨ ಮಂದಿ ಮತ ನೀಡಿದರು. ೩೫ ಸದಸ್ಯರು ತಟಸ್ಥರಾಗಿ ಉಳಿದರು. ಅದೇ ತಿಂಗಳು ಮಧ್ಯ ಭಾಗದಲ್ಲಿ ಆಂಧ್ರ, ಕರ್ನಾಟಕ ಮೈಸೂರು ಪ್ರದೇಶಗಳ ನಾಯಕರು ಕಾಂಗ್ರೆಸ್ ನಾಯಕರೊಡನೆ ದೆಹಲಿಯಲ್ಲಿ ರಾಜ್ಯ ಪುನರ್‌ವಿಂಗಡಣಾ ಆಯೋಗದ ವರದಿಯ ಬಗೆಗೆ ಚರ್ಚಿಸಿ, ನಿರ್ಧರಿಸಲು ಸಭೆ ಸೇರಿದರು. ಬಳ್ಳಾರಿ ಜಿಲ್ಲೆಯನ್ನು ಈಗಿರುವಂತೆ ಮೈಸೂರಿನೊಡನೆ ಕರ್ನಾಟಕ್ಕೆ ಸೇರಿಸಲು ಆಂಧ್ರದ ನಾಯಕರು ಒಪ್ಪಿದರು[೧೫].

ಬಳ್ಳಾರಿ ಜಿಲ್ಲೆಯನ್ನು ಮೈಸೂರು ಶಾಸನ ಸಭೆಯಲ್ಲಿ ಪ್ರತಿನಿಧಿಸುತ್ತಿದ್ದ ಮುಂಡ್ಲೂರು ಗಂಗಪ್ಪನವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ನಂತರ ೧೦.೦೬.೧೯೫೬ರಂದು ನಡೆದ ಉಪ ಚುನಾವಣೆಯು ಬಳ್ಳಾರಿಯ ಭವಿಷ್ಯವನ್ನು ನಿರ್ಧರಿಸಲು ಸಹಕಾರಿಯಾಯಿತು. ಆಂಧ್ರದ ಪರವಾಗಿರುವ ತಾವು ಗೆದ್ದರೆ ಬಳ್ಳಾರಿ ಜಿಲ್ಲೆಯು ಆಂಧ್ರಕ್ಕೆ ಸೇರಬೇಕೆಂದೂ, ಸೋತರೆ ಕರ್ನಾಟಕಕ್ಕೆ ಸೇರಬಹುದಾಗಿಯೂ ಎಂ. ಗಂಗಪ್ಪ ಘೋಷಿಸಿದರು. ಆಂಧ್ರ ಪರವಾದಿಗಳೆಲ್ಲಾ ಎಂ.ಗಂಗಪ್ಪನವರನ್ನು ಬೆಂಬಲಿಸಿದರು. ಕರ್ನಾಟಕದ ಪರ ಕಾಂಗ್ರೆಸ್ ಸಮಿತಿಯಾಗಲೀ, ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯಾಗಲೀ, ಕಾಂಗ್ರೆಸ್ ಅಭ್ಯರ್ಥಿಯನ್ನು ಸ್ಪರ್ಧೆಗೆ ನಿಲ್ಲಿಸಲು ಮುಂದಾಗಲಿಲ್ಲ. ಆಗ ಕನ್ನಡಿಗರು ತಮ್ಮ ಪರವಾಗಿ ಹರಗಿನಡೋಣಿ ಸಣ್ಣ ಬಸನವಗೌಡರನ್ನು ಸ್ಪರ್ಧೆಗೆ ನಿಲ್ಲಿಸಿದರು. ಗುಲ್ಬರ್ಗಾದ ಸರ್ದಾರ್ ಶರಣಗೌಡ ಇನಾಂದಾರ್, ಯಜಮಾನ್ ಶಾಂತರುದ್ರಪ್ಪ, ಕೋ.ಚನ್ನಬಸಪ್ಪ ಅಳವಂಡಿ ಶಿವಮೂರ್ತಿ ಸ್ವಾಮಿ ಮುಂತಾದವರು ಕನ್ನಡಪರ ಅಭ್ಯರ್ಥಿಯ ಪರವಾಗಿ ಪ್ರಚಾರ ನಡೆಸಿದರು. ಚುನಾವಣೆಯಲ್ಲಿ ಕನ್ನಡಪರ ಅಭ್ಯರ್ಥಿ ಸಣ್ಣಬಸವನಗೌಡರು ಅಧಿಕ ಬಹುಮತದಿಂದ ಚುನಾಯಿತರಾದರು. ಇದರಿಂದ ಆಂಧ್ರ ಪರ ವಾದಿಗಳು ತಮ್ಮ ವಿರೋಧವನ್ನು ನಿಲ್ಲಿಸಬೇಕಾಯಿತು. ಅ ಮೂಲಕ ಸಮಸ್ತ ಕನ್ನಡಿಗರ ಮಾನವನ್ನಷ್ಟೇ ಅಲ್ಲ ಬಳ್ಳಾರಿಯನ್ನು ರಕ್ಷಿಸಿದರು ಎಂದು ಕಡಿದಾಳ್ ಮಂಜಪ್ಪನವರು ಮೈಸೂರಿನ ಮುಖ್ಯಮಂತ್ರಿಗಳಾದ ಸಂದರ್ಭದಲ್ಲಿ ನುಡಿದಿದ್ದಾರೆ[೧೬].

ಕರ್ನಾಟಕ ಪ್ರಾಂತದಲ್ಲಿ ಬಳ್ಳಾರಿಯನ್ನು ಸೇರಿಸುವುದಕ್ಕೆ ನಡೆದ ಅನೇಕ ಚಳುವಳಿಗಳು ಹಂತ ಹಂತವಾಗಿ ಬೆಳೆದವು. ಕೇಂದ್ರ ಸರ್ಕಾರಕ್ಕೆ ಆಯೋಗದ ಮುಂದೆ ತಮ್ಮ ಮನವಿಗಳನ್ನು ಮಂಡಿಸುತ್ತಾ ಬಂದರು. ತಮ್ಮ ಅಶೋತ್ತರಗಳನ್ನು ನಾಯಕರು ಜನಭಿಪ್ರಾಯದ ಮೂಲಕ ರಾಷ್ಟ್ರೀಯ ನಾಯಕರಿಗೆ ತಿಳಿಸುತ್ತಾ ಅನೇಕ ಎಡರು ತೊಡರುಗಳನ್ನು ಎದುರಿಸಿದರು. ಬಳ್ಳಾರಿಯನ್ನು ಆಂಧ್ರಕ್ಕೆ ಹೋಗದಂತೆ ಎರಡು ಭಾರಿ ಬೃಹತ್ ರೂಪದಲ್ಲಿ ಚಳುವಳಿಯನ್ನು ನಡೆಸುವುದರ ಮೂಲಕ ಬಳ್ಳಾರಿಯು ಕರ್ನಾಟಕದಲ್ಲಿ ಉಳಿಯುವಂತಾಯಿತು. ಕರ್ನಾಟಕ ಏಕೀಕರಣದಲ್ಲಿ ಮೊದಲ ಹೆಜ್ಜೆಯಾಗಿ ಮೊದಲ ಹಂತವಾಗಿ ಅದು ಉಳಿಯಿತು.

ಅಡಿ ಟಿಪ್ಪಣಿ :

೧. ಡಾ.ಎಚ್.ಎಸ್. ಗೋಪಾಲ ರಾವ್, ಕರ್ನಾಟಕ ಏಕೀಕರಣ ಇತಿಹಾಸ, ಪುಟ–೫೩.

೨. ಅದೇ, ಪುಟ–೫೩.

೩. ಅದೇ, ಪುಟ–೫೭

೪. ಅದೇ, ಪುಟ–೧೬೫.

೫. ಅದೇ, ಪುಟ–೨೯೫

೬. ಅದೇ, ಪುಟ ೧೯೨.

೭. ಅದೇ, ಪುಟ ೨೦೦.

೮. ವೆಲ್ ಕಮ್ ಟು ಬಳ್ಳಾರಿ. ಪುಟ.೯೦.

೯. ಅದೇ, ಪುಟ ೨೧೧.

೧೦. ಅದೇ, ಪುಟ ೨೨೬.

೧೧. ಅದೇ, ೨೨೮.

೧೨. ರಂ.ರಾ ದಿವಾಕರ, ಕರ್ನಾಟಕ ಏಕೀಕರಣ ಕಥೆ ಪುಟ ೧೩೭

೧೩. ಅದೇ, ಪುಟ ೧೩೯.

೧೪. ಅದೇ, ಪುಟ ೨೩೩

೧೫. ಅದೇ, ಪುಟ ೨೩೫

೧೬. ಅದೇ, ಪುಟ ೨೩೬

೪

ಬಳ್ಳಾರಿ ಜಿಲ್ಲೆಯಲ್ಲಿ ಏಕೀಕರಣಕ್ಕೆ ದುಡಿದ ಮಹನೀಯರು

೪. ೧ ಶ್ರೀ ಅಳವಂಡಿ ಶಿವಮೂರ್ತಿ ಸ್ವಾಮಿ
೪. ೨ ಶ್ರೀ ಮಹಾದೇವಪ್ಪ ಪಟ್ಟಣ
೪. ೩ ಶ್ರೀ ಹಿರೇಹಾಳ್ ಇಬ್ರಾಂಹಿಮ್ ಸಾಹೇಬ್
೪. ೪ ಶ್ರೀ ಸಿ. ಎಂ. ರೇವಣಸಿದ್ದಯ್ಯ
೪. ೫ ಡಾ. ಎ. ಎಂ. ರಾಜಶೇಖರಯ್ಯ
೪. ೬ ಶ್ರೀ ಕೊ. ಚನ್ನಬಸಪ್ಪ
೪. ೭ ಶ್ರೀ ಪಿಂಜಾರ ರಂಜಾನ್ ಸಾಹೇಬ್
೪. ೮. ಶ್ರೀ ವೈ. ಮಹಾಬಲೇಶ್ವರಪ್ಪ
೪. ೯ ಶ್ರೀ ಅಬ್ದುಲ್ ರಜಾಕ್ ಸಾಹೇಬ್

೪. ೧ ಶ್ರೀ ಅಳವಂಡಿ ಶಿವಮೂರ್ತಿ ಸ್ವಾಮಿ

ಕರ್ನಾಟಕ ಏಕೀಕರಣದ ಚಳುವಳಿಯಲ್ಲಿ ಭಾಗವಹಿಸಿ ಇದರ ಕಾರ್ಯಗಳನ್ನು ಸಕ್ರಿಯವಾಗಿ ನಡೆಸಿಕೊಂಡು ಬಂದವರಲ್ಲಿ ಅಗ್ರ ಗಣ್ಯರಾದವರು ಶ್ರೀ ಅಳವಂಡಿ ಶಿವಮೂರ್ತಿ ಸ್ವಾಮಿ. ಇವರು ಕೊಪ್ಪಳ ತಾಲೂಕಿನ ಅಳವಂಡಿ ಗ್ರಾಮದ ಶ್ರೀ ಸಿದ್ದಪ್ಪಯ್ಯ ಹಾಗೂ ವೀರಮ್ಮ ದಂಪತಿಗಳ ಮಗನಾಗಿ ದಿನಾಂಕ ೨೮, ಜೂನ್ ೧೯೨೨ ರಂದು ಜನಿಸಿದರು. ನೆಹರೂರವರಿಂದ "ಕರ್ನಾಟಕದ ಹುಲಿ" ಯೆಂದು ಹೊಗಳಿಸಿಕೊಂಡ ಈ ಹೋರಾಟಗಾರನ ವಿದ್ಯಾಭ್ಯಾಸ, ಅಳವಂಡಿ, ಅಬ್ಬಿಗೇರಿ, ಹುಬ್ಬಳ್ಳಿ, ಗುಲ್ಬರ್ಗಾ ಹಾಗೂ ಹೈದರಾಬಾದ್‌ನಲ್ಲಿ ನಡೆಯಿತು.

ಕರ್ನಾಟಕದ ಏಕೀಕರಣ ಚಳುವಳಿಯಲ್ಲಿ ೧೯೫೩-೫೪ರಲ್ಲಿ ಶ್ರೀ ಕೆ.ಆರ್. ಕಾರಂತರ ಅಧ್ಯಕ್ಷತೆಯಲ್ಲಿ "ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು" ಧಾರವಾಡದಲ್ಲಿ ಏರ್ಪಡಿಸಲಾಗಿತು ಇದರ ಉಪಾಧ್ಯಕ್ಷರ ಸ್ಥಾನ ಶಿವಮೂರ್ತಿ ಸ್ವಾಮಿಗಳು ವಹಿಸಿಕೊಂಡಿದ್ದರು. ಅಖಂಡ ಕರ್ನಾಟಕದ ಏಕೀಕರಣದ ಚಳುವಳಿಯ ರೂಪರೇಷಗಳನ್ನು ಸಿದ್ದಪಡಿಸಿ ಅದನ್ನು ಕಾರ್ಯರೂಪಕ್ಕೆ ಬರುವಂತೆ ಮಾಡಿದರು.

೧೯೫೨ ರಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆದವು, ಮುಂದೆ ೧-೧-೧೯೫೩ರಲ್ಲಿ ಮದ್ರಾಸ್ ಪ್ರಾಂತ್ಯದಿಂದ ಹಳೇ ಮೈಸೂರು ಪ್ರಾಂತಕ್ಕೆ ಅಂದರೆ ಕರ್ಣಾಟಕಕ್ಕೆ ಬಳ್ಳಾರಿಯನ್ನು ಸೇರಿಸಲು ಕೇಂದ್ರ ಸರ್ಕಾರವು ಘೋಷಣೆ ಮಾಡಿತು. ಆಗ ಆಂಧ್ರಾಭಿಮಾನಿಯಾದ ಮತ್ತು ಈ ಭಾಗದ ಶಾಸಕರಾದ ಶ್ರೀ ಮುಂಡ್ಲೂರು ಗಂಗಪ್ಪನವರು ನಾನು ತೆಲುಗರ ಮತಗಳಿಂದ ಗೆದ್ದಿದ್ದೇನೆ, ಬಳ್ಳಾರಿ ಕರ್ನಾಟಕದಲ್ಲಿ ಇರುವುದು ನನಗೆ ಸಂತಸ ತಂದಿಲ್ಲ, ಅದಕ್ಕೆ ಮತ್ತೊಮ್ಮೆ ಚುನಾವಣೆಗೆ ಸ್ಪರ್ಧಿಸಿ ನಾನು ಗೆದ್ದು ಬರುವೆ ಎಂದು ಘೋಷಿಸಿ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ಇಲ್ಲಿ ತೆರವಾದ ಸ್ಥಾನಕ್ಕೆ ಬಳ್ಳಾರಿ ತಾಲ್ಲೂಕಿಗೆ ೧೯೫೬ರಲ್ಲಿ ಉಪ ಚುನಾವಣೆ ಘೋಷಣೆಯಾಯಿತು. ಆಗ ಮುಂಡ್ಲೂರು ಗಂಗಪ್ಪನವರ ವಿರುದ್ಧವಾಗಿ ಆನೆ ಗುರುತಿನೊಂದಿಗೆ ಹರಗಿನದೋಣಿ ಸಣ್ಣಬಸವನಗೌಡರು ಸ್ಪರ್ಧಿಸಿದರು. ಇದು ಬಳ್ಳಾರಿ, ಕರ್ನಾಟಕದ ಸ್ವಾಭಿಮಾನದ ಚುನಾವಣೆಯಾಗಿತ್ತು. ಬೆಂಕಿಯಂಥ ಭಾಷಣದ ಸಿಡಿಮಳೆಗೆ ಹೆಸರಾದ, ಸಿಂಹ ಘರ್ಜನೆಯ ಶ್ರೀ ಅಳವಂಡಿ ಶಿವಮೂರ್ತಿ ಸ್ವಾಮಿಗಳು ಚುನಾವಣೆಯ ಸಮಯದಲ್ಲಿ ಬಳ್ಳಾರಿಗೆ ಸಹಾಯಕರಾಗಿ ಬಂದು ನಿಂತರು. ಹಳ್ಳಿ ಹಳ್ಳಿಗೆ ತಿರುಗಾಡಿ ತಮ್ಮ ಭಾಷಣದಿಂದ ಜನರನ್ನು ಜಾಗೃತಗೊಳಿಸಿದರು. ಬಳ್ಳಾರಿಯ ಸಾಂಬಮೂರ್ತಿ ಮೈದಾನದಲ್ಲಿ ಅವರು ಮಾಡಿದ ಭಾಷಣ ಅದನ್ನು ಕೇಳಿದ ಜನಗಳಿಗೆ ಇಂದಿಗೂ ಮೈನವಿರೇಳಿಸುತ್ತದೆ. ಈ ಚುನಾವಣೆಯ ನಿರ್ಣಾಯಕ ಗೆಲುವಿನ ಹಿಂದಿನ ಬೆನ್ನುಲುಬಾಗಿ ಶ್ರೀ ಶಿವಮೂರ್ತಿ ಸ್ವಾಮಿಗಳು ಇದ್ದರು.

೧೯೫೬-೫೭ರಲ್ಲಿ ಕರ್ನಾಟಕ ಪ್ರಾಂತ ಘೋಷಿಸಿದಾಗ ಬಳ್ಳಾರಿ ನಗರ ಮತ್ತು ತುಂಗಭದ್ರಾ ಅಣೆಕಟ್ಟಿನ ಪ್ರದೇಶವನ್ನು ಆಂಧ್ರಕ್ಕೆ ಸೇರಿಸಲಾಗಿತ್ತು. ಫಜಲ್ ಅಲಿ ಸಮಿತಿ ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸಿ ಎಂದರು. ಆದು ಈ ಭಾಗದ ಜನರ ಕೆಂಗಣ್ಣಿಗೆ ಗುರಿಯಾಗಿತ್ತು. ಇದಕ್ಕೆ ವಿರುದ್ಧವಾಗಿ ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ ಹಂಪಿಯಲ್ಲಿ ನಡೆದ ಎರಡನೇ ಅಧಿವೇಶನದಲ್ಲಿ ಅಳವಂಡಿಯವರು ಅಧ್ಯಕ್ಷರಾಗಿ ಆಯ್ಕೆಯಾದರು. ಬಳ್ಳಾರಿ ಉಳಿಸುವ ಚಳುವಳಿ ಅಳವಂಡಿ ನೇತೃತ್ವದಲ್ಲಿ ನಡೆಯಿತು.

ತುಂಗಭದ್ರಾ ಅಣೆಕಟ್ಟೆಯಿಂದ ನೀರನ್ನು ಆಂಧ್ರಕ್ಕೆ ಬಿಡದಂತೆ ಆಗ್ರಹಿಸಿ ಸತ್ಯಾಗ್ರಹ ಪ್ರಾರಂಭವಾಯಿತು. ಬಳ್ಳಾರಿ ಜೈಲಿನಲ್ಲಿ ೧೨೦೦ ಜನರನ್ನು ಬಂಧನದಲ್ಲಿಟ್ಟಾಗ ಅಂದಿನ ಗೃಹಸಚಿವ ಡಿ.ಕೆ.ಸಿ. ಪಂತ್‌ರವರ ಜೊತೆ ಶಿವಮೂರ್ತಿ ಸ್ವಾಮಿ ಚರ್ಚಿಸಿದ ನಂತರ, ಆಯೋಗ ನೇಮಿಸುವ ಭರವಸೆ ನೀಡಲಾಯಿತು. ಉಚ್ಚ ನ್ಯಾಯಾಲಯದ ನ್ಯಾಯಾಧೀಶ ಮಿಶ್ರಾ ಅವರ ನೇತೃತ್ವದ ಆಯೋಗ ಜನಾಭಿಪ್ರಾಯದ ವರದಿ ಸಲ್ಲಿಸಿತು.

ಬಳ್ಳಾರಿ ಮತ್ತು ತುಂಗಭದ್ರ ಅಣೆಕಟ್ಟಿನ ಪ್ರದೇಶವನ್ನು ಕರ್ನಾಟಕದಲ್ಲಿಯೇ ಉಳಿಸಬೇಕೆಂಬ ನಿರ್ಣಯಕ್ಕೆ ಜಯ ದೊರೆಯಿತು. ಈ ಕಾರ್ಯದಲ್ಲಿ ಅಳವಂಡಿ ಶಿವಮೂರ್ತಿ ಸ್ವಾಮಿಯವರು ನಿರ್ಣಾಯಕ ಮತ್ತು ಮಹತ್ವವಾದ ಪಾತ್ರ ವಹಿಸಿದ್ದಾರೆ.

೪. ೨ ಶ್ರೀ ಮಹಾದೇವಪ್ಪ ಪಟ್ಟಣ

ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಭಾಗವಹಿಸಿದವರಲ್ಲಿ, ಶ್ರೀ ಮಹಾದೇವಪ್ಪ ಪಟ್ಟಣನವರು ಮೊದಲಿಗರಾಗಿದ್ದಾರೆ. ಮಹಾದೇವಪ್ಪನವರು ಶಿವಬಸಪ್ಪ ಪಟ್ಟಣ ಮತ್ತು ಸಾವಂತ್ರವ್ವ ಪಟ್ಟಣ. ದಂಪತಿಗಳಿಗೆ ದಿನಾಂಕ ೨೬-೦೯-೧೯೧೧ ರಂದು ಜನಿಸಿದರು. ಅವರು ಶ್ರೀಮಂತರಾಗಿದ್ದರೂ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡು ಬ್ರಿಟಿಷರಿಗೆ ಸಿಂಹಸ್ವಪ್ನರಾಗಿದ್ದರು.

ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ದೇಶದ ಮುಖಂಡರೆಲ್ಲಾ ಸೇರಿ ದೇಶವನ್ನು ಭಾಷಾವಾರು ಪ್ರಾಂತವಾಗಿ ವಿಂಗಡಿಸುವ ಬೇಡಿಕೆಯನ್ನು ಮುಂದಿಟ್ಟರು, ಪ್ರಧಾನಮಂತ್ರಿಗಳು, ಗೃಹ ಮಂತ್ರಿಗಳು ಒಪ್ಪದಿದ್ದಾಗ ನಾಗಪುರದಲ್ಲಿ ಶರತ್‌ಚಂದ್ರ ಬೋಸರ ನೇತೃತ್ವದಲ್ಲಿ ಸಭೆ ಸೇರಿ ಭಾಷಾವಾರು ಪ್ರಾಂತ ರಚಿಸುವವರೆಗೆ ಅಸಹಕಾರ ಚಳುವಳಿ ನಡೆಸಲು ತೀರ್ಮಾನಿಸಲಾಯಿತು. ಆ ಸಭೆಗೆ ಮಹಾದೇವಪ್ಪ ಪಟ್ಟಣರವರು, ಶ್ರೀ ಅಳವಂಡಿ ಶಿವಮೂರ್ತಿ ಸ್ವಾಮಿಗಳ ಜೊತೆಗೂಡಿ ಭಾಗವಹಿಸಿ. ಕರ್ನಾಟಕಕ್ಕೆ ಹಿಂತಿರುಗಿ ಇಲ್ಲಿಯ ಜನತೆಯಲ್ಲಿ ಭಾಷಾವಾರು ಪ್ರಾಂತದ ಬಗ್ಗೆಯೂ ಪ್ರಚಾರ ಮಾಡಲಾರಂಭಿಸಿದರು.

ಸ್ವಾತಂತ್ರ್ಯ ನಂತರ ಮಹಾದೇವಪ್ಪರವರು ರಾಮದುರ್ಗದಲ್ಲಿ ನೆಲೆಸಿದರಾದರೂ ಬಳ್ಳಾರಿ ಜನತೆ ಅವರನ್ನು ಬಳ್ಳಾರಿಗೆ ಮರಳುವಂತೆ ಒತ್ತಾಯಿಸಿದರು, ಜನಾಗ್ರಹದ ಮೇಲೆ ಮಹಾದೇವಪ್ಪನವರು ಬಳ್ಳಾರಿಗೆ ಬಂದು ಉಪಜೀವನಕ್ಕೆ ಜವಳಿ ವ್ಯಾಪಾರ ಆರಂಭಿಸಿದರು. ಇದೇ ಸಂದರ್ಭದಲ್ಲಿ ಲೋಕಸಭಾ ಸದಸ್ಯೆ ದುರ್ಗಾದೇವಿ ಅವರು ತುಂಗಭದ್ರಾ ನೀರಿನ ಸಲುವಾಗಿ ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸಬೇಕೆಂದು ಕೇಂದ್ರದ ಮೇಲೆ ಒತ್ತಡ ತಂದಾಗ ಮತ್ತೆ ಮಹಾದೇವಪ್ಪನವರು ಚಳುವಳಿಯನ್ನು ಆರಂಭಿಸಿದರು. ಜೋಳದರಾಶಿ ದೊಡ್ಡನಗೌಡರು, ದಕ್ಷಿಣಾಮೂರ್ತಿ ವಕೀಲರು, ಪಂಪನಗೌಡ ವಕೀಲರು ಮರುಳಸಿದ್ದಯ್ಯ, ಬೀಚಿ, ಕೋ.ಚೆನ್ನಬಸಪ್ಪ, ಯಜಮಾನ ಶಾಂತರುದ್ರಪ್ಪ, ಕಾಶಿ ವಿಶ್ವನಾಥ ವಕೀಲರು ಸಿಂದಗಿ ಸಿದ್ದಬಸಪ್ಪ ಇವರೆಲ್ಲರನ್ನು ಸೇರಿಸಿಕೊಂಡು ಚಳುವಳಿಯನ್ನು ಪ್ರಾರಂಭಿಸಿದರು.

ಆಂಧ್ರ ಪರಿಷತ್ತಿನವರು ಮದ್ರಾಸ್ ಗವರ್ನರ್ ಸೆಕ್ರೆಟರಿ ಶ್ರೀ ಸೊಂಟಿ ರಾಮಮೂರ್ತಿ, ಶ್ರೀ ಗುಡುದೂರು ತಿಮ್ಮಪ್ಪನವರ ನೇತೃತ್ವದಲ್ಲಿ ಸಾವಿರಾರು ಪೊಲೀಸರ ಸರ್ಪಗಾವಲಿನಲ್ಲಿ ಸಭೆ ನಡೆಸಲು ನಿರ್ಧರಿಸಿದಾಗ ಬಳ್ಳಾರಿಯ ಕನ್ನಡ ಜನತೆ ಈ ಸಭೆಯನ್ನು ನಡೆಸದಂತೆ ಹರತಾಳ ನಡೆಸಿ ಯಶಸ್ವಿಯಾದರು. ಈ ಹರತಾಳದಲ್ಲಿ ಮಹಾದೇವಪ್ಪನವರ ಪಾತ್ರ ಮಹತ್ವದಾಗಿತ್ತು.

ಬಳ್ಳಾರಿಯಲ್ಲಿ ಜರುಗಿದ ನಿರ್ಣಾಯಕ ಚುನಾವಣೆಯಲ್ಲಿ ಬಳ್ಳಾರಿಯನ್ನು ಕರ್ನಾಟಕಕ್ಕೆ ಸೇರಿಸುವ ಬೇಡಿಕೆಯೊಂದಿಗೆ ಸ್ಪರ್ಧಿಸಿದ್ದ ಹರಗಿನಡೋಣಿ ಸಣ್ಣಬಸವನ ಗೌಡರ ಪರವಾಗಿ ಪ್ರಚಾರ ಕೈಗೊಂಡು ಕನ್ನಡಕ್ಕೆ ಜಯ ತಂದು ಕೊಟ್ಟವರಲ್ಲಿ ಮಹಾದೇವನವರು ಒಬ್ಬರಾಗಿದ್ದಾರೆ.

ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸಕೂಡದೆಂದು ಹಂಪಿಯಲ್ಲಿ ಜರುಗಿದ ಸಭೆಯಲ್ಲಿ ಸರಕಾರದ ವಿರುದ್ಧ ಅಸಹಕಾರ ಚಳುವಳಿ ನಡೆಸಲು ನಿರ್ಣಯಿಸಲಾಯಿತು, ಅಳವಂಡಿ ಶಿವಮೂರ್ತಿ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲೂ ಪಟ್ಟಣನವರು ಹಾಜರಿದ್ದರು, ಅಷ್ಟೆ ಅಲ್ಲ, ಸಭೆಗೆ ಎಲ್ಲರನ್ನೂ ಗೌರವವಾಗಿ ಬರಮಾಡಿಕೊಂಡಿದ್ದರು. ಆಗ ಸಭೆಯಲ್ಲಿ ಅನೇಕ ತಂಡಗಳನ್ನು ರಚಿಸಿ ಆಂಧ್ರಕ್ಕೆ ನೀರು ಬಿಡದೇ ಕಾಲುವೆ ಧ್ವಂಸಗೊಳಿಸುವ ಚಳುವಳಿ ನಡೆಸಲು ನಿರ್ಣಯಿಸಲಾಯಿತು. ಈ ಪ್ರಕಾರ ಚಳುವಳಿ ಜರುಗಿಸಲಾಯಿತು. ಕೊನೆಗೆ ೧೯೫೬ರ ಚುನಾವಣೆಯ ನಿರ್ಣಯದಂತೆ ಬಳ್ಳಾರಿಯನ್ನು ಕರ್ನಾಟಕದಲ್ಲಿ ಉಳಿಸಲಾಯಿತು. ಕ್ರಾಂತಿವೀರ ಮಹಾದೇವಪಟ್ಟಣ ಇವರ ಹೋರಾಟಕ್ಕೆ ಜಯದೊರೆಯಿತು.

ಬೆಳಗಾವಿ ಜಿಲ್ಲೆ ಜನ್ಮ ಭೂಮಿಯಾದರೂ, ಬಳ್ಳಾರಿ ಜಿಲ್ಲೆಯನ್ನು ಕರ್ಮಭೂಮಿಯಾಗಿಸಿಕೊಂಡು ಅವರು ನಾಡಿಗೆ ನೀಡಿದ ಸೇವೆಯು ಅಗ್ರಗಣ್ಯವಾಗಿದೆ.

೪. ೩ ಶ್ರೀ ಹಿರೇಹಾಳ್ ಇಬ್ರಾಹಿಂ ಸಾಹೇಬ್

ಶ್ರೀ ಇಬ್ರಾಹಿಂ ಸಾಹೇಬರು, ಶ್ರೀ ಪಿಂಜಾರ್ ಹುಸೇನ್ ಸಾಹೇಬ್, ಶ್ರೀಮತಿ ಬುಡೇನ್ ಬೀ ದಂಪತಿಗಳ ಸಂಜಾತರಾಗಿ ದಿನಾಂಕ ೧೨.೫.೧೯೩೧ರಂದು ಈಗಿನ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ದಂಡಿನ ಹಿರೇಹಾಳ್‌ನಲ್ಲಿ ಜನಿಸಿದರು. ಈ ಜಿಲ್ಲೆ ಆಗಲೂ ಮತ್ತು ಈಗಲೂ ಅಚ್ಚ ಕನ್ನಡ ಗ್ರಾಮ. ಇವರು ಇಂಟರ್ ಮೀಡಿಯೇಟ್‌ವರೆಗೆ ವಿದ್ಯಾಭ್ಯಾಸ ಮಾಡಿ, ವೃತ್ತಿಯಲ್ಲಿ ಕೈಗಾರಿಕೋದ್ಯಮಿ ಹಾಗೂ ಪ್ರಗತಿಪರ ರೈತರು ಕೂಡ ಆಗಿದ್ದಾರೆ. ಶಿವಮೊಗ್ಗದಲ್ಲಿ ವಾಸಿಸುತ್ತಿದ್ದರು ನಾಡಿನೆಲ್ಲೆಡೆ ಒಡನಾಟ ಹೊಂದಿದ್ದು, ವಿಶೇಷವಾಗಿ ಅವರ ಹುಟ್ಟೂರಿಗೆ ಹೊಂದಿಕೊಂಡ ಬಳ್ಳಾರಿ ಜಿಲ್ಲೆಯನ್ನು ಇಂದಿಗೂ ಬಹುವಾಗಿ ಹಚ್ಚಿಕೊಂಡಿದ್ದಾರೆ. ಇವರು ಕರ್ನಾಟಕ ರಾಜ್ಯ ಪಿಂಜಾರ್ ಸಂಘದ ರಾಜ್ಯಾಧ್ಯಕ್ಷರೂ ಹೌದು, ಅಲ್ಲದೆ ಭಾರತದಲ್ಲಿರುವ ಸರ್ವಧರ್ಮಗಳನ್ನು ಪ್ರೀತಿಸುವ, ಅಪ್ಪಿಕೊಳ್ಳುವ, ಗೌರವಿಸುವ ಸೌಜನ್ಯ ಮೂರ್ತಿಯಾಗಿದ್ದಾರೆ. ರಾಜ್ಯದ ವಿವಿಧ ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಕಳಕಳಿಯ ಸಂಘ ಸಂಸ್ಥೆಗಳ ಜೊತೆ ಒಡನಾಡ ಹೊಂದಿದವರಾಗಿದ್ದಾರೆ.

ಫಜಲ್ ಆಲಿ ಹಾಗೂ ವಾಂಛೂ ಆಯೋಗಗಳು ೧೯೫೩ ಆಸುಪಾಸಿನಲ್ಲಿ ಸಲ್ಲಿಸಿದ ವರದಿಗಳಲ್ಲಿ ಬಳ್ಳಾರಿ ಜಿಲ್ಲೆಯ ಕನ್ನಡ ಪ್ರದೇಶಗಳಾದ ಆಲೂರು, ಆದವಾನಿ, ರಾಯದುರ್ಗ ತಾಲ್ಲೂಕುಗಳನ್ನು ಆಂಧ್ರದಲ್ಲಿ ಸೇರಿಸಲು ಶಿಫಾರಸ್ಸು ಮಾಡಿದಾಗ, ಜನರು ಆಕ್ರೋಶಗೊಂಡು ಉಗ್ರ ಹೋರಾಟಕ್ಕೆ ಅಣಿಯಾದರು. ಆಗ ಅವರನ್ನೆಲ್ಲ ಸಂಘಟಿಸಿ ಈ ಮೂರು ತಾಲ್ಲೂಕುಗಳ ಹೋರಾಟ ಸಮಿತಿ ಅಧ್ಯಕ್ಷರಾಗಿದ್ದ ಈಗಿನ ಕರ್ನೂಲ್ ಜಿಲ್ಲೆಯ ಎಮ್ಮಿಗನೂರಿನ ಗಾದಿಲಿಂಗನಗೌಡ, ಉಪಾಧ್ಯಕ್ಷ ಬದನೆಹಾಳು ರಂಗನಗೌಡರ ನೇತೃತ್ವದಲ್ಲಿ ಇಬ್ರಾಹಿಂ ಸಾಹೇಬರು ಜನರನ್ನು ಸಂಘಟಿಸಿ ವಿವಿಧ ಹಂತಗಳ ಹೋರಾಟಕ್ಕೆ ಅಣಿಗೊಳಿಸಲು ಶ್ರಮಿಸಿದರು. ಅಷ್ಟೇ ಅಲ್ಲ, ಫಜಲ್ ಆಲಿ ಆಯೋಗ ಬಳ್ಳಾರಿಯ ಭವಿಷ್ಯವನ್ನು ನಿರ್ಧರಿಸದೆ ಅತಂತ್ರ ಸ್ಥಿತಿಯಲ್ಲಿಟ್ಟಿದ್ದು, ಬಳ್ಳಾರಿ ಜಿಲ್ಲೆಯಾದ್ಯಂತ ವ್ಯಾಪಕ ಚಳುವಳಿಗೆ ನಾಂದಿ ಹಾಡಿತು. ಈ ಅಪಾಯಕಾರಿ ಬೆಳವಣಿಗೆಯ ಅನಾಹುತ ಊಹಿಸಿ ಶ್ರೀಯುತರುಗಳಾದ ಅಳವಂಡಿ ಶಿವಮೂರ್ತಿ ಸ್ವಾಮಿ, ಕೋ. ಚನ್ನಬಸಪ್ಪ, ಯಜಮಾನ್ ಶಾಂತರುದ್ರಪ್ಪ, ಸತ್ಯವಂತರಾವ್ ಮಲೆಬೆನ್ನೂರು ಮುಂತಾದವರ ನೇತೃತ್ವದಲ್ಲಿ ಸಂಘಟಿತವಾದ ಚಳುವಳಿಗೆ ಯುವಕರಾಗಿದ್ದ ಇಬ್ರಾಹಿಂ ಸಾಹೇಬ್ ಪಿಂಜಾರ್ ಸಮಾಜದವರನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದೂ ಅಲ್ಲದೆ ಚಳುವಳಿಯಲ್ಲೂ ತೊಡಗಿದರು. ವಿವಿಧ ಸಮಿತಿಗಳ ಮುಂದೆ ಪಿಂಜಾರ ಜನಾಂಗ ಕನ್ನಡಿಗರು ಎಂದು ಬಿಂಬಿಸಿದ್ದಾರೆ.

೪. ೪ ಶ್ರೀ ಸಿ.ಎಂ. ರೇವಣಸಿದ್ದಯ್ಯ

ಕರ್ನಾಟಕ ಏಕೀಕರಣದಲ್ಲಿ ದುಡಿದಂತಹ ವ್ಯಕ್ತಿಗಳಲ್ಲಿ ಶ್ರೀ ಸಿ.ಎಂ. ರೇವಣಸಿದ್ದಯ್ಯನವರು ಒಬ್ಬರಾಗಿದ್ದಾರೆ. ಶ್ರೀಯುತರು ಸಿರುಗುಪ್ಪ ತಾ॥ ಸಿರಿಗೇರಿ ಗ್ರಾಮದ ಶ್ರೀ ಪಿ.ಎಂ. ಕುಮಾರಯ್ಯ ಸ್ವಾಮಿ, ಶ್ರೀಮತಿ ಶಾಂತವೀರಮ್ಮನವರ ಜೇಷ್ಠಪುತ್ರರಾಗಿ ಜನಿಸಿದರು. ಬಳ್ಳಾರಿ ವೀರಶೈವ ಕಾಲೇಜಿನ ಇಂಟರ್ ಮೀಡಿಯಟ್ ವಿದ್ಯಾರ್ಥಿಯಾಗಿ ಮೊದಲ ಬ್ಯಾಚಿನಲ್ಲಿ ಅಭ್ಯಾಸಮಾಡಿದವರು. ನಂತರದಲ್ಲಿ ಸಿರುಗುಪ್ಪ ತಹಶೀಲ್ದಾರ ಕಛೇರಿಯಲ್ಲಿ ಗುಮಾಸ್ತರಾಗಿ ನೌಕರಿ ದೊರೆತದ್ದರಿಂದ ಅಭ್ಯಾಸ ಮೊಟಕುಗೊಳಿಸಿ ನೌಕರಿಗೆ ಸೇರಿದರಾದರೂ ಅಲ್ಲಿ ಉಳಿದಿದ್ದು ಕೇವಲ ಆರು ತಿಂಗಳು ಮಾತ್ರ. ತಾವು ಕೆಲಸ ಮಾಡುತ್ತಿದ್ದ ತಹಶೀಲ್ದಾರ ಕಛೇರಿಯಲ್ಲಿ ಭ್ರಷ್ಟಾಚಾರ, ಸ್ವಜನಪಕ್ಷಪಾತದಿಂದ ಬೇಸತ್ತು ನೌಕರಿಗೆ ರಾಜೀನಾಮೆ ನೀಡಿ ಸ್ವಗ್ರಾಮಕ್ಕೆ ಹಿಂತಿರುಗಿ ತಮ್ಮ ಹೊಲಗದ್ದೆಗಳಲ್ಲಿ ಮಣ್ಣಿನ ಮಗನಾಗಿ ದುಡಿಯಲಾರಂಭಿಸಿದರು.

ಕರ್ನಾಟಕ ಏಕೀಕರಣದ ಧ್ಯೇಯ ಹೊಂದಿ ೧೯೫೫ರಲ್ಲಿ ಯುವ ಮುಖಂಡರಾಗಿ ಚಳುವಳಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಇವರು ಶ್ರೀ ಅಳವಂಡಿ ಶಿವಮೂರ್ತಿ ಸ್ವಾಮಿಗಳ ನಾಯಕತ್ವದಲ್ಲಿ ಬಳ್ಳಾರಿ, ಸಿರುಗುಪ್ಪ, ಹೊಸಪೇಟೆ ಭಾಗಗಳನ್ನು ಕರ್ನಾಟಕದಲ್ಲಿ ಉಳಿಸಿಕೊಳ್ಳುವ ಹೋರಾಟದಲ್ಲಿ ಭಾಗಿಯಾಗಿದ್ದಾರೆ. ೧೯೫೫ ನವೆಂಬರ್ ಮೊದಲ ವಾರದಲ್ಲಿ ಹಂಪೆಯಲ್ಲಿ ಜರುಗಿದ ಚಳುವಳಿಗಾರರ ಸಮಾವೇಶದಲ್ಲಿ ತುಂಗಭದ್ರ ಕಾಲುವೆಯ ನೀರನ್ನು ಆಯಕಟ್ಟು ಅಲ್ಲದ ಹೊಲಗಳಿಗೆ ನೀರು ಹರಿಸುವಂತೆ ಮಾಡುವ ಮುಖಾಂತರ ಅಸಹಕಾರವನ್ನು ತೋರುವ ನಿರ್ಣಯ ಕೈಗೊಂಡರು. ಈ ನಿರ್ಣಯದಂತೆ ಇವರ ಹಾಗೂ ಸತ್ಯವಂತರಾವ್

ನೇತೃತ್ವದಲ್ಲಿ ೫೧ ಜನರ ತಂಡ ಕೊಂಚಗೇರಿ ಕಾಲುವೆಯ ಹತ್ತಿರ ಆಯಕಟ್ಟಲ್ಲದ ಹೊಲಗಳಿಗೆ ನೀರನ್ನು ಹರಿಸುವ ಹಾಗೂ ಆಂಧ್ರಕ್ಕೆ ಹೋಗುವ ಕಾಲುವೆ ಧ್ವಂಸಗೊಳಿಸುವ ಚಳುವಳಿಯಲ್ಲಿ ಶ್ರೀಯುತರು ಭಾಗಿಯಾಗಿ ಸರಕಾರದಿಂದ ಬಂಧನಕ್ಕೆ ಒಳಗಾದರು. ಅಷ್ಟೆ ಅಲ್ಲ ಕೋರ್ಟಿನಿಂದ ಬೇಲು ಪಡೆಯದೇ ಜೈಲುಶಿಕ್ಷೆ ಅನುಭವಿಸಿದರು. ನಿಜಕ್ಕೂ ಇವರು ಕರ್ನಾಟಕದ ಹೆಮ್ಮೆಯ ಪುತ್ರರಾಗಿ ಮೆರೆದರು.

ಶ್ರೀ ಸಿ.ಎಂ. ರೇವಣಸಿದ್ದಯ್ಯನವರು ಒಬ್ಬ ರೈತರಾಗಿದ್ದರಿಂದ ಅವರು ೧೯೭೪ರಲ್ಲಿ ಬಳ್ಳಾರಿ ಜಿಲ್ಲಾ ರೈತ-ರೈತ ಕಾರ್ಮಿಕ ಸಂಘವನ್ನು ಸ್ಥಾಪಿಸಿ, ಅದರ ಅಧ್ಯಕ್ಷರಾಗಿ ರೈತಪರ ಹೋರಾಟ ಮಾಡುತ್ತಾ ರೈತರಲ್ಲಿ ಜಾಗೃತಿಯನ್ನು ಮೂಡಿಸಿದರು. ೧೯೭೫ರಲ್ಲಿ ಕರ್ನಾಟಕ ರಾಜ್ಯ ರೈತ ಸಂಘವನ್ನು ಸ್ಥಾಪಿಸುವಲ್ಲಿ ಇವರ ಪಾತ್ರ ಮಹತ್ತರವಾದುದು, ಈ ಸಂಘದ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ಇವರು ಇಂದಿಗೂ ದನದಕೊಟ್ಟಿಗೆಯಲ್ಲಿ ಪಶುಗಳ ಸೇವೆಗೈದು, ದಿನನಿತ್ಯ ಹೊಲಗದ್ದೆಗಳಿಗೆ ಪೈರು ಆರೈಕೆ ಮಾಡುವುದರಲ್ಲಿ ನಿರತರಾಗಿರುತ್ತಾರೆ.

೪. ೫ ಡಾ॥ ಎ.ಎಂ. ರಾಜಶೇಖರಯ್ಯ

ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ತತ್ವನಿಷ್ಠರಾಗಿ ರಾಜನೀತಿಯುತವಾಗಿ ಹೋರಾಡಿದ ವ್ಯಕ್ತಿಯಾದ ಡಾ॥ ಎ.ಎಂ. ರಾಜಶೇಖರಯ್ಯನವರು ದಾವಣಗೆರೆಯಲ್ಲಿ ವಿದ್ವತ್ ಕುಟುಂಬವೊಂದರಲ್ಲಿ ೧೯೨೯ ಜೂನ್‌ರಂದು ಜನಿಸಿದರು. ತಂದೆ ವೇದಶಾಸ್ತ್ರ ಪಂಡಿತ ಚನ್ನಬಸವಶಾಸ್ತ್ರಿಗಳು ಹಾಗೂ ತಾಯಿ ನೀಲಮ್ಮನವರು.

ಡಾ॥ ಎ.ಎಂ. ರಾಜಶೇಖರಯ್ಯನವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಹಾವೇರಿ ಜಿಲ್ಲೆಯ ಹಂಸಭಾವಿ ಹಾಗೂ ದಾವಣಗೆರೆಗಳಲ್ಲಿ ಪೂರೈಸಿದರು. ಪ್ರೌಢ ಶಿಕ್ಷಣಾಭ್ಯಾಸವನ್ನು ನಂಜನಗೂಡು ಮತ್ತು ಮೈಸೂರಿನಲ್ಲಿ ಪೂರೈಸಿದರು, ಹಾಗೆಯೇ, ರಾಜ್ಯಶಾಸ್ತ್ರ ವಿಷಯದಲ್ಲಿ ಬಿ.ಎ. ಮತ್ತು ಎಂ.ಎ ಪದವಿಗಳನ್ನು ಮೈಸೂರು ವಿಶ್ವವಿದ್ಯಾಲಯದಿಂದ ಪಡೆದುಕೊಂಡರು.

ಪದವಿ ಪಡೆದ ನಂತರ ಡಾ॥ ಎ.ಎಂ. ರಾಜಶೇಖರಯ್ಯನವರು, ಕರ್ನಾಟಕ ಏಕೀಕರಣ ಆಂದೋಲನದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ೧೯೫೩-೫೪ರಲ್ಲಿ ಭಾಷಾವಾರು ಪ್ರಾಂತಗಳ ರಚನೆಯ ಆಂದೋಲನ ರಾಷ್ಟ್ರಮಟ್ಟದಲ್ಲಿ ಹಬ್ಬಿತ್ತು. ಆ ಸಂದರ್ಭದಲ್ಲಿ ಮೊಟ್ಟಮೊದಲ ಲೋಕಸಭಾ ಸದಸ್ಯರಾಗಿದ್ದ ಅಳವಂಡಿ ಶಿವಮೂರ್ತಿ ಸ್ವಾಮಿಗಳ ಆಪ್ತಕಾರ್ಯದರ್ಶಿಯಾಗಿ ಸೇವೆ ಮಾಡುವ ಭಾಗ್ಯ ಇವರಿಗೆ ಒದಗಿ ಬಂದಿತು. ಅವರ ಅಧ್ಯಕ್ಷತೆಯಲ್ಲಿ ಹಂಪಿಯಲ್ಲಿ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು ಉದ್ಘಾಟನೆಯಾಯಿತು. ಈ ಪರಿಷತ್ತಿನಲ್ಲಿ ಶ್ರೀ ಶಿವಮೂರ್ತಿ ಸ್ವಾಮಿಗಳ ಮುಂದಾಳತ್ವದಲ್ಲಿ ಅನೇಕ ಕೆಲಸಗಳನ್ನು ಸರ್ಕಾರದ ವಿರುದ್ಧ ಮಾಡಲು ನಿರ್ಣಯಿಸಲಾಯಿತು. ಕನ್ನಡ ನಾಡುನುಡಿ ಒಂದಾಗಲು ಜನರನ್ನು ಜಾಗೃತಗೊಳಿಸಲು ಶ್ರೀ ಶಿವಮೂರ್ತಿ ಸ್ವಾಮಿಗಳಿಗೆ, ಶ್ರೀ ರಾಜಶೇಖರಯ್ಯನವರು ಮಹತ್ವದ ವಿಷಯಗಳನ್ನು ಸಂಗ್ರಹಿಸಿ ಬಹುತೀಕ್ಷ್ಣ ಪ್ರಭಾವ ಬೀರುವ ಭಾಷಣಗಳನ್ನು ತಯಾರಿಸಿಕೊಡುತ್ತಿದ್ದರು. ಜೊತೆಯಲ್ಲಿ ಅವಕಾಶ ಸಿಕ್ಕಾಗೆಲ್ಲ ಶ್ರೀ ರಾಜಶೇಖರಯ್ಯನವರು ಜನರನ್ನು ಹುರಿದುಂಬಿಸಲು ಪ್ರತಿಭಾನ್ವಿತ ಹಾಗೂ ಪ್ರಚೋದನಾತ್ಮಕ ಭಾಷಣಗಳನ್ನು ಮಾಡುತ್ತಿದ್ದರು. ಅ. ಕ. ರಾ. ನಿ. ಪ. ದ. ಪರವಾಗಿ ರಾಜ್ಯ ಪುನರ್‌ವಿಂಗಡನಾ ಸಮಿತಿಯ ಆಯುಕ್ತರಿಗೆ ಹುಬ್ಬಳ್ಳಿಯಲ್ಲಿ ಯೋಜನಾಬದ್ಧವಾದ ಮನವಿಯನ್ನು ತಯಾರಿಸಿ ಅರ್ಪಿಸಲು ಇವರು ನೆರವಾದರು. ಈ ಏಕೀಕರಣ ಆಂದೋಲನ ಕೆಲಸಕ್ಕಾಗಿ ಅಖಿಲ ಕರ್ನಾಟಕ ಪ್ರದೇಶವನ್ನು ಶ್ರೀ ಶಿವಮೂರ್ತಿ ಸ್ವಾಮಿಗಳ ಸಂಗಡ ಸಂಚರಿಸಿ ಜನರನ್ನು ಸಂಘಟಿಸಲು ಮತ್ತು ಹೋರಾಟದಲ್ಲಿ ಪಾಲ್ಗೊಳ್ಳಲು ಅವರಿಗೆ ನೆರವಾದರು.

೧೯೫೪ರಲ್ಲಿ ಬಳ್ಳಾರಿಯ ವೀರಶೈವ ಮಹಾವಿದ್ಯಾಲಯದಲ್ಲಿ ರಾಜ್ಯಶಾಸ್ತ್ರ ಅಧ್ಯಾಪಕರಾಗಿ ಸೇವೆಯನ್ನು ಪ್ರಾರಂಭಿಸಿದರು. ಇವರು ಬಳ್ಳಾರಿಗೆ ಅಧ್ಯಾಪಕರಾಗಿ ಬಂದ ನಂತರ ಬಳ್ಳಾರಿಯ ಏಕೀಕರಣ ಆಂದೋಲನದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ೧೯೫೫ರಲ್ಲಿ ಬಳ್ಳಾರಿಯ ಭವಿಷ್ಯದ ಬಗ್ಗೆ ಸಾರ್ವಜನಿಕರಲ್ಲಿ ಬಹು ತೀಕ್ಷ್ಣವಾದ ಸಮಸ್ಯೆ ತಂದೊದಗಿತ್ತು. ಅದೇನೆಂದರೆ ೧೯೫೩ ಪ್ರಾಂತವಾರು ರಾಜ್ಯಗಳ ರಚನೆಗೆ ನೇಮಿಸಿದ ಸಮಿತಿಯ ಆಯುಕ್ತರು ತುಂಗಭದ್ರ ಆಣೆಕಟ್ಟಿನವರೆಗಿನ ಹೊಸಪೇಟೆ ಮತ್ತು ಬಳ್ಳಾರಿ ತಾಲೂಕುಗಳನ್ನು ಆಂಧ್ರಪ್ರದೇಶಕ್ಕೆ ವರ್ಗಾಯಿಸಲು ಶಿಫಾರಸ್ಸು ಮಾಡಿದರು. ಇದೊಂದು ಘೋರ ಅನ್ಯಾಯವೆಂದು ಆ ಪ್ರದೇಶದ ಜನರು ಆಂದೋಲನ ಮಾಡಲು ಬೀದಿಗಿಳಿದರು. ದಸರ ಹಬ್ಬವನ್ನು ಆಚರಿಸುವುದನ್ನು ತ್ಯಜಿಸಿದರು. ವೀರಶೈವ ಸಂಘ

ಮತ್ತು ಸ್ಥಳೀಯರ ಸಹಕಾರದಿಂದ ಶ್ರೀ ರಾಜಶೇಖರಯ್ಯನವರು ಸಹ ಈ ಹೋರಾಟದಲ್ಲಿ ಪಾಲ್ಗೊಂಡರು. ಸರ್ಕಾರವನ್ನು ಎಚ್ಚರಿಸಲು ಈ ಹೋರಾಟಗಾರರು ಆ ಪ್ರದೇಶದಲ್ಲಿನ ಕಾಲುವೆಗಳನ್ನು ಒಡೆದು ಹಾಕುವುದು, ಬಸ್ಸು-ರೈಲುಗಳನ್ನು ತಡೆಹಿಡಿಯುವುದು, ಬಂದ್ ಆಚರಿಸುವುದು ಇತ್ಯಾದಿ ಪ್ರತಿಭಟನಾತ್ಮಕ ಕೃತ್ಯಗಳಲ್ಲಿ ತೊಡಗಲು ಕಾರಣವಾಯಿತು. ಜನರನ್ನು ಪ್ರಚೋದಿಸಲು ಮಹತ್ವದ ಭಾಷಣಗಳನ್ನು ಮಾಡುವುದು, ಭಿತ್ತಿಪತ್ರಗಳನ್ನು ಮತ್ತು ನಾಮಫಲಕಗಳನ್ನು ತಯಾರಿಸಲು ಸಕ್ರಿಯವಾಗಿ ಅವರು ನೆರವಾದರು, ಈ ಆಂದೋಲನದಿಂದ ಸಾರ್ವಜನಿಕ ಒತ್ತಾಯವನ್ನು ಮನಗಂಡು ಕೇಂದ್ರ ಸಂಪುಟವು ಈ ಆಯುಕ್ತರ ಶಿಫಾರಸ್ಸನ್ನು ಬದಲಾಯಿಸಿ ಬಳ್ಳಾರಿಯನ್ನು ಕರ್ನಾಟಕದಲ್ಲೇ ಉಳಿಸಲು ನಿರ್ಣಯಿಸಿತು. ಹೀಗೆ ಏಕೀಕರಣದ ಜನಾಂದೋಲನಕ್ಕೆ ರಾಜ್ಯನೀತಿ ಹಾಗೂ ಸೈದ್ಧಾಂತಿಕ ಸಂವಿಧಾನ ನೆಲೆಗಟ್ಟಿನಲ್ಲಿ ಅಂಕಿ ಅಂಶ ಆಧಾರಿತ ಮನವಿ ಹಾಗೂ ಪತ್ರಗಳನ್ನು ಆಯೋಗಕ್ಕೆ ಹಾಗೂ ಕೇಂದ್ರ ಸರ್ಕಾರಕ್ಕೆ ಸಲ್ಲಿಸುವಲ್ಲಿ ಡಾ|| ಎ.ಎಂ. ರಾಜಶೇಖರಯ್ಯನವರು ತಮ್ಮದೇ ಆದ ಪ್ರಮುಖ ಪಾತ್ರವನ್ನು ವಹಿಸಿದರು. ಬಿಟ್ಟು ಹೋಗಿರುವ ಆದೋನಿ, ಆಲೂರು, ರಾಯದುರ್ಗ ತಾಲೂಕುಗಳನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ಕನ್ನಡಿಗರು ಅಂದಿನಿಂದಲೂ ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಿರುವರು.

೪. ೬ ಶ್ರೀ ಕೋ. ಚೆನ್ನಬಸಪ್ಪ

ಕರ್ನಾಟಕ ಏಕೀಕರಣದಲ್ಲಿ ಭಾಗವಹಿಸಿದ ವ್ಯಕ್ತಿಗಳಲ್ಲಿ ಶ್ರೀ ಕೋ. ಚೆನ್ನಬಸಪ್ಪನವರು ಒಬ್ಬರಾಗಿದ್ದಾರೆ. ಕೋ. ಚೆ. ಎಂದೇ ಪ್ರಸಿದ್ದರಾದ ಇವರು ಬಳ್ಳಾರಿಯನ್ನು ಕರ್ನಾಟಕಕ್ಕೆ ಸೇರುವಲ್ಲಿ ನಿರ್ವಹಿಸಿದ ಪಾತ್ರ ಪ್ರಶಂಸನೀಯವಾದುದ್ದು. ಬಳ್ಳಾರಿ ಜಿಲ್ಲೆಯ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ ಆ ಮೂಲಕ ಎಲ್ಲಾ ರೀತಿಯ ಕಾರ್ಯಗಳನ್ನು ಮಾಡಿಕೊಂಡು ಬಳ್ಳಾರಿಯನ್ನು ಉಳಿಸಿಕೊಳ್ಳುವ ಪ್ರಯತ್ನಗಳನ್ನು ಮಾಡಿದ್ದರು.

ಶ್ರೀ ಕೋ. ಚೆನ್ನಬಸಪ್ಪನವರು ೧೯೨೨ರಲ್ಲಿ ಬಳ್ಳಾರಿ ಜಿಲ್ಲೆಯ ಕೊಡ್ಲಿಗಿ ತಾಲೂಕಿನ ಆಲೂರು ಮಜರಂ ಗ್ರಾಮದ ಕಾನಾಮಡುವಿನಲ್ಲಿ ಜನಿಸಿದರು. ತಂದೆ ಕೋ. ವೀರಣ್ಣ, ತಾಯಿ ಶ್ರೀಮತಿ ಬಸಮ್ಮ, ಶ್ರೀ ಕೋ. ಚೆನ್ನಬಸಪ್ಪನವರು ಕಾನಾಮಡುವಿನಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ ೧೯೪೪ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಬಿ.ಎ. ಪದವಿಯನ್ನು ೧೯೪೭ರಲ್ಲಿ ಮುಂಬೈ ವಿಶ್ವವಿದ್ಯಾಲಯದಿಂದ ಎಲ್.ಎಲ್.ಬಿ. ಪದವಿಯನ್ನು ಗಳಿಸಿದ್ದಾರೆ.

ಶ್ರೀ ಕೋ. ಚೆನ್ನಬಸಪ್ಪನವರು ವಿದ್ಯಾಭ್ಯಾಸದ ನಂತರ ಬಳ್ಳಾರಿಯಲ್ಲಿ ವಕೀಲ ವೃತ್ತಿಯನ್ನು ಪ್ರಾರಂಭಿಸಿದರು. ವಿದ್ಯಾರ್ಥಿ ಜೀವನದಲ್ಲಿಯೇ ಏಕೀಕರಣ ಚಳುವಳಿ, ಸ್ವಾತಂತ್ರ್ಯ ಚಳುವಳಿ ಮತ್ತು ಬಳ್ಳಾರಿ ಹೋರಾಟಗಳಲ್ಲಿ ಭಾಗವಹಿಸುತ್ತಾ ಬಂದಿದ್ದರು, ಕೋ. ಚೆನ್ನಬಸಪ್ಪನವರು ಬಳ್ಳಾರಿಯ ಕ್ರೀಯಾ ಸಮಿತಿಯ ಕಾರ್ಯದರ್ಶಿಗಳಾಗಿ ಕೆಲಸ ಮಾಡುತ್ತಿದ್ದರು, ಆ ಮೂಲಕ ಬಳ್ಳಾರಿಯನ್ನು ಕರ್ನಾಟಕಕ್ಕೆ ಸೇರಿಸುವ ಕಾರ್ಯವನ್ನು ಮಾಡಿದರು. ಅವರು ಅನೇಕ ಆಯೋಗಗಳ ಮುಂದೆ ಬಳ್ಳಾರಿ ಜಿಲ್ಲೆಯ ಪರವಾಗಿ, ಮನವಿಯನ್ನು ಆಯೋಗಕ್ಕೆ ನೀಡುತ್ತಿದ್ದರು. ಮಿಶ್ರಾ ಆಯೋಗ ಬಂದಾಗ ಕೋ. ಚೆನ್ನಬಸಪ್ಪನವರು ಬಹಳ ಸೌಮ್ಯಯುತವಾಗಿ ಯುಕ್ತಿಯಿಂದ ವ್ಯವಹರಿಸಿ ಸರಿಯಾದ ವಿವರಗಳನ್ನು ಆಯೋಗಕ್ಕೆ ನೀಡಿದ್ದರು. ಜನರನ್ನು ಆಯೋಗದ ಮುಂದೆ ತರುವಲ್ಲಿಯು ಕೂಡ ಸಕ್ರಿಯವಾದ ಪಾತ್ರ ನಿರ್ವಹಿಸಿದ್ದಾರೆ.

೧೬.೬.೧೯೫೪ ರಂದು ಫಜಲ್ ಆಲಿ ನೇತೃತ್ವದ ರಾಜ್ಯ ಪುನರ್ವಿಂಗಡಣಾ ಆಯೋಗವು ಹುಬ್ಬಳ್ಳಿಗೆ ಬಂದಾಗ ಕೋ. ಚೆನ್ನಬಸಪ್ಪನವರು ಆಯೋಗದ ಸದಸ್ಯರನ್ನು ಕಂಡು ಕರ್ನಾಟಕದಲ್ಲಿ ಸೇರಬೇಕಾದ ಬಳ್ಳಾರಿ ಜಿಲ್ಲೆಯ ನಕ್ಷೆಯನ್ನು ನೀಡಿದ್ದರು. ಇದೇ ಆಯೋಗವು ೯-೧೧-೧೯೫೪ರಂದು ಬಳ್ಳಾರಿಗೆ ಬಂದಿತ್ತು. ಕೊ. ಚೆನ್ನಬಸಪ್ಪನವರು ಆದವಾನಿ, ಆಲೂರು, ರಾಯದುರ್ಗ ತಾಲೂಕುಗಳಿಗೆ ಸೇರಿದ ೩೦ಕ್ಕೂ ಹೆಚ್ಚಿನ ಪಂಚಾಯಿತಿ ಬೋರ್ಡ್ ಸದಸ್ಯರ ಪರವಾಗಿ ಇವರು ಮನವಿಯನ್ನು ಸಲ್ಲಿಸಿದರು.

ಫಜಲ್ ಆಲಿ ಆಯೋಗದ ವರದಿ ಪ್ರಕಟವಾಗಿತ್ತು. ಇದರಲ್ಲಿ ಬಳ್ಳಾರಿ ಜಿಲ್ಲೆಯನ್ನು ಆಂಧ್ರಕ್ಕೆ ಸೇರಿಸಬೇಕು ಎನ್ನುವ ಶಿಫಾರಸ್ಸು ಮಾಡಲಾಗಿತ್ತು. ಇದರಿಂದ ಇಡೀ ಜಿಲ್ಲೆಯಲ್ಲಿ ಹೋರಾಟ ಪುನಃ ಪ್ರಾರಂಭವಾಯಿತು. ಈ ಸಂದರ್ಭದಲ್ಲಿ ಕೋ. ಚೆನ್ನಬಸಪ್ಪನವರು ಬಹಳ ಬುದ್ಧಿವಂತಿಕೆಯಿಂದ ಕಾರ್ಯ ನಿರ್ವಹಿಸಿದರು. ನೆಹರು ಅವರಲ್ಲಿಗೆ ಹೋಗಿ ಅವರು ಇದರ ಬಗ್ಗೆ ನಕ್ಷೆ ಸಮೇತ ವಿವರಗಳನ್ನು ನೀಡಿದರು. ತುಂಗಭದ್ರ ಅಣೆಕಟ್ಟಿನವರೆಗೆ

ಆಂಧ್ರಕ್ಕೆ ಹೋದರೇ ಕರ್ನಾಟಕದಲ್ಲಿ ರಾಯಚೂರು ರಚನೆಯಲ್ಲಿ ಆಗುವ ತೊಂದರೆಗಳನ್ನು ತಿಳಿಸಿದರು. ಬಳ್ಳಾರಿಯನ್ನು ಕರ್ನಾಟಕದಲ್ಲಿ ಉಳಿಸಿಕೊಳ್ಳುಲು ಕೋ. ಚೆನ್ನಬಸಪ್ಪನವರು ತುಂಗಭದ್ರ ಹೋರಾಟ ಸಮಿತಿಯನ್ನು ರಚಿಸಿದ್ದರು. ಇದು ಬಹಳ ಪ್ರಮುಖವಾಗಿತ್ತು. ಇದರ ಕಾರ್ಯ ಪ್ರತಿದಿನ ೧೦೦ ಜನ ನೀರನ್ನು ಕರ್ನಾಟಕ (ಭೂಮಿಗೆ) ನೆಲಕ್ಕೆ ಹಾಕುವುದಾಗಿತ್ತು. ಇದು ಆ ಸಮಿತಿಯನ್ನು ತಿಳಿಸುವ ಪ್ರದೇಶಗಳಲ್ಲಿ ಜನರು ಹೋಗಿ ಹೋರಾಟ ಮಾಡುವುದಾಗಿತ್ತು. ಈ ರೀತಿಯ ಕಾರ್ಯವನ್ನು ಕೋ. ಚೆನ್ನಬಸಪ್ಪನವರು ಮತ್ತು ಇನ್ನೂ ಉಳಿದಂತಹ ನಾಯಕರೊಳಗೊಂಡು ಮಾಡಿದ್ದರು.

ಮೈಸೂರು ಸರಕಾರವು ಬಳ್ಳಾರಿಯನ್ನು ಸೇರಿಸುವಲ್ಲಿ ಹಿಂದು ಮುಂದು ಮಾಡಿದ್ದರು ಅದಕ್ಕೆ ಈ ಪ್ರದೇಶವು ಬಹಳ ಹಿಂದುಳಿದ ಪ್ರದೇಶವೆಂದುದಾಗಿತ್ತು. ಆದರೆ ಕೋ. ಚೆನ್ನಬಸಪ್ಪನವರು, ಯಜಮಾನ್ ಶಾಂತರುದ್ರಪ್ಪ, ಅಲ್ಲಂ ಕರಿಬಸಪ್ಪ, ಗಾದಿಲಿಂಗಪ್ಪ, ವೈ. ಮಹಾಬಲೇಶ್ವರಪ್ಪ ಮೊದಲಾದ ನಾಯಕರು ಸೇರಿಕೊಂಡು ಮೈಸೂರು ವಿಧಾನಸಭೆಯ ಮಂತ್ರಿಗಳನ್ನು ಅವರು ಇದ್ದಲ್ಲಿಗೆ ಹೋಗಿ ಬಳ್ಳಾರಿಯನ್ನು ಮೈಸೂರ ಪ್ರಾಂತಕ್ಕೆ ಸೇರಿಸಿಕೊಳ್ಳುವಂತೆ ಹೇಳಿಕೊಂಡು ಮನವಿಯಲ್ಲಿ ಸಹಿಯನ್ನು ಹಾಕಿಸಿಕೊಂಡರು. ಈ ಕಾರ್ಯದಲ್ಲಿ ಕೋ.ಚೆನ್ನಬಸಪ್ಪನವರ ಪಾತ್ರ ಬಹಳ ಪ್ರಮುಖವಾಗಿತ್ತು. ಶಾಂತತೆಯಿಂದ ಸಮಯವನ್ನು ಉಪಯೋಗಿಸಿಕೊಂಡು ಕಾರ್ಯವನ್ನು ಮಾಡಿದ್ದರು.

ಕೋ. ಚೆನ್ನಬಸಪ್ಪನವರು, ೧೯೪೮ರಲ್ಲಿ 'ರೈತ' ಪತ್ರಿಕೆಯನ್ನು ಪ್ರಾರಂಭಿಸಿದರು ಆ ಪ್ರತ್ರಿಕೆಯಲ್ಲಿ ಕರ್ನಾಟಕ ಏಕೀಕರಣದ ಬಗ್ಗೆ ಲೇಖನಗಳನ್ನು ಬರೆಯುತ್ತಿದ್ದರು. ಬಡ ರೈತ ಕುಟುಂಬದಿಂದ ಬಂದಿದ್ದ ಕಾರಣ ಪತ್ರಿಕೆಗೆ 'ರೈತ' ಎಂದು ಹೆಸರಿಟ್ಟರು. ಈ ಪತ್ರಿಕೆಯಿಂದ ರೈತನಿಗೆ ಬಾಯಿ ಬಂದಂತಾಗಿತ್ತು ಎಂದು ಅವರು ಹೇಳಿದ್ದಾರೆ.

ಕೋ. ಚೆನ್ನಬಸಪ್ಪನವರು ಒಬ್ಬ ವಕೀಲರು ಅಲ್ಲದೇ ಸಾಹಿತಿಯು ಕೂಡ ಆಗಿದ್ದಾರೆ. ಅವರು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಪ್ರಾಣಪಕ್ಷಿ, 'ಜೀವತೀರ್ಥ', ಗಡಿವಾರು, ನಮ್ಮೂರದೀಪ, ಹಿಂದುರುಗಿ ಬರಲಿಲ್ಲ, ರಕ್ತತರ್ಪಣ, ನನ್ನ ಮನಸ್ಸು ನನ್ನ ನಂಬುಗೆ, ಅರವಿಂದರ ಕೃತಿಗಳು, ಶ್ರೀ ರಾಮಾಯಣ ದರ್ಶನಂ, ಮಹಾಕಾವ್ಯ ಸಮೀಕ್ಷೆ, ನ್ಯಾಯಾಧೀಶನ ನೆನಪುಗಳು, ನ್ಯಾಯಾಲಯದ ಸತ್ಯ ಕಥೆಗಳು, ಈ ರೀತಿಯಾಗಿ ವೈವಿಧ್ಯಮಯ ವಿಷಯಗಳನ್ನು ಬರೆದಿದ್ದಾರೆ. ಅವರು ಬಳ್ಳಾರಿಯ ಹಂಪೆಯನ್ನು ಕೇಂದ್ರವಾಗಿಟ್ಟುಕೊಂಡು, ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ಇವರು ಬರೆದಿರುವ ಬೃಹತ್ ಕಾದಂಬರಿ, 'ಬೇಡಿಕಳಚಿತು-ದೇಶ ಒಡೆಯಿತು'. ಮಹತ್ವದ ಕೃತಿಯಾಗಿದೆ. ಇವರ ಬರಹ ಮತ್ತು ಅಭಿಪ್ರಾಯಗಳಲ್ಲಿ ವೈಚಾರಿಕ ಸ್ಪಷ್ಟತೆ ಎದ್ದು ಕಾಣುತ್ತದೆ.

ಕೋ. ಚೆನ್ನಬಸಪ್ಪನವರ ಹೆಸರು, ಕನ್ನಡ - ಕರ್ನಾಟಕ – ಬಳ್ಳಾರಿ ಈ ಹೆಸರುಗಳೊಂದಿಗೆ ತಳಕು ಹಾಕಿಕೊಂಡಿದೆ. ಈ ಮೂರರಿಂದ ಅವರ ಹೆಸರನ್ನು ಬೇರ್ಪಡಿಸಲು ಸಾಧ್ಯವೇ ಇಲ್ಲ. ಈಗಾಲೂ ಕನ್ನಡಿಗರಿಗೆ ಅಗ್ರಸ್ಥಾನ ದೊರೆಯಬೇಕೆಂದು ಕಾಯಾ, ವಾಚಾ, ಮನಸಾ ಶ್ರಮಿಸುತ್ತಿದ್ದಾರೆ.

೪. ೭ ಪಿಂಜಾರ ರಂಜಾನ್ ಸಾಹೇಬ್

ಕರ್ನಾಟಕ ಏಕೀಕರಣದಲ್ಲಿ ಚಿರಸ್ಮರಣೆಯಾಗಿ ಉಳಿದ, ಸಾಮಾನ್ಯ ವ್ಯಕ್ತಿ ಅಸಮಾನ್ಯವಾದ ಸಾಧನೆ ಮಾಡಿದ್ದ ಮತ್ತು ಏಕೀರಣದಲ್ಲಿ ಆತ್ಮಾರ್ಪಣೆ ಮಾಡಿದ್ದ ವ್ಯಕ್ತಿ ಪಿಂಜಾರ್ ರಂಜಾನ್ ಸಾಹೇಬ್, ಏಕೀಕರಣದಲ್ಲಿ ಅಚಲವಾಗಿ ನಂಬಿಕೆಯನ್ನು ಹೊಂದಿದ್ದು, ಕನ್ನಡಕ್ಕಾಗಿ ಪ್ರಾಣಾರ್ಪಣೆ ಮಾಡಿದ ವ್ಯಕ್ತಿಯಾಗಿದ್ದಾರೆ. ಅವರ ಸಾಧನೆಯು ಇಂದಿನ ಪೀಳಿಗೆಗೆ ಮಾರ್ಗದರ್ಶನವಾಗಿದೆ.

ಪಿಂಜಾರ ರಂಜಾನ್ ಸಾಹೇಬ್, ಬಳ್ಳಾರಿಯ ಪಿಂಜಾರ್ ಓಣಿಯ ಪಿಂಜಾರ್ ಹುಸೇನ್ ಸಾಬ್ ಮತ್ತು ಸಣ್ಣ ಜಂಗಮ್ಮ ದಂಪತಿಗಳ ಮಗನಾಗಿ ಜನಿಸಿದರು. ರಂಜಾನ್ ಸಾಹೇಬ್ ೪ನೇ ತರಗತಿಯವರೆಗೆ ಓದಿದ್ದಾರೆ. ಕನ್ನಡ–ಉರ್ದು ಭಾಷೆಯಲ್ಲಿ ಮನೆ ಹತ್ತಿರದ ಮಸೀದಿಯಲ್ಲಿ ವಿದ್ಯಾಭ್ಯಾಸ ಮಾಡಿದರು. ರಂಜಾನ್ ಸಾಹೇಬ್ ಅವರ ತಂದೆ ಒಬ್ಬ ಇದ್ದಿಲು ಮತ್ತು ಹತ್ತಿಯ ವ್ಯಾಪಾರಿಯಾಗಿದ್ದರು. ರಂಜಾನ್ ಸಾಹೇಬ್ ಅವರನ್ನು ಇನ್ನೂ ಓದಿಸಬೇಕು ಎಂದು ಅವರ ತಂದೆ–ತಾಯಿ ಆಸೆ ಹೊಂದಿದ್ದರು. ಆದರೆ ರಂಜಾನ್ ಅವರ ತಂದೆ ತೀರಿಹೋದರು. ಇದರಿಂದ ರಂಜಾನ್ ಸಾಹೇಬ್‌ರು ಅವರ ತಂದೆಯ ವ್ಯಾಪಾರವನ್ನು ಮುಂದುವರೆಸಿಕೊಂಡು ಹೋದರು ಇದರಿಂದ ಅವರ ಓದು ನಿಲ್ಲಿಸಬೇಕಾಗಿತ್ತು.

ರಂಜಾನ್ ಸಾಹೇಬರು ಒಬ್ಬ ಕುಸ್ತಿ ಪಟುವಾಗಿದ್ದರು. ಇವರು ಗರಡಿಮನೆಯಲ್ಲಿ ಪಳಗಿದ ವ್ಯಕ್ತಿಯಾಗಿ ದೃಢಕಾಯವನ್ನು ಹೊಂದಿದ್ದರು. ಆ ಸಮಯದಲ್ಲಿ ಗರಡಿಮನೆಗಳು ಸ್ವಾತಂತ್ರ್ಯ ಹೋರಾಟ ಮತ್ತು ಏಕೀಕರಣ ಹೋರಾಟದ ಕೇಂದ್ರಗಳಾಗಿದ್ದವು. ಅಲ್ಲಿಗೆ ಸಾಮಾನ್ಯ ವ್ಯಕ್ತಿಗಳು ವ್ಯಾಯಾಮ ಮಾಡುವುದಕ್ಕೆ ಬರುತ್ತಿರಲಿಲ್ಲ, ಅದರ ಜೊತೆಗೆ ದೇಶಕ್ಕಾಗಿ ದುಡಿಯುವ ನೇತಾರರ ಸಭೆ ಸಮಾರಂಭಗಳ ಭಾಷಣಗಳನ್ನು ಕೇಳಲು ಹೋಗುತ್ತಿದ್ದರು, ಇದರಿಂದ ರಂಜಾನ್ ಸಾಹೇಬ್‌ಗೆ ಸ್ವಾತಂತ್ರ್ಯದ ಬಗ್ಗೆ ಏಕೀಕರಣದ ಬಗ್ಗೆ ದುಡಿಯುವ ಸ್ಫೂರ್ತಿ ದೊರೆಯಿತು. ನಂತರದಲ್ಲಿ ರಂಜಾನ್ ಸಾಹೇಬ್‌ರು ಬಳ್ಳಾರಿ ಕರ್ನಾಟಕ ಕ್ರಿಯಾ ಸಮಿತಿಯ ಸದಸ್ಯರಾದರು. ಸದಸ್ಯರಾದ ನಂತರ ರಂಜಾನ್ ಸಾಹೇಬ್ ಅವರು ಸಮಿತಿಯ ಎಲ್ಲಾ ಸಭೆಗಳಲ್ಲಿ ಭಾಗವಹಿಸಿ ಚಳುವಳಿಯಲ್ಲಿ ಭಾಗವಹಿಸಿದ್ದರು.

ರಂಜಾನ್ ಸಾಹೇಬ್ ಅವರು ತಮ್ಮ ಜನಾಂಗದ ಮೇಲೆ ಒಳ್ಳೆಯ ಹಿಡಿತವನ್ನು ಸಾಧಿಸಿದ್ದರು. ಇದರಿಂದ ರಂಜಾನ್ ಯಾವ ರೀತಿ ಹೇಳುತ್ತಿದ್ದರು ಅದನ್ನು ಅವರು ಮಾಡುತ್ತಿದ್ದರು. ಸಾಮಾನ್ಯ ವ್ಯಕ್ತಿಯಾಗಿದ್ದ ರಂಜಾನ್ ಸಾಮಾನ್ಯರಲ್ಲಿ ಸಾಮಾನ್ಯನಾಗಿ ಜನರನ್ನು ಒಂದುಗೂಡಿಸುತ್ತಿದ್ದರು. ಅವರ ಒಡನಾಡಿಗಳಾಗಿ ಅನೇಕ ಕೂಲಿ ಕಾರ್ಮಿಕರು, ಜಟಕಾವಾಲರು, ರಿಕ್ಷ ಚಾಲಕರು ಇರುತ್ತಿದ್ದರು. ಇವರನ್ನು ಚಳುವಳಿಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಇದು ಅಲ್ಲದೆ. ಅನೇಕ ಸಂದರ್ಭದಲ್ಲಿ ನಾಯಕರು ಹೇಳಿದ ಕಾರ್ಯವನ್ನು ನಿಷ್ಠೆಯಿಂದ ಮಾಡುತ್ತಿದ್ದರು. ಮನಪಿಗಳನ್ನು ಕಳುಹಿಸುವಾಗ ಅನೇಕ ಸಾಮಾನ್ಯ ವ್ಯಕ್ತಿಗಳ ಸಹಿ ಸಂಗ್ರಹಣೆ ಮಾಡಿಕೊಂಡು ನಾಯಕರ ಮೂಲಕ ಕಳುಹಿಸುತ್ತಿದ್ದರು. ಸರ್ಕಾರದ ಆಯೋಗದ ಮುಂದೆ ಜನಬಲವನ್ನು ತೋರಿಸುವುದಕ್ಕೆ ಇವರು ಎಲ್ಲಾ ಕೆಳವರ್ಗದ ದುಡಿಯುವ ವರ್ಗದವರನ್ನು ಕರೆದುಕೊಂಡು ಹೋಗುತ್ತಿದ್ದರು. ಪತ್ರ ಚಳುವಳಿಯಲ್ಲಿ ಸಹಿ ಸಂಗ್ರಹಣ ಮಾಡುವ ಕಾರ್ಯವನ್ನು ನಿರ್ವಹಿಸಿವುದು, ಈ ಕಾರ್ಯದಲ್ಲಿ ರಂಜಾನ್ ಸಾಹೇಬ್ ಬಹಳ ದೊಡ್ಡ ಕಾರ್ಯವಾಗಿತ್ತು. ಅವರು ಸಾಮಾನ್ಯ ವ್ಯಕ್ತಿಯಾಗಿ ಸಾಮಾನ್ಯರಲ್ಲಿ ಸಾಮಾನ್ಯವಾಗಿ ಅಸಾಮಾನ್ಯವಾದ ಕಾರ್ಯಗಳನ್ನು ಮಾಡಿದ್ದಾರೆ.

ರಂಜಾನ್ ಸಾಹೇಬರ ಜೀವನದಲ್ಲಿ ಮಹತ್ವದ ತಿರುವು ಬಂದಿದ್ದು, ೧.೧೦.೧೯೫೩ ರಲ್ಲಿ. ಅದು ಅವರ ಕೊನೆಯ ದಿನವಾಗಿತು. ಸಂಭ್ರಮದಿಂದ ಬಳ್ಳಾರಿ ಜಿಲ್ಲೆ ಮೈಸೂರು ರಾಜ್ಯದಲ್ಲಿ ವಿಲೀನವಾಗುವ ಮರುದಿನವನ್ನು ಸ್ವಾಗತಿಸಲು ಕಾದಿದ್ದ ಬಳ್ಳಾರಿ ಜನತೆ ಅತೀವ ಆಘಾತದಿಂದ ಒಂದು ಸುದ್ದಿಯನ್ನು ಕೇಳಬೇಕಾಯಿತು. ಕರ್ನಾಟಕ ಕಿಯಾ ಸಮಿತಿಯ ಸದಸ್ಯರಾಗಿದ್ದ ರಂಜಾನ್ ಸಾಹೇಬ್ ಕಟ್ಟಾ ಕನ್ನಡ ಪ್ರೇಮಿ. ಕನ್ನಡವನ್ನೇ ಮಾತೃ ಭಾಷೆಯಾಗಿ ಉಸಿರಾಗಿಸಿಕೊಂಡಿದ್ದ ರಂಜಾನ್ ಸಾಹೇಬ್ ಬಳ್ಳಾರಿ ಜಿಲ್ಲೆ ಮೈಸೂರು ರಾಜ್ಯದಲ್ಲಿ ವಿಲೀನವಾಗುವ ಸಮಾರಂಭದ ಸಭಾಮಂಟಪದ ರಚನೆ ಮತ್ತು ಉಸ್ತುವಾರಿ ಜವಾಬ್ದಾರಿ ಹೊತ್ತು ಕೆಲಸ ಮಾಡುತ್ತಿದ್ದರು. ಸಭಾಮಂಟಪವನ್ನು ಸುಟ್ಟು ಹಾಕಲು ಕೆಲವು ದುಷ್ಟ ಶಕ್ತಿಗಳು ಸಂಚು ನಡೆಸುತ್ತಿವೆ ಎಂಬ ಸುಳಿವು ಸಿಕ್ಕಿದ್ದರಿಂದ ರಂಜಾನ್ ಸಾಹೇಬ್ ಸಭಾಮಂಟಪದ ಕಾವಲನ್ನು ಬಿಗಿಗೊಳಿಸಿದರು ಮತ್ತು ಖುದ್ದಾಗಿ ಕಾವಲು ಕಾಯಲು ನಿಂತರು. ಸೆಪ್ಟೆಂಬರ್ ೩೦ ರಂದು ಇಡೀ ರಾತ್ರಿ ದುಷ್ಕರ್ಮಿಗಳು ಮಂಟಪದ ವೇದಿಕೆಯನ್ನು ಧ್ವಂಸಗೊಳಿಸಲು ಹೊಂಚು ಹಾಕಿ ಕುಳಿತರು. ಇತ್ತ ರಂಜಾನ್ ಸಾಹೇಬರು ರಾತ್ರಿಯೆಲ್ಲಾ ಪಹರೆ ನಡೆಸಿ ಬೆಳಗಿನ ಜಾವದ ಹೊತ್ತಿನಲ್ಲಿ ಮಂಟಪದಲ್ಲೇ ಮಲಗಿದರು. ಇಂಥಾ ಸಂದರ್ಭಕ್ಕಾಗಿಯೇ ಕಾಯುತ್ತಿದ್ದ ಈ ದುಷ್ಟರು ಆವರಣದ ಗೋಡೆ ಹಾರಿ ಒಳಗೆ ಮಲಗಿದ್ದ ರಂಜಾನ್ ಸಾಹೇಬರ ಮುಖದ ಮೇಲೆ ಆಸಿಡ್ ತುಂಬಿದ ಬಲ್ಬನ್ನೆಸೆದರು. ರಂಜಾನ್ ಸಾಹೇಬರ ಮುಖ ಹಾಗೂ ದೇಹದ ಮೇಲೆ ಬಿದ್ದ ಆ್ಯಸಿಡ್‌ನಿಂದಾಗಿ ಅವರ ಚರ್ಮ ಸುಟ್ಟುಹೋಯಿತು. ಅವರನ್ನು ಜಿಲ್ಲಾ ಆಸ್ಪತ್ರೆಗೆ ಸೇರಿಸಲಾಯಿತು. ಆಸ್ಪತ್ರೆಯಲ್ಲೇ ಅಕ್ಟೋಬರ್ ೨ನೇ ತಾರೀಖು ಬೆಳಿಗ್ಗೆ ೮ ಗಂಟೆಯ ಸುಮಾರಿಗೆ ರಂಜಾನ್ ಸಾಹೇಬರು ಮೃತರಾದರು. ಇದು ಕನ್ನಡಕ್ಕೆ, ಕರ್ನಾಟಕ ಏಕೀಕರಣಕ್ಕಾಗಿ ನಡೆದ ಹೋರಾಟದಲ್ಲಿ ಮುಡಿಪಾದ ವೀರ ಬಲಿದಾನವಾಗಿದೆ. ಒಬ್ಬ ಸಾಮಾನ್ಯ ವ್ಯಕ್ತಿಯು ಅಖಂಡ ಕರ್ನಾಟಕದ ಉಗಮಕ್ಕಾಗಿ ತನ್ನ ಪ್ರಾಣವನ್ನೆ ಅರ್ಪಿಸಿದುದು ಮನ ಮಿಡಿಯುವ ಸಂಗತಿಯಾಗಿದೆ.

೪.೮ ವೈ. ಮಹಾಬಲೇಶ್ವರಪ್ಪ

ರಾವ್ ಬಹದ್ದೂರ್ ವೈ. ಮಹಾಬಲೇಶ್ವರಪ್ಪನವರು ೩-೬-೧೯೦೬ರಲ್ಲಿ ಬಳ್ಳಾರಿ ತಾಲೂಕಿನ ಎಮ್ಮಿಗನೂರು ಗ್ರಾಮದಲ್ಲಿ ಚಂಗಳಪ್ಪ ಮತ್ತು ಶ್ರೀಮತಿ ಸೂಗಮ್ಮನವರ ಮಗನಾಗಿ ಜನಿಸಿದರು. ಪ್ರಾಥಮಿಕ ಮತ್ತು ಪ್ರೌಢಶಾಲೆಯ ವಿದ್ಯಾಭ್ಯಾಸವನ್ನು ಬಳ್ಳಾರಿಯ ವಾಡ್ಲಾ ಕಾಲೇಜಿನಲ್ಲಿ ಮುಗಿಸಿದರು.

ಸ್ವಾತಂತ್ರ್ಯದ ನಂತರ ಭಾರತವು ಭಾಷಾವಾರು ಪ್ರಾಂತಗಳಾಗಿ ವಿಭಜನೆಗೊಂಡಿತು. ಆಗ ಪ್ರಬಲರಾಗಿದ್ದ ಆಂಧ್ರರು ಬಳ್ಳಾರಿಯನ್ನು ಆಂಧ್ರ ಪ್ರಾಂತ್ಯಕ್ಕೆ ಸೇರಿಸಿಕೊಳ್ಳಲು ಮಾಡಿದ ಪ್ರಯತ್ನ ಅಷ್ಟಿಷ್ಟಲ್ಲ. ಅದು ವರ್ಣನೆಗೆ ಮೀರಿದ್ದು. ಆಗ ನಮ್ಮ ಕನ್ನಡಿಗರೂ ಸುಮ್ಮನೆ ಕುಳಿತುಕೊಳ್ಳಲಿಲ್ಲ. ಬಳ್ಳಾರಿಯನ್ನು ಕರ್ನಾಟಕದಲ್ಲೇ ಉಳಿಸಿಕೊಳ್ಳಲು

ಪ್ರಾಣವನ್ನು ಪಣವಾಗಿಟ್ಟು ಹೋರಾಡಿದರು. ಈ ಹೋರಾಟದಲ್ಲಿ ಶ್ರೀ ವೈ. ಮಹಾಬಲೇಶ್ವರಪ್ಪನವರ ಸೇವೆಯು ಮರೆಯುವಂತಹುದಲ್ಲ. ಸ್ವತಃ ದಿಲ್ಲಿಗೆ ಹೋಗಿ ಪ್ರಧಾನಮಂತ್ರಿ ಪಂಡಿತ್ ಜವಹರಲಾಲ್ ನೆಹರು ಅವರ ಸದರ್ಶನ ಪಡೆದು, ಅವರಿಗೆ ಮನಮುಟ್ಟುವಂತೆ ಸಾಕ್ಷಾಧಾರಗಳನ್ನು ನೀಡಿ, ವಿವರಿಸಿ ಬಳ್ಳಾರಿಯು ಕರ್ನಾಟಕದ ಅವಿಭಾಜ್ಯ ಅಂಗವೆಂದು ಮನವರಿಕೆ ಮಾಡಿಕೊಟ್ಟರು. ಜಿಲ್ಲೆಯಲ್ಲಿ ನಡೆದ ಆಂದೋಲನದಲ್ಲಿ ಪಾಲ್ಗೊಂಡರು, ಜನ ಜಾಗೃತಿ ಮೂಡಿಸಿದರು. ಎಲ್ಲರ ಸತತ ಪ್ರಯತ್ನ, ಒಗ್ಗಟ್ಟಿನಿಂದಾಗಿ ಬಳ್ಳಾರಿ ಜಿಲ್ಲೆ ಕೊನೆಗೂ ಮೈಸೂರು ರಾಜ್ಯಕ್ಕೆ ಸೇರ್ಪಡೆಯಾಯಿತು.

೪. ೯ ಶ್ರೀ ಅಬ್ದುಲ್ ರಜಾಕ್ ಸಾಹೇಬ್

ಶ್ರೀ ಅಬ್ದುಲ್ ರಜಾಕ್ ಸಾಹೇಬ್ ಇವರು ಬಳ್ಳಾರಿ ಜಿಲ್ಲೆಯವರಾಗಿದ್ದು, ಏಕೀಕರಣ ಸಮಯದಲ್ಲಿ ಮುಸ್ಲಿಂ ಜನಾಂಗದ ನಾಯಕರಾಗಿ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ. ಅಬ್ದುಲ್ ರಜಾಕ್ ಸಾಹೇಬ್ ಬಳ್ಳಾರಿ ಪೌರಸಭೆಯ ಸದಸ್ಯರಾಗಿ ಸುಮಾರು ೨೪ ವರ್ಷಗಳ ಕಾಲ ಕಾರ್ಯನಿರ್ವಹಿಸಿದ್ದಾರೆ. ನಂತರ ಪುರಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದಾರೆ.

ಅಬ್ದುಲ್ ರಜಾಕ್ ಸಾಹೇಬ್ ಏಕೀಕರಣದ ಸಮಯದಲ್ಲಿ ಬಳ್ಳಾರಿಯ ಮುಸ್ಲಿಂ ಸಮುದಾಯದ ನಾಯಕರಾಗಿ ನೇತೃತ್ವವಹಿಸಿ ಜನಾಭಿಪ್ರಾಯ ರೂಪಿಸಿದರು. ಬಳ್ಳಾರಿಯನ್ನು ಮೈಸೂರಿಗೆ ಸೇರಿಸುವಲ್ಲಿ ಮಹತ್ವವಾದ ಕಾರ್ಯವನ್ನು ನಿರ್ವಹಿಸಿದರು. ಬಳ್ಳಾರಿಗೆ ವಿವಿಧ ಆಯೋಗಗಳು ಭೇಟಿ ನೀಡಿದಾಗ ತಮ್ಮ ಜನಾಂಗದೊಂದಿಗೆ ಆಯೋಗಗಳ ಮುಂದೆ ತಮ್ಮ ವಾದವನ್ನು ಮಂಡಿಸಿದರು. ಮೈಸೂರಿಗೆ ಬಳ್ಳಾರಿ ಜಿಲ್ಲೆಯನ್ನು ಸೇರಿಸಬೇಕು. ಇದರಿಂದ ತಮ್ಮ ಸಮುದಾಯದ ಬದುಕು ಕನ್ನಡಿಗರೊಂದಿಗೆ ಅಭಿವೃದ್ಧಿ ಹೊಂದುವುದು ಎಂದು ಒತ್ತಾಯಿಸಿದರು. ತಮ್ಮ ಜನಾಂಗದ ಪರವಾಗಿ ಬಳ್ಳಾರಿಯನ್ನು ಮೈಸೂರಿನಲ್ಲಿ ಸೇರಿಸುವುದಕ್ಕೆ ಅವರು ನೀಡಿರುವ ಮನವಿಗಳು ಗಮನಾರ್ಹವೆನಿಸಿವೆ. ಮಿಶ್ರಾ ಆಯೋಗ ಬಳ್ಳಾರಿಗೆ ಬಂದಾಗ ಅಬ್ದುಲ್ ರಜಾಕ್ ಅವರು ಮುಸ್ಲಿಮ್ ಸಮುದಾಯದ ನಿಯೋಗದೊಂದಿಗೆ ಭೇಟಿ ಮಾಡಿ ಆಯೋಗಕ್ಕೆ ಮನವಿ ಸಲ್ಲಿಸಿದರು.

ಬಳ್ಳಾರಿಯು ಮೈಸೂರಿಗೆ ಸೇರಿಸುವ ಸನ್ನಿವೇಶದಲ್ಲಿ ಮುಸ್ಲಿಂರ ಅಭಿಮತವು ಬಹಳ ಮಹತ್ವವಾಗಿತ್ತು. ಎರಡು ಕಡೆಯಲ್ಲಿ ಮುಸ್ಲಿಮರು ಇದ್ದರು. ಆದರೆ ಬಳ್ಳಾರಿಯ ಮುಸ್ಲಿಮರು ಅಬ್ದುಲ್ ರಜಾಕ್‌ರವರ ನೇತೃತ್ವ ದೊರೆತಿದ್ದರಿಂದ ಯಾವ ಅಂಜಿಕೆ, ಭೀತಿಯಿಲ್ಲದೆ ಕನ್ನಡವನ್ನು ಕರ್ನಾಟಕವನ್ನು ಸಮರ್ಥಿಸಿದರು. ಇದು ಅಲ್ಲದೆ ಅಬ್ದುಲ್ ರಜಾಕ್ ಸಾಹೇಬರು ತಮ್ಮ ಜೊತೆಗಾರರನ್ನು ಕರೆದುಕೊಂಡು ಪಂಡಿತ್ ನೆಹರು ಅವರನ್ನು ಭೇಟಿಯಾಗಿ ಬಳ್ಳಾರಿ ಸಮಸ್ಯೆಯನ್ನು ಆದಷ್ಟು ಬೇಗ ಬಗೆಹರಿಸಿ, ಜಿಲ್ಲೆಯನ್ನು ಮೈಸೂರಿನಲ್ಲಿ ವಿಲೀನಗೊಳಿಸುವಂತೆ ಒತ್ತಾಯ ಮಾಡಿದರು.

ಬಳ್ಳಾರಿಯಲ್ಲಿ ಚುನಾವಣೆ ನಡೆದಾಗ ಅಬ್ದುಲ್ ರಜಾಕ್ ಅವರು ಮನೆ ಮನೆಗೆ ತೆರಳಿ ಮತಗಳನ್ನು ಕನ್ನಡ ಅಭ್ಯರ್ಥಿಗೆ ಹಾಕುವಂತೆ ಮತದಾರರನ್ನು ಕೋರಿದರು. ಚುನಾವಣಾ ವೇದಿಕೆಗಳ ಮೂಲಕ ಭಾಷಣಗಳನ್ನು ಮಾಡಿ, ಆತ್ಮನಿಷ್ಠೆಯಿಂದ, ನಿರ್ಭೀಡೆಯಿಂದ ಮತ ಚಲಾಯಿಸುವಂತೆ ಜನರನ್ನು ಹುರಿದುಂಬಿಸಿದರು.

ಬಳ್ಳಾರಿ ಜಿಲ್ಲೆಯನ್ನು ಮೈಸೂರು ರಾಜ್ಯಕ್ಕೆ ಸೇರಿಸುವ ಸಮಯದಲ್ಲಿ ರಾಜ್ಯದ ಮುಖ್ಯಮಂತ್ರಿ ಮತ್ತು ಅವರ ಸಂಪುಟದ ಒಲವು ಮತ್ತು ಬಲವು ಬೇಕಾಗಿತ್ತು. ಬಳ್ಳಾರಿಯ ಕನ್ನಡ ಕ್ರಿಯಾ ಸಮಿತಿಯ ಮುಖಂಡರಾದ ಕೋ. ಚನ್ನಬಸಪ್ಪ, ಗಾದಿಲಿಂಗನಗೌಡ, ಅಲಂಕರಿಬಸಪ್ಪನವರ ಜೊತೆಯಲ್ಲಿ ಬೆಂಗಳೂರಿಗೆ ಹೋಗಿ ಮಂತ್ರಿಮಂಡಲದ ಸದಸ್ಯರ ಸಹಿಗಳನ್ನು ಪಡೆಯುವಲ್ಲಿ ರಜಾಕ್ ಸಾಹೇಬರು ವಹಿಸಿದ ಪಾತ್ರವು ಗಮನಾರ್ಹ ಎನಿಸಿದೆ.

ಮತ, ಧರ್ಮಗಳು ಏನೇ ಇರಲಿ ನಾವೆಲ್ಲ ಒಂದೇ ಎಂದು ತಿಳಿದಿದ್ದ ಬಳ್ಳಾರಿಯಲ್ಲಿನ ಮುಸ್ಲಿಮರ ವರ್ತನೆಯು ಬಹಳ ಪ್ರಶಂಸನೀಯವಾಗಿದೆ. ಅವರು ಕನ್ನಡ ಪರ ಚಳವಳಿಯಲ್ಲಿ ಭಾಗಿಯಾಗಿ ಬಳ್ಳಾರಿಯನ್ನು ಕರ್ನಾಟಕದಲ್ಲಿ ಉಳಿಯುವಂತೆ ಮಾಡಿದ್ದಾರೆ. ಅಬ್ದುಲ್ ರಜಾಕ್ ಸಾಹೇಬರಂತಹ ಮುಖಂಡರು ಆ ಸಂದರ್ಭದಲ್ಲಿದ್ದುದರಿಂದಲೇ ಇದೆಲ್ಲಾ ಸಾಧ್ಯವಾಯಿತು ಎನ್ನುವುದರಲ್ಲಿ ಉತ್ಪ್ರೇಕ್ಷೆಯೇನೂ ಇಲ್ಲ.

*ಈ ಅಧ್ಯಾಯವನ್ನು ಸಿದ್ಧಪಡಿಸುವಲ್ಲಿ ಬಳ್ಳಾರಿ ವಿ.ವಿ.ಸಂಘದ 'ಸುವರ್ಣ ಸಂಚಯ' ಸ್ಮರಣ ಸಂಚಿಕೆ ಹಾಗೂ ಶ್ರೀ ಜೈನುಲ್ಲಾ ಬಳ್ಳಾರಿ ಇವರ ವೈಯಕ್ತಿಕ ಸಂಗ್ರಹದಿಂದ ಮಾಹಿತಿ ಪಡೆಯಲಾಗಿದೆ.

೫

ಬಳ್ಳಾರಿ ಜಿಲ್ಲೆಯ ಏಕೀಕರಣದಲ್ಲಿ ಜನಸಾಮಾನ್ಯರು

೫.೧ ಕನ್ನಡಪರ ಚಳವಳಿಯಲ್ಲಿ ಜನಸಾಮಾನ್ಯರು
೫.೨ ಆಯೋಗಗಳ ಮುಂದೆ ಜನಸಾಮಾನ್ಯರು
೫.೩ ಪೋಸ್ಟ್ ಕಾರ್ಡ್ ಚಳವಳಿಯಲ್ಲಿ ಜನಸಾಮಾನ್ಯರು
೫.೪ ನೀರಿನ ಸತ್ಯಾಗ್ರಹದಲ್ಲಿ ಜನಸಾಮಾನ್ಯರು
೫.೫. ಕಾರಾಗೃಹ ವಾಸದಲ್ಲಿ ಜನಸಾಮಾನ್ಯರು
೫.೬ ಚುನಾವಣೆಯಲ್ಲಿ ಜನಸಾಮಾನ್ಯರು
೫.೭ ವೀರಶೈವರ ಪಾತ್ರ
೫.೮ ಬಳ್ಳಾರಿ ಜಿಲ್ಲೆಯ ವಿಲೀನ ಸಮಾರಂಭದಲ್ಲಿ ಜನಸಾಮಾನ್ಯರು

ಕನ್ನಡವೆಂಬುದು ದೇಶ, ಜನ ಮತ್ತು ಭಾಷೆ ಹೀಗೆ ಮೂರು ಸಂಗತಿಗಳನ್ನು ಪ್ರತಿನಿಧಿಸುತ್ತದೆ. ದೇಶಾವಾಂಚಿಯಾಗಿದ್ದಾಗ ಕರ್ನಾಟಕವನ್ನು, ಜನವಾಂಚಿಯಾದಾಗ ಕನ್ನಡಿಗರನ್ನು, ಭಾಷಾವಾಚಿಯಾದಾಗ ಕನ್ನಡವನ್ನು ಸೂಚಿಸುತ್ತದೆ. ಕನ್ನಡಪರ ಚಳುವಳಿಗಳು ಈ ಮೂರರಲ್ಲಿ ಯಾವುದೇ ಒಂದನ್ನು ತಮ್ಮ ಮುಖ್ಯ ಗುರಿ ಎಂದು ಹೇಳಿದರೂ ಉಳಿದೆರಡು ಒಂದಲ್ಲೊಂದು ರೀತಿಯ ಸಂಬಂಧವನ್ನು ಪಡೆದುಕೊಂಡಿರುತ್ತವೆ. ಯಾವುದೇ ಚಳುವಳಿ ಹಾಗೂ ಹೋರಾಟ ನಡೆದರು ಅದರಲ್ಲಿ ಜನ ಸಾಮಾನ್ಯರು ಭಾಗವಹಿಸುತ್ತಾರೆ. ಚಳುವಳಿಗಳ ಇತಿಹಾಸವನ್ನು ಅವಲೋಕಿಸಿದಾಗ ಜನರು ಪಾಲ್ಗೊಂಡ ನಂತರವೇ ಚಳುವಳಿಯು ಯಶಸ್ವಿಯಾಗಿರುವುದು ಎಂದು ತಿಳಿದುಬರುತ್ತದೆ. ಭಾರತ ಸ್ವಾತಂತ್ರ್ಯಕ್ಕಾಗಿ ರಾಷ್ಟ್ರದ ನಾಯಕರು ಸಾಕಷ್ಟು ಪ್ರಯತ್ನ ಮಾಡಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಅಲ್ಪ ಪ್ರಮಾಣದ ಜನರು ಭಾಗವಹಿಸಿದರು. ಇದನ್ನು ಗಮನಿಸಿದ ಮಹಾತ್ಮ ಗಾಂಧೀಜಿಯವರು, ಎಲ್ಲಿಯವರೆಗೂ ಜನಸಾಮಾನ್ಯರು ಹೋರಾಟದಲ್ಲಿ ಪಾಲ್ಗೊಳ್ಳುವುದಿಲ್ಲವೋ ಅಲ್ಲಿಯವರೆಗೆ ಅದು ಯಶಸ್ವಿಯಾಗುವುದಿಲ್ಲ ಎಂದು ಹೇಳಿದರು. ಅದಕ್ಕಾಗಿ ಅವರು ಹಳ್ಳಿ ಹಳ್ಳಿಗಳಿಗೂ ಭೇಟಿ ಮಾಡಿ ಜನ ಸಾಮಾನ್ಯರನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗುವಂತೆ ಮಾಡಿದರು. ಮಹಾತ್ಮ ಗಾಂಧಿಜೀಯವರು ರಾಷ್ಟ್ರದ ನಾಯಕರಾದ ನಂತರವೇ ಜನರು ಹೋರಾಟದಲ್ಲಿ ಪಾಲ್ಗೊಳ್ಳಲು ಪ್ರಾರಂಭಿಸಿದ್ದರು.

ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ನಾಯಕತ್ವದ ಶ್ರಮದಿಂದಲ್ಲದೆ, ಜನಸಾಮ್ಯಾರ ಹೋರಾಟವು ಮುಖ್ಯವಾಗಿದೆ. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಕರ್ನಾಟಕದ ಜನರು ಎರಡು ರೀತಿಯಾದ ಚಳುವಳಿಗಳನ್ನು ಮಾಡುತ್ತಿದ್ದರು. ಅದರಲ್ಲಿ, ಭಾರತದ ಸ್ವಾತಂತ್ರ್ಯ ಗಳಿಸುವುದು ಜನಸಾಮಾನ್ಯರ ಮೊದಲ ಗುರಿಯಾಗಿದರೂ, ಅದರ ಜೊತೆಯಲ್ಲಿಯೇ ಕರ್ನಾಟಕದ ಏಕೀಕರಣದ ಕನಸನ್ನು ಕಾಣುತ್ತಿದರು. ಜನಸಾಮಾನ್ಯರು ಈ ರೀತಿ ಎರಡು ಚಳುವಳಿಗಳಲ್ಲಿ ಭಾಗವಹಿಸುತ್ತಿದ್ದರು. ಆದರೆ ರಾಷ್ಟ್ರ ನಾಯಕರ ಕರೆಯ ಮೇರೆಗೆ ಮೊದಲು ದೇಶದ ಸ್ವಾತಂತ್ರ್ಯ ಮುಖ್ಯವೆಂದು ಜನರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡರು. ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರ ಜನರು ಅಲ್ಲಿಗೆ ಸುಮ್ಮನಾಗಲಿಲ್ಲ. ಅದೇ ಉತ್ಸಾಹದಿಂದ ಕರ್ನಾಟಕ ಏಕೀಕರಣ ಹೋರಾಟದಲ್ಲಿ ಭಾಗವಹಿಸಿ, ಅದರ ಯಶ್ವಸಿಗೆ ಕಾರಣರಾದರು. ಕರ್ನಾಟಕ ಏಕೀಕರಣ ಚಳುವಳಿಯ ಭಾಗವಾಗಿ, ಬಳ್ಳಾರಿ ಜಿಲ್ಲೆಯು ಹೋರಾಟದಲ್ಲಿ ಮುಂಚೂಣಿಯಲ್ಲಿ ಇದ್ದಿತು. ಜಿಲ್ಲೆಯ ಜನರು ಮಹಾತ್ಮ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿದ್ದರು. ಅದಕ್ಕಾಗಿ ಪ್ರತಿಯೊಬ್ಬರು ರಾಷ್ಟ್ರಕ್ಕಾಗಿ ಹಾಗೂ ರಾಜ್ಯಕ್ಕಾಗಿ ಒಂದಲ್ಲೊಂದು ಸೇವೆಯನ್ನು ಮಾಡುವ ಆಸೆಯು ಈ ಭಾಗದ ಜನರಲ್ಲಿ ಮೂಡಿತ್ತು. ಈ ಕಾರಣದಿಂದಾಗಿ ಜನರು ಕನ್ನಡ ಭಾಷಿಕರಾಗಿ ಒಂದುಗೂಡುವುದಕ್ಕೆ ಸಾಧ್ಯವಾಯಿತು. ಈ ಮೂಲಕ ಕನ್ನಡಿಗರು ತಮ್ಮತನವನ್ನು ಕಂಡುಕೊಂಡ ಘಟನೆಯು ಕರ್ನಾಟಕ ಏಕೀಕರಣ ಹೋರಾಟದ ಇತಿಹಾಸದಲ್ಲಿ ಪ್ರಮುಖವಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಏಕೀಕರಣ ಚಳವಳಿಯು ಪಾರಂಭವಾಗಿದ್ದು, ಆಂಧ್ರ ರಾಜ್ಯ ನಿರ್ಮಾಣದ ಸಮಯದಲ್ಲಿ. ಇದಕ್ಕೂ ಮೊದಲು ಜಿಲ್ಲೆಯಲ್ಲಿ ಕನ್ನಡಪರ ಕಾರ್ಯಗಳು ಪಾರಂಭವಾಗಿದ್ದವು. ಆಲೂರು ವೆಂಕಟರಾಯರು, ಕಡಪಾ ರಾಘವೇಂದರಾಯರ, ಜನರಿಗೆ ಕನ್ನಡ ಮತ್ತು ಕರ್ನಾಟಕದ ಬಗ್ಗೆ ತಿಳುವಳಿಕೆ ನೀಡಿ ಪಚಾರ ಮಾಡಿದರು. ಕಡಪಾ ರಾಘವೇಂದರಾಯರು 'ಕರ್ನಾಟಕ ಸಭಾ'ದ ಮೂಲಕ ಪಕಟಿಸಿದ ಕನ್ನಡಿಗರ ಕರ್ತವ್ಯ ಎಂಬ ಕಿರುಹೊತ್ತಿಗೆಯು ಆ ನಿಟ್ಟಿನಲ್ಲಿ ಕನ್ನಡಿಗರ ಮನವೊಲಿಸಿ ಒಂದಾಗಬೇಕೆಂಬ ಪ್ರೇರಣೆ ನೀಡಲು ಸಹಕಾರಿಯಾಯಿತು. ಇಂತಹ ಪ್ರಯತ್ನಗಳು ಜನಸಾಮಾನ್ಯರಿಗೆ ಏಕೀಕರಣ ವಿಚಾರವನ್ನು ತಿಳಿಯುವಂತೆ ಮಾಡಿ ಅವರನ್ನು ಏಕೀಕರಣದಲ್ಲಿ ಪಾಲ್ಗೊಳ್ಳುವಂತೆ ಮಾಡಿದವು.

ಬಳ್ಳಾರಿ ಜಿಲ್ಲೆಯು ರಾಜಕೀಯವಾಗಿ ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿತ್ತು. ಈ ಪ್ರಾಂತ್ಯಕ್ಕೆ ಅಧಿಕಾರಿಗಳಾಗಿ ನೇಮಕಗೊಳ್ಳುತ್ತಿದ್ದವರಲ್ಲಿ ತೆಲುಗರ ಸಂಖ್ಯೆಯೇ ಅಧಿಕವಾಗಿತ್ತು. ಈ ಕಾರಣದಿಂದಾಗಿ ಇಲ್ಲಿ ತೆಲುಗು ಭಾಷೆಯ ಪ್ರಭಾವ ಹೆಚ್ಚಾಗಿತ್ತು. ಬಳ್ಳಾರಿ ಪಟ್ಟಣದ ಜನರು ಉಭಯ ಭಾಷೆಗಳ ಪ್ರಭಾವದಲ್ಲಿದ್ದರೂ ಕನ್ನಡವನ್ನು

ಸಶಕ್ತವಾಗಿ ಉಳಿಸಿಕೊಂಡ ಕೀರ್ತಿ ಇಲ್ಲಿನ ಗ್ರಾಮೀಣ ಭಾಗದ ಜನರಿಗೆ ಸಲ್ಲುತ್ತದೆ. ಜನಸಾಮಾನ್ಯರು ಕನ್ನಡವನ್ನು ಮಾತೃಭಾಷೆಯಾಗಿ ಬಳಸಿಕೊಂಡು ದಿನನಿತ್ಯದ ಜೀವನದಲ್ಲಿ ಅದನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬಂದರು. ಜಿಲ್ಲೆಯಲ್ಲಿ ಕನ್ನಡಿಗರನ್ನು ದುರ್ಬಲಗೊಳಿಸಲು ತೆಲುಗು ಭಾಷಿಕ ರಾಜಕಾರಣಿಗಳು, ನಿರಂತರ ಭಾಷಣ, ಹೇಳಿಕೆಗಳ ಮೂಲಕ ಪ್ರಯತ್ನಿಸಿದರು. ಇದು ಸಾಧ್ಯವಾಗದಿದ್ದಾಗ ರಾಜಕೀಯವಾಗಿಯೂ ಮರು ಪ್ರಯತ್ನಗಳನ್ನೂ ನಡೆಸಿದರು. ಈ ಎಲ್ಲಾ ಪ್ರಯತ್ನಗಳನ್ನು ಬಳ್ಳಾರಿಯ ಕನ್ನಡಿಗರು ಎದೆಗುಂದದೆ, ತಮ್ಮ ಭಾಷಿಕ ಹಕ್ಕನ್ನು ಕಾಯ್ದುಕೊಂಡರು. ಗ್ರಾಮಗಳಲ್ಲಿ ಕನ್ನಡ ದೇಶಿಯ ಶಾಲೆಗಳನ್ನು ಪ್ರಾರಂಭಿಸಿ ಕನ್ನಡವನ್ನು ಉಳಿಸಿಕೊಂಡರು. ಬಳ್ಳಾರಿ ಪ್ರದೇಶದ ಜನಸಾಮಾನ್ಯರನ್ನು ಕನ್ನಡ ಪರವಾಗಿ ನಿಲ್ಲುವಂತೆ ಮಾಡಲು ಏಕೀಕರಣದ ಹೋರಾಟಗಾರರು ಮುಂದಾಗಬೇಕಾಯಿತು. ಕನ್ನಡ ಭಾಷೆ ಮತ್ತು ಸಂಸ್ಕೃತಿ, ಅದನ್ನು ಉಳಿಸುವುದಕ್ಕಾಗಿ ಮಾಡಬೇಕಾದ ಕರ್ತವ್ಯಗಳು ಇತ್ಯಾದಿ ವಿಚಾರಗಳನ್ನು ಅವರು ತಮ್ಮ ಭಾಷಣಗಳ ಮೂಲಕ ತಿಳಿಸುತ್ತಿದ್ದರು. ಜನರು ಮುಖಂಡರ ವಿಚಾರಗಳನ್ನು ಆಸಕ್ತಿಯಿಂದ ಗ್ರಹಿಸಿಕೊಂಡು ಚಳವಳಿಯಲ್ಲಿ ಭಾಗವಹಿಸಿದ್ದರು. ಬಳ್ಳಾರಿ ಏಕೀಕರಣದ ಹೋರಾಟದಲ್ಲಿ ಭಾಗವಹಿಸಿದವರನ್ನು ಆಯಾ ಸಂದರ್ಭಗಳ ಮೂಲಕ ಗುರುತಿಸಬೇಕಾಗುತ್ತದೆ.

೫. ೧. ಕನ್ನಡಪರ ಚಳವಳಿಯಲ್ಲಿ ಜನಸಾಮಾನ್ಯರು

ಕರ್ನಾಟಕ ಏಕೀಕರಣದ ಸಮಯದಲ್ಲಿ ಕನ್ನಡ ಕಟ್ಟುವ ಕಾರ್ಯವು ಪ್ರಾರಂಭವಾಗಿತ್ತು. ಆ ನಿಟ್ಟಿನಲ್ಲಿ ಅನೇಕ ನಾಯಕರು ಕನ್ನಡಪರ ಕಾರ್ಯಗಳನ್ನು ಮಾಡತೊಡಗಿದರು. ಬಳ್ಳಾರಿಯಲ್ಲಿಯೂ ಕನ್ನಡ ಪರ ಚಳವಳಿಯ ಕಾವು ಏರೊತೊಡಗಿತ್ತು. ಆ ನಿಟ್ಟಿನಲ್ಲಿ ಬಳ್ಳಾರಿ ತಾಲ್ಲೂಕಿನ ಚೆಳ್ಳಗುರ್ಕಿ ಗ್ರಾಮವೂ ಆಂಧ್ರಪ್ರದೇಶಕ್ಕೆ ಕೆಲವೇ ಕಿಲೋಮೀಟರ್‌ಗಳ ದೂರದಲ್ಲಿದೆ. ಇದರಿಂದ ಈ ಕಡೆಯಿಂದ ಹೋಗುವ ಬಸ್ಸುಗಳಲ್ಲಿ ತೆಲುಗು ನಾಮಫಲಕಗಳನ್ನು ಹಾಕುತ್ತಿದ್ದರು. ಗ್ರಾಮದ ಯುವಕರು ಸೇರಿಕೊಂಡು ಬಸ್ಸಿನಲ್ಲಿ ಕನ್ನಡ ಫಲಕಗಳನ್ನು ಹಾಕಬೇಕು ಎಂಬ ಬೇಡಿಕೆಯನ್ನಿಟ್ಟು ಚಳವಳಿಯನ್ನು ಪ್ರಾರಂಭಿಸಿದರು. ಗ್ರಾಮದ ಜನರು ಭಾಗವಹಿಸಿ, ಚಳವಳಿಯನ್ನು ಅನೇಕ ದಿನಗಳವೆರೆಗೆ ಮುಂದುವರೆಸಿದರು. ಸರ್ಕಾರವು ಇದನ್ನು ನಿಲ್ಲಿಸುವುದಕ್ಕೆ ಪೊಲೀಸರನ್ನು ಚೆಳ್ಳಗುರ್ಕಿಗೆ ಕಳುಹಿಸಿಕೊಟ್ಟರು. ಪೊಲೀಸರ ದೌರ್ಜನ್ಯಕ್ಕೆ ಅನೇಕ ಜನರು ಒಳಗಾಗಿದ್ದರು. ಅವರಲ್ಲಿ ಕೊಟ್ರಯ್ಯ ಮತ್ತು ನಾಗನಗೌಡರು ಸೇರಿದ್ದಾರೆ. ಚೆಳ್ಳಗುರ್ಕಿಯ ಘಟನೆ ಏಕೀಕರಣದ ಮುಖಂಡರಿಗೆ ಮುಖ್ಯ ದಾಳವಾಗಿ ದೊರಕಿತು. ಅಳವಂಡಿ ಶಿವಮೂರ್ತಿ ಸ್ವಾಮಿಯವರು ಸೇರಿದಂತೆ ಅನೇಕ ಮುಖಂಡರು ಬಳ್ಳಾರಿಯಲ್ಲಿ ಚಳವಳಿಗೆ ನಾಂದಿ ಹಾಡಿದರು. ಚಳುವಳಿಯಿಂದಾಗಿ ಬಸ್ಸಿನಲ್ಲಿ ಕನ್ನಡ ನಾಮಫಲಕವನ್ನು ಹಾಕುವಂತೆ ಮಾಡಿದರು. ಈ ಚಳವಳಿಯು ಗ್ರಾಮದ ಮತ್ತೊಂದು ಘಟನೆಯು ಕೂಡ ನಡೆಯಿತು. ಆಂಧ್ರದ ನೀಲಂ ಸಂಜೀವರೆಡ್ಡಿಯವರು ರೈಲಿನಲ್ಲಿ ತಮ್ಮ ಗ್ರಾಮದ ಮೂಲಕ ಬಳ್ಳಾರಿಗೆ ಬರುವರೆಂದು ತಿಳಿದು ಗ್ರಾಮದ ಜನರೆಲ್ಲ ಸೇರಿಸಿಕೊಂಡು ರೈಲನ್ನು ೩೦ ನಿಮಿಷಗಳ ಕಾಲ ನಿಲ್ಲಿಸಿದರು. ಆಗ ಪೊಲೀಸರು ಬಂದು ಸುಮಾರು ೪೦ ಜನರನ್ನು ಬಂಧಿಸಿ ಕೌಲ್‌ಬಜಾರ್ ಪೊಲೀಸ್ ಠಾಣೆಗೆ ಕರೆದೊಯ್ದು ಅನಂತರ ಬಿಡುಗಡೆ ಮಾಡಿದರು. ಇಂತಹ ಈ ಘಟನೆಗಳು ಬಳ್ಳಾರಿ ಜಿಲ್ಲೆಯ ಗ್ರಾಮೀಣ ಪ್ರದೇಶದ ಜನರು ಕನ್ನಡಪರ ಹೋರಾಟದಲ್ಲಿ ಎಷ್ಟು ಆಸಕ್ತರಾಗಿದ್ದರು ಎಂಬುದನ್ನು ವ್ಯಕ್ತಪಡಿಸುತ್ತದೆ. ಏಕೀಕರಣದ ಹೋರಾಟದಲ್ಲಿ ಇಂತಹ ಘಟನೆಗಳು ಕೂಡ ದಾಖಲಾರ್ಹವಾಗಿವೆ.

೫. .೨ ಆಯೋಗಗಳ ಮುಂದೆ ಜನಸಾಮಾನ್ಯರು

ಬಳ್ಳಾರಿಯ ಏಕೀಕರಣದ ಸಂದರ್ಭದಲ್ಲಿ ಜನ ಸಾಮಾನ್ಯರ ಪಾತ್ರ ಹಿರಿದಾಗಿತ್ತು. ಬಳ್ಳಾರಿಯ ಸಮಸ್ಯೆಯನ್ನು ಬಗೆಹರಿಸಲು ಕೇಂದ್ರಸರ್ಕಾರವು ಒಂದಾದ ನಂತರ ಒಂದರಂತೆ ಆಯೋಗಗಳನ್ನು ಕಳುಹಿಸುತ್ತಿದ್ದರು. ಈ ಸಂದರ್ಭದಲ್ಲಿ ಏಕೀಕರಣದ ನಾಯಕರ ಮನವಿಗಳಿಗಿಂತ ಜನಸಾಮಾನ್ಯರ ಅಭಿಮತ ಮತ್ತು ಅಭಿಪ್ರಾಯಗಳಿಗೆ ಮಹತ್ವ ಇತ್ತು. ಅನಿಸಿಕೆಗಳು ದಾಖಲಾಗಬೇಕಿತ್ತು. ಬಳ್ಳಾರಿಯ ಜನರು ಬಹಳ ಆಸಕ್ತಿಯಿಂದ ಆಯೋಗಗಳ ಮುಂದೆ ಹೋಗಿ ತಮ್ಮ ಮನವಿಗಳನ್ನು ಮತ್ತು ಹೇಳಿಕೆಗಳನ್ನು ಕೊಡುತ್ತಿದ್ದರು.

ಮಿಶ್ರಾ ಆಯೋಗವು ಬಳ್ಳಾರಿ ಜಿಲ್ಲೆಯ ಭವಿಷ್ಯವನ್ನು ನಿರ್ಧರಿಸುವ ಪ್ರಮುಖ ಆಯೋಗವಾಗಿತ್ತು. ಬಳ್ಳಾರಿಗೆ ಈ ಆಯೋಗವು ಬಂದಾಗ ಸುತ್ತಮುತ್ತಲಿನ ಹಳ್ಳಿಗಳಿಂದ ಅನೇಕ ಜನರು ತಂಡೋಪತಂಡಗಳಾಗಿ ಬಂದು ಬಳ್ಳಾರಿಯನ್ನು ಕರ್ನಾಟಕದಲ್ಲಿ ಉಳಿಸಿ ಎಂದು ತಮ್ಮ ಹಕ್ಕೊತ್ತಾಯಗಳನ್ನು ದಾಖಲಿಸತೊಡಗಿದರು.

ತಮ್ಮ ಮಾತೃಭಾಷೆ ಕನ್ನಡವೆಂದು ಅವರಿಗೆ ಮನವರಿಕೆ ಮಾಡಿಕೊಟ್ಟರು. ಹಿರೇಹಾಳ್ ಇಬ್ರಾಹಿಂ ಸಾಬ್ ಅವರು ಹೇಳುವಂತೆ "ಈ ಕಾರ್ಯಕ್ಕಾಗಿ ಅವರು ಅನೇಕ ಜನರನ್ನು ಸೇರಿಸಿಕೊಂಡು ಸೈಕಲ್‌ನಲ್ಲಿ ಮನೆ ಮನೆಗೆ ಹೋಗಿ ಜನರಿಗೆ ಕನ್ನಡ ಪರವಾಗಿ ಮತಹಾಕುವಂತೆ, ಹಾಗೂ ಕನ್ನಡ ತಮ್ಮ ಮಾತೃಭಾಷೆ ಎಂದು ಆಯೋಗದ ಮುಂದೆ ತಿಳಿಸುವಂತೆ" ಮನವಿ ಮಾಡಿದರು. ಅದೇ ರೀತಿಯಾಗಿ ತಂಬ್ರಹಳ್ಳಿಯಿಂದ ಕೆ. ಚನ್ನಬಸವನಗೌಡರು ಮತ್ತು ಕೆಲವು ಸ್ವಯಂ ಸೇವಕರು ಮಿಶ್ರಾ ಆಯೋಗಕ್ಕೆ ಮನವಿಯನ್ನು ನೀಡಿದರು. ಮನವಿಯನ್ನು ನೀಡಲು ಬಂದಿದ್ದ ಅನೇಕ ಕಾರ್ಯಕರ್ತರು ಮೋಕಾ ಗ್ರಾಮದಲ್ಲಿ ಕನ್ನಡ ಪರವಾಗಿ ಮೆರವಣಿಗೆಯನ್ನು ನಡೆಸಿದರು. ಇದರಿಂದ ಅಲ್ಲಿನ ಆಂಧ್ರ ಅಭಿಮಾನಿಗಳು ಕಾರ್ಯಕರ್ತರ ಮೇಲೆ ಹಲ್ಲೆ ಮಾಡಿದ್ದರಿಂದ ಅವರೆಲ್ಲರು ಆಸ್ಪತ್ರೆಗೆ ಸೇರಿದರು. ಗಾಯಾಳುಗಳಾಗಿದ್ದರೂ ಸಹ ಚಿಕಿತ್ಸೆ ಪಡೆದುಕೊಂಡು ಬೃಹತ್ ಮೆರವಣಿಗೆಯ ಮೂಲಕ ಶ್ರೀ ಮಿಶ್ರಾರನ್ನು ಭೇಟಿ ಮಾಡಿ ಬಳ್ಳಾರಿಯನ್ನು ಕರ್ನಾಟಕಕ್ಕೆ ಸೇರಬೇಕೆಂದು ಮನವಿಗಳನ್ನು ಅರ್ಪಿಸಿದರು.

ಬಳ್ಳಾರಿ ಜನರು ತಾವು ಕರ್ನಾಟಕದಲ್ಲಿ ಉಳಿಯಬೇಕೆಂದು ಬಳ್ಳಾರಿಯನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ಹೇಳಿಕೆಗಳನ್ನು ನೀಡಿದರು. ಬಳ್ಳಾರಿಯಲ್ಲಿ ಮುಸ್ಲಿಂ ಸಮುದಾಯದವರು ಬಹುಸಂಖ್ಯೆಯಲ್ಲಿ ನೆಲೆಸಿದ್ದರು. ಮಾತೃಭಾಷೆ ಉರ್ದುವಾಗಿತ್ತು. ಆದರೂ ಈ ಜನಾಂಗದವರು ತಮ್ಮ ಒಲವನ್ನು ಕನ್ನಡದ ಪರವಾಗಿ ವ್ಯಕ್ತಪಡಿಸಿದರು. ಮಿಶ್ರಾ ಆಯೋಗದ ಮುಂದೆ ಮುಸ್ಲಿಮರು ತಾವು ಕರ್ನಾಟಕದಲ್ಲಿ ಉಳಿಯಲು ಇಚ್ಛಿಸುತ್ತೇವೆಂದು ಮನವಿಯಲ್ಲಿ ತಿಳಿಸಿ, ಬಳ್ಳಾರಿಯನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ಬೇಡಿಕೆಯನ್ನು ಸಲ್ಲಿಸಿದರು. ಚಳುವಳಿಯ ಸಮಯದಲ್ಲಿ ಅವರು ಸಕ್ರಿಯವಾಗಿ ಭಾಗವಹಿಸಿದರು. ಮುಸ್ಲಿಮರಲ್ಲಿ ಅನೇಕರು ಬೀಡಿಕಟ್ಟುವ ಕಾರ್ಖಾನೆಯ ಕಾರ್ಮಿಕರಾಗಿದ್ದರು, ಇವರುಗಳು ತಮ್ಮ ಮಾಲೀಕರ ಪರವಾಗಿ ಹೋರಾಟದಲ್ಲಿ ಪಾಲ್ಗೊಳ್ಳುತ್ತಿದ್ದರು. ಈ ರೀತಿ ಮಾಲೀಕರು ಯಾರ ಪರವಾಗಿ ಹೋರಾಡಿದರು ಅವರ ಬೆಂಬಲಕ್ಕೆ ಎಲ್ಲಾ ಕಾರ್ಮಿಕರು ಹೋಗುತ್ತಿದರು. ಪಿಂಜಾರ್ ರಂಜಾನ್ ಸಾಹೇಬರು ಒಬ್ಬ ಸಾಮಾನ್ಯ ವ್ಯಕ್ತಿಯಾಗಿ ತಮ್ಮ ಜನಾಂಗದವರನ್ನು ಒಂದುಗೂಡಿಸಿಕೊಂಡು ಹೋರಾಟದಲ್ಲಿ ಭಾಗವಹಿಸಿದರು. ರಂಜಾನ್ ಸಾಬ್ ಜೊತೆಯಲ್ಲಿ ಕೂಲಿ ಕೆಲಸ ಮಾಡುವವರು, ಹಮಾಲಿಗಳು, ಜಟಕಾ ಓಡಿಸುವವರು, ರಿಕ್ಷಾ ಓಡಿಸುವವರು ಸೇರಿದ್ದರು. ಇವರೆಲ್ಲರು ಮಿಶ್ರಾ ಆಯೋಗದ ಸಮಯದಲ್ಲಿ ಸಂಘಗಳನ್ನು ಮಾಡಿಕೊಂಡು ಆಯೋಗಕ್ಕೆ ಮನವಿಗಳನ್ನು ಅರ್ಪಿಸಿದರು. ಮುಸ್ಲಿಂ ನಾಯಕರಾದ ಅಬ್ದುಲ್ ರಜಾಕ್‌ರ ನೇತೃತ್ವದಲ್ಲಿ ೨೦ ಮಂದಿ ಪ್ರತಿನಿಧಿಗಳು ಆಯೋಗದ ಸದಸ್ಯರನ್ನು ಕಂಡು ತಾವು ಮೈಸೂರು ರಾಜ್ಯದಲ್ಲಿ ಸುಖವಾಗಿರುವುದಾಗಿಯೂ, ಇಲ್ಲಿಯೇ ಮುಂದುವರಿಯೂವುದಾಗಿಯೂ ಕರ್ನಾಟಕವನ್ನು ಒಂದು ಮಾಡಲು ಆಯೋಗವು ಶಿಫಾರಸ್ಸು ಮಾಡಬೇಕೆಂದು ಮನವಿ ಮಾಡಿದರು. ಪಿಂಜಾರ್ ರಂಜಾನ್ ಸಾಹೇಬ್, ಕಾರೇಕಲ್ ಗೌಸ್ ಇವರು ಜನ ಸಾಮಾನ್ಯರನ್ನು ಪ್ರತಿನಿಧಿಸಿ ಆಯೋಗದ ಮುಂದೆ ಬಳ್ಳಾರಿಯನ್ನು ಮೈಸೂರಿಗೆ ಸೇರಿಸುವಂತೆ ಮನವಿಯನ್ನು ಅರ್ಪಿಸಿದರು. ಮಿಶ್ರಾ ಆಯೋಗವು ಗ್ರಾಮಗಳನ್ನು ಸಂದರ್ಶಿಸಿದಾಗ ಅನೇಕ ಜನರು ಭಾಗವಹಿಸಿ ತಮ್ಮ ಮಾತೃಭಾಷೆ ಕನ್ನಡವಾಗಿದ್ದು, ತಾವು ಮೈಸೂರಿಗೆ ಸೇರುವುದಾಗಿ ಹೇಳಿಕೊಂಡರು. ಬಳ್ಳಾರಿಯ ಸುತ್ತಮುತ್ತಲಿನ ಹಳ್ಳಿಯ ಜನರು ಈ ಸಂದರ್ಭದಲ್ಲಿ ಮಹತ್ವವಾದ ಪಾತ್ರ ವಹಿಸಿದರು. ಸಾಮಾನ್ಯ ಜನರು ಆಯೋಗಗಳ ಮುಂದೆ ತಮ್ಮ ಅಭಿಪ್ರಾಯಗಳನ್ನು, ಮನವಿಗಳನ್ನು ಸಲ್ಲಿಸುವುದರ ಮೂಲಕ ಕರ್ನಾಟಕ ಏಕೀಕರಣದಲ್ಲಿ ಅಸಮಾನ್ಯವಾದ ಪಾತ್ರವನ್ನು ವಹಿಸಿದರು.

೫. ೩ ಪೋಸ್ಟ್‌ಕಾರ್ಡು ಚಳುವಳಿಯಲ್ಲಿ ಜನಸಾಮಾನ್ಯರು

ಬಳ್ಳಾರಿ ಕ್ರಿಯಾ ಸಮಿತಿಗಳು ಆಯೋಜಿಸುತ್ತಿದ್ದ ಸಭೆಗಳಲ್ಲಿ ಎಲ್ಲ ವರ್ಗದ ಜನರು ಸಾಮಾನ್ಯವಾಗಿ ಭಾಗವಹಿಸುತ್ತಿದ್ದರು. ಸಮಿತಿಯು ಪೋಸ್ಟ್‌ಕಾರ್ಡು ಚಳುವಳಿಯನ್ನು ಪ್ರಾರಂಭಿಸಿತು. ಅದರಲ್ಲಿ ಅನಕ್ಷರಸ್ಥ ಜನರು ತಾವೇ ಪೋಸ್ಟ್‌ಕಾರ್ಡ್‌ಗಳನ್ನು ತಂದು ಬರೆಸಿಕೊಂಡು ಕೇಂದ್ರ ಸರ್ಕಾರಕ್ಕೆ ಮತ್ತು ಆಯೋಗಗಳಿಗೆ ಕಳುಹಿಸಿತ್ತಿದ್ದರು. ಇದು ಅಲ್ಲದೇ ಕೇಂದ್ರಕ್ಕೆ ಏಕೀಕರಣಕ್ಕೆ ಒತ್ತಾಯಿಸುವುದಕ್ಕಾಗಿ ಅನೇಕ ಜನರ ಸಹಿಗಳನ್ನು ಸಂಗ್ರಹಿಸಿ ಮನವಿಗಳ ಮೂಲಕ ಕಳುಹಿಸುತ್ತಿದ್ದರು, ಈ ಕಾರ್ಯದಲ್ಲಿ ರಂಜಾನ್ ಸಾಹೇಬರು ಮತ್ತು ಅವರ ಜೊತೆಯಲ್ಲಿ ಇದ್ದಂತಹ ಅನೇಕ ಜನರು ಪಾಲ್ಗೊಂಡು ಸಂಗ್ರಹಿಸುತ್ತಿದ್ದರು. ಈ ಚಳುವಳಿಗಳು ಸಫಲವಾಗುವಲ್ಲಿ ಜನ ಸಾಮಾನ್ಯರ ಪಾತ್ರ ಅನನ್ಯವಾಗಿತ್ತು.

೫.೪. ನೀರಿನ ಸತ್ಯಾಗ್ರಹದಲ್ಲಿ ಜನಸಾಮಾನ್ಯರು

ಬಳ್ಳಾರಿಯ ವಿಚಾರದಲ್ಲಿ ಮಿಶ್ರಾ ಆಯೋಗದ ವರದಿ ಅಂತಿಮಗೊಂಡಿದ್ದರೂ ಫಜಲ್ ಅಲಿ ಆಯೋಗವು ಅಥವಾ ರಾಜ್ಯ ಪುನರ್‌ವಿಂಗಡಣಾ ಆಯೋಗವು ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸುವಂತೆ ವರದಿಯಲ್ಲಿ ಸೂಚಿಸಿತು. ಆಂಧ್ರದವರಿಗೆ ತುಂಗಭದ್ರದವರೆಗೆ ವ್ಯಾಪಿಸಿಕೊಳ್ಳುವ ದೃಷ್ಟಿಯಿತ್ತು. ಅದಕ್ಕಾಗಿ, ವರದಿಯಲ್ಲಿ ಬಳ್ಳಾರಿ ಸೇರಿದಂತೆ ಹೊಸಪೇಟೆ ಮತ್ತು ಸಿರುಗುಪ್ಪ ತಾಲ್ಲೂಕುಗಳನ್ನು ಆಂಧ್ರಕ್ಕೆ ಸೇರಿಸಲು ತಿಳಿಸಿತು. ಈ ವರದಿಯಿಂದ ಬಳ್ಳಾರಿ ಜನರಿಗೆ ಆಘಾತವಾಯಿತು. ರಾಜ್ಯ ಪುನರ್ ವಿಂಗಡಣ ಆಯೋಗದ ವರದಿ ಬಂದ ನಂತರ ಜಿಲ್ಲೆಯಲ್ಲಿ ಹೋರಾಟಗಳು ತೀವ್ರಗೊಂಡವು. ಇಡೀ ಜಿಲ್ಲೆಯ ಜನರು ಆಯೋಗದ ತೀರ್ಮಾನವನ್ನು ವಿರೋಧಿಸಿ, ಹಳ್ಳಿ ಹಳ್ಳಿಗಳಲ್ಲಿ ಹರತಾಳ, ಸತ್ಯಾಗ್ರಹಗಳನ್ನು ಪ್ರಾರಂಭಿಸಿದರು. ಇದು ಗ್ರಾಮೀಣ ಜನರ ಜೀವನ ಮರಣದ ಹೋರಾಟವಾಗಿತ್ತು. ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸುತ್ತಾರೆ, ಆಂಧ್ರದವರು ತಮ್ಮನ್ನು ನುಂಗಿ ಹಾಕುತ್ತಾರೆಂಬ ವಿಚಾರವು ಜನರ ಮನಸ್ಸಿನ ಮೇಲೆ ತೀವ್ರ ಪರಿಣಾಮ ಬೀರಿತ್ತು. ಇದರಿಂದ ಹಳ್ಳಿಯ ಜನರು ತಮ್ಮ ಭವಿಷ್ಯಕ್ಕಾಗಿ ಎದ್ದುನಿಲ್ಲಬೇಕಾಯಿತು.

ಫಜಲ್ ಅಲಿ ಆಯೋಗದ ವರದಿಯ ನಂತರ ೨೯.೧೦.೧೯೫೫ ರಂದು ಭಾರತೀಯ ಕಾಂಗ್ರೆಸ್ ಅಧ್ಯಕ್ಷರಾದ ಡೇಬರ್ ಅವರನ್ನು ಬಳ್ಳಾರಿ ಜಿಲ್ಲೆಯ ಸುಮಾರು ೪೦ ಜನ ಮಹಿಳೆಯರು ಚಿತ್ರದುರ್ಗದಲ್ಲಿ ಭೇಟಿಯಾಗಿ, ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಮನವಿಗಳನ್ನು ನೀಡಿದರು. ಅವರಲ್ಲಿ ಮುದುಕಿಯೊಬ್ಬಳು ಈ ರೀತಿ ಹೇಳಿದ್ದಳು. "ಇದು ಸಾಯುವ ಜೀವ, ಯಾವ ಆಸೆಯೂ ಇಲ್ಲ, ಆದರೆ ಬಳ್ಳಾರಿ ಜಿಲ್ಲೆಯು ಕರ್ನಾಟಕದಲ್ಲೇ ಇರುವುದನ್ನು ನೋಡಿ ಸಾಯುವ ಆಸೆ, ಎರಡು ವರ್ಷ ಮೈಸೂರಿನಲ್ಲಿ ಸುಖವಾಗಿದ್ದೆವು. ಈಗ ಏನೋ ಬದಲಾವಣೆ ಮಾಡುತ್ತಾರಂತೆ ಅದು ಆಗ ಕೂಡದು" ಎಂದು. ಈ ಮಹಿಳಾ ನಿಯೋಗವು ಅಲ್ಲಂ ಸುಮಂಗಳಮ್ಮ, ತೊಗರಿ ಸರ್ವಮಂಗಳ ಅವರ ನೇತೃತ್ವದಲ್ಲಿ ಚಿತ್ರದುರ್ಗಕ್ಕೆ ಹೋಗಿತ್ತು. ಆ ಸಂದರ್ಭದಲ್ಲಿ ಅವರು ಹೊಟ್ಟೆಗೆ ಬೆಂಕಿ ಬಿದ್ದಿದೆ ಎಂದು ತುಂಬಾ ವ್ಯಗ್ರವಾಗಿಯೇ ಕಾಂಗ್ರೆಸ್ ಅಧ್ಯಕ್ಷರಿಗೆ ಮನವರಿಕೆ ಮಾಡಿಕೊಟ್ಟರು.

ತುಂಗಭದ್ರ ಅಣೆಕಟ್ಟಿನ ಮೇಲ್ಭಾಗ ಆಂಧ್ರಕ್ಕೆ ಹೋಗುವುದರಲ್ಲಿದೆ ಅಂತ ಕೇಳಿದ ಬಳ್ಳಾರಿಯ ಜನರು ಉದ್ವೇಗಗೊಂಡರು. ಆಗ ಏಕೀಕರಣದ ನಾಯಕರು ಬಳ್ಳಾರಿಯನ್ನು ಕರ್ನಾಟಕದಲ್ಲೇ ಉಳಿಸಿಕೊಳ್ಳಲು ತುಂಗಭದ್ರಾ ಹೋರಾಟ ಸಮಿತಿಯನ್ನು ಮಾಡಿಕೊಂಡರು, ಸಮಿತಿಯ ಅಧ್ಯಕ್ಷತೆಯನ್ನು ಅ. ಕ. ರಾ. ನಿ. ಪರಿಷತ್ತಿನ ಅಳವಂಡಿ ಶಿವಮೂರ್ತಿ ಸ್ವಾಮಿಯವರು ವಹಿಸಿಕೊಂಡರು. ೧೬.೧೧.೧೯೫೫ ರಂದು ಅ. ಕ. ರಾ. ನಿ. ಪರಿಷತ್ತು ಶಾಂತಿಯುತವಾದ ಹಾಗೂ ಅಹಿಂಸಾತ್ಮಕ ಸತ್ಯಾಗ್ರಹವನ್ನು ಆರಂಭಿಸಿತು. ಪ್ರತಿ ದಿನ ನೂರಾಒಂದು ಜನರು ತುಂಗಭದ್ರ ಕಾಲುವೆಯಿಂದ ಬಿಂದಿಗೆಯಲ್ಲಿ ನೀರನ್ನು ತುಂಬಿಕೊಂಡು ಬಂದು ಕರ್ನಾಟಕದ ಜಮೀನಿಗೆ ಹಾಕುವುದು. ಸತ್ಯಾಗ್ರಹಿಗಳ ಕಾರ್ಯವಾಗಿತ್ತು. ಪ್ರತಿದಿನ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವ ೧೦೧ ಜನರ ಹೆಸರನ್ನು ಹಿಂದಿನ ದಿನವೇ ಕಲೆಕ್ಟರ್‌ಗೆ ಒದಗಿಸಲಾಗುತ್ತಿತ್ತು. ೧೬.೧೧.೧೯೫೫ರ ಬೆಳಿಗ್ಗೆ ೯ ಗಂಟೆಗೆ ಸರಿಯಾಗಿ ಸಿರುಗುಪ್ಪ ತಾಲ್ಲೂಕು ಕೊಂಚಗೇರಿಯಲ್ಲಿ ಯರ್‍ರಿತಾತ ನೇತೃತ್ವದಲ್ಲಿ ೫೮ ಜನರ ತಂಡವು ನೀರಿನ ಸತ್ಯಾಗ್ರಹವನ್ನು ಆರಂಭಿಸಿತು. ಬ್ಯಾಂಡ್, ಕೋಚು, ಕಹಿಕೆ ಮುಂತಾದ ವಾದ್ಯಗಳೊಡನೆ ತ್ರಿವರ್ಣ ಧ್ವಜ ಹಿಡಿದು ಮೆರವಣಿಗೆಯಲ್ಲಿ ಬಂದ ಸತ್ಯಾಗ್ರಹಿಗಳಿಗೆ ದಾರಿಯುದ್ದಕ್ಕೂ ಹೆಣ್ಣು ಮಕ್ಕಳು ಆರತಿ ಎತ್ತಿ ಕಳುಹಿಸಿದರು. ಎಲ್ಲಾ ಸತ್ಯಾಗ್ರಹಿಗಳು ನಿರ್ಧಾರಿತ ಸ್ಥಳಕ್ಕೆ ಬಂದು ತಮ್ಮ ಕೊಡಗಳಲ್ಲಿ ಹರಿಯುತ್ತಿದ ತುಂಗಭದ್ರೆಯ ನೀರನ್ನು ತುಂಬಿಕೊಂಡು ಕಾನೂನನ್ನು ಉಲ್ಲಂಘಿಸಿದರು. ಈ ಪ್ರಥಮ ತಂಡದ ನಾಯಕತ್ವವನ್ನು ಶ್ರೀ ಎಂ. ಸತ್ಯವಂತರಾಯರು ವಹಿಸಿದ್ದರು. ಕಾನೂನು ಉಲ್ಲಂಘಿಸಿದಕ್ಕೆ ಅವರು ಬಂಧನಕ್ಕೆ ಒಳಗಾದರು. ಶ್ರೀ ಎಂ.ಸಿ.ರೇವಣ್ಣಸಿದ್ದಯ್ಯನವರ ನೇತೃತ್ವದಲ್ಲಿ ೫೧ ಜನರು ಶಿರಿಗೇರಿಯಲ್ಲಿ ಕಾಲುವೆಯನ್ನು ಅಡ್ಡಗಟ್ಟಿ ಆಂಧ್ರಕ್ಕೆ ಹೋಗುವ ನೀರನ್ನು ನಿಲ್ಲಿಸಿದರು. ಇವರುಗಳು ಸಹ ಬಂಧನಕ್ಕೆ ಒಳಗಾದರು. ನೀರಿನ ಸತ್ಯಾಗ್ರಹದಲ್ಲಿ ಪ್ರತಿಯೊಂದು ಗ್ರಾಮದ ಜನರು ಭಾಗವಹಿಸಿದ್ದರು. ಹೀಗೆ ಈ ಸತ್ಯಾಗ್ರಹ ನಡೆಸುವುದರ ಮೂಲಕ ೮.೧೨.೧೯೫೫ರ ಸುಮಾರಿಗೆ ೧,೨೦೦ ಜನರು ಬಂಧಿತರಾಗಿದ್ದರು. ಈ ಹೋರಾಟದಲ್ಲಿ ಬಡವ – ಬಲ್ಲಿದ ಎಂಬ ಭೇದವಿಲ್ಲದೇ ಜಿಲ್ಲೆಯ ಜನರು ಪಾಲ್ಗೊಂಡರು. ಹೋರಾಟದಲ್ಲಿ ಮಹಿಳೆಯರು ಸೇರಿದ್ದರು. ಕೋ. ಚೆ. ಯವರ ಹತ್ತಿರ ಅನಕ್ಷರಸ್ಥ

ಮುದುಕಿಯೊಬ್ಬಳು (ಲಿಂಗಮ್ಮವ್ವ) ಬಂದು ತನ್ನನ್ನು 'ಸತ್ಯಾಗ್ರಹದಲ್ಲಿ ಸೇರಿಸ್ಕೋ' ಎಂದು ಕೇಳಿದಳು. ಆದರೆ ಕೋ.ಚೆಯವರು 'ಅದು ನಿನ್ನಿಂದ ಆಗುವುದಿಲ್ಲ' ಎಂದು ಸಮಧಾನ ಮಾಡಿ, ನಮ್ಮ ಹೋರಾಟ ಯಶಸ್ವಿಯಾಗಲೆಂದು ಯರ‍್ರಿತಾತನನ್ನು ಪ್ರಾರ್ಥನೆ ಮಾಡು ಎಂದು ಮನೆಗೆ ಕಳುಹಿಸಿಕೊಟ್ಟರು. ಬಳ್ಳಾರಿಯ ಪ್ರತಿಯೊಬ್ಬರ ಆಸೆ–ಹಂಬಲವೆಲ್ಲವು ಬಳ್ಳಾರಿಯನ್ನು ಮೈಸೂರಿಗೆ ಸೇರುವುದಾಗಿತ್ತು. ನೀರಿನ ಸತ್ಯಾಗ್ರಹದ ಸಮಯದಲ್ಲಿ ಬಂಧನಕ್ಕೊಳಗಾದ ಜನರನ್ನು ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸಿದರು. ವಿಚಾರಣೆಯ ಸಮಯದಲ್ಲಿ ಕೆಲವು ಜನರ ವಾದವು ತೀಕ್ಷ್ಣವಾಗಿತ್ತು. ಅವರಲ್ಲಿ ಅನಂತಪುರ ಜಿಲ್ಲೆಯ ಗುತ್ತಿ ತಾಲ್ಲೂಕಿನ ಪಾಲ್ತೂರು ಗ್ರಾಮದ ಸತ್ಯಾಗಹ್ರಿ ದಂಡಾ ಚೆನ್ನಬಸಪ್ಪನವರು ಈ ರೀತಿ ವಾದಿಸಿದರು, ಒಂದು ಶಿಫಾರಸ್ಸಿನ ಪ್ರತಿಭಟನಾಧಾರವಾಗಿ 'ಕಾಲುವೆಯ ಮೂರು ಹಿಡಿ ಮಣ್ಣನ್ನು ಆ ಕಡೆ ಹಾಕಿ ಪಕ್ಕದ ಹೊಲಕ್ಕೆ ಮೂರು ಬೊಗಸೆ ನೀರು ಸುರಿದದ್ದನ್ನು ಅಪರಾಧ'ವೆಂದು ಪರಿಗಣಿಸಿ ನಮ್ಮ ಪ್ರಭುತ್ವ ೧೮ದಿನ ಸೆರೆಯಲ್ಲಿಟ್ಟಿದ್ದರು. ಆದರೇ ಈಗಾಗಲೇ ಲೋಕಸಭೆ ಅಂಗೀಕರಿಸಿ ರಾಷ್ಟ್ರಪತಿಗಳ ಒಪ್ಪಿಗೆಯ ಮುದ್ರೆ ಬಿದ್ದಿರುವ ಶಾಸನವನ್ನೇ ಬದಲಿಸಿದ, ರಾಜ್ಯಪುನರ್ವಿಂಗಡಣಾ ಆಯೋಗದ ಸದಸ್ಯರಿಗೆ ಯಾವ ಶಿಕ್ಷೆಯನ್ನು ವಿಧಿಸಬೇಕು, ಅವರನ್ನೇಕೆ ವಿಚಾರಣೆಗೆ ಗುರಿಪಡಿಸಬಾರದು ಎಂದು ವಾದಿಸಿದರು. ಆಂಧ್ರದ ಪ್ರಜೆಯಾದ ನೀವು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದೇಕೆಂದು ನ್ಯಾಯಾಧೀಶರು ದಂಡಾ ಚನ್ನಬಸಪ್ಪನನ್ನು ಕೇಳಿದಾಗ, ಅವರು "ಕರ್ನಾಟಕದ ಎಲ್ಲೆ ಬಳ್ಳಾರಿ ಜಿಲ್ಲೆಗೆ ಮುಗಿಯುವುದಿಲ್ಲ. ನಾನು ಆಂಧ್ರದಲ್ಲಿದ್ದರೂ ಕನ್ನಡಿಗನು. ಕರ್ನಾಟಕದ ಹಿತ ರಕ್ಷಣೆ ನನ್ನ ಜವಾಬ್ದಾರಿ" ಎಂದು ತಿಳಿಸಿದರು. ಕನ್ನಡಿಗರು ಎಲ್ಲೇ ಇದ್ದರೂ ಅವರು ಕನ್ನಡಕ್ಕಾಗಿಯೇ ದುಡಿದರು ಎಂಬುದು ಇವರ ವಾದದ ಸಮರ್ಥನೆಯಾಗಿತ್ತು.

ಬಳ್ಳಾರಿ ಜಿಲ್ಲೆಯ ಪ್ರತಿಯೊಂದು ಗ್ರಾಮದ ಜನರು ನೀರಿನ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಜನಸಾಮಾನ್ಯರು ಚಳುವಳಿಯಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಭಾಗವಹಿಸಿದರು. ಅನೇಕರು ಕಾಳುವೆಗಳನ್ನು ಅಡ್ಡಗಟ್ಟುವುದಕ್ಕೆ ಅಥವಾ ಕಾಲುವೆಗಳನ್ನು ದ್ವಂಸಮಾಡುವ ಕಾರ್ಯದಲ್ಲಿ ಭಾಗವಹಿಸಿದರು. ಇನ್ನು ಕೆಲವರು ತುಂಗಭದ್ರ ಅಣೆಕಟ್ಟನ್ನು ರಕ್ಷಣೆ ಮಾಡುವುದಲ್ಲಿ ನಿರತರಾಗಿದ್ದರು. ಹೊಸಪೇಟೆಯ ಬಿ.ಕೆ.ನಾಯ್ಕ ಮತ್ತು ಗರಡಿ ಮನೆಯ ಕೆಲವು ಪೆಲ್ವಾನರು ದಿನಾಲು ಆಂಧ್ರದ ದುಷ್ಪರಿಂದ ತುಂಗಭದ್ರ ಅಣೆಕಟ್ಟನ್ನು ಕಾಯುವ ಕಾರ್ಯದಲ್ಲಿ ನಿರತರಾಗಿದ್ದರು. ಈ ರೀತಿಯಾಗಿ ಕಾನೂನುಭಂಗ ಅಸಹಕಾರ ಚಳುವಳಿಯನ್ನು ಪ್ರಾರಂಭಿಸಿ ಸುಮಾರು ೨೯–೩೦ ದಿನಗಳ ವರೆಗೆ ಸತ್ಯಾಗ್ರಹವನ್ನು ಮಾಡಿದರು.

೫. ೫. ಕಾರಾಗೃಹದಲ್ಲಿ ಜನಸಾಮಾನ್ಯರು

ಕರ್ನಾಟಕದಲ್ಲಿ ಬಳ್ಳಾರಿ ಜಿಲ್ಲೆಯನ್ನು ಮತ್ತು ತುಂಗಭದ್ರ ಆಣೆಕಟ್ಟನ್ನು ಉಳಿಸಿಕೊಳ್ಳುವುದಾಗಿ ಕಾನೂನನ್ನು ಉಲ್ಲಂಘಿಸಿ ನೀರಿನ ಸತ್ಯಾಗ್ರಹ ಮಾಡಬೇಕಾಯಿತು. ಇದರಿಂದ ಅನೇಕ ಜನರು ಬಂಧನಕ್ಕೆ ಒಳಗಾದರು. ಅವರನ್ನು ಬಳ್ಳಾರಿ ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿ ಇರಿಸಿದರು. ಕಾರಾಗೃಹದಲ್ಲಿದ ಮಹಾನೀಯರ ವಿವರ ಇಂತಿದೆ;

ಬಳ್ಳಾರಿ ತಾಲೂಕು: ಮಾದಿಗ ಬುದಗೌಡ, ಬಿ.ಜಿ. ನಾಗನಗೌಡ, ಎಮ್. ಯರ‍್ರಿಗೌಡ, ಚೆನ್ನಪ್ಪ, ಬಸಪ್ಪ, ಶರಬಪ್ಪ, ಕರಿಬಸನಗೌಡ, ಬಿ.ಎ. ತೆಲಿ, ದೊಡ್ಡಣ್ಣಗೌಡ, ಹನುಮನಗೌಡ.ಕೆ., ಕೆ.ಎಸ್. ನಾಗನಗೌಡ, ಶಿವಪ್ಪ. ಎಮ್., ಸಿ. ಮಲ್ಲನಗೌಡ, ಜೆ.ಎರ‍್ರೆಪ್ಪ, ಜೆ. ರುದ್ರಪ್ಪ, ಎನ್. ಕರಿಬಸವನಗೌಡ, ಕೆ. ದೊಡ್ಡಬಸಪ್ಪ, ಕಲ್ಲೂರು ನಾಗಪ್ಪ, ಎಸ್. ಚೆನ್ನಪ್ಪ, ವೈ.ಗಿರಿಗೌಡ, ಎನ್.ಗಿರಿಗೌಡ, ಎನ್.ಪರ್ವತಗೌಡ, ಎಂ. ಹನುಮಂತರೆಡ್ಡಿ, ಬಿ. ವೀರಭದ್ರಗೌಡ, ಆರ್.ಎಸ್. ತಿಮ್ಮಾರೆಡ್ಡಿ, ಕೆ.ಎಸ್. ವೀರಭದ್ರಪ್ಪ, ಜಿ.ಕೆ. ಕುಮಾರಪ್ಪ, ಕೆ.ಬಾಲಕಂದಪ್ಪ, ವೀರಭದ್ರಪ್ಪ, ಬಸವನಗೌಡ, ಲಿಂಗಯ್ಯ ವಿರುಪನ್ನ, ಎ. ಬಸಪ್ಪ, ಎಂ.ಮಲ್ಲಪ್ಪ., ಜಿ.ಈಶ್ವರಪ್ಪ, ಡಿ.ದೊಡ್ಡಪ್ಪ, ಎಂ.ಲಕ್ಷ್ಮಣ, ಕುಮಾರಸ್ವಾಮಿ, ಭಸಯ್ಯ ನಾಯ್ಕ, ಎಸ್.ಈರಣ್ಣ, ಟಿ.ಎಂ. ಕರಿಬಸಯ್ಯ, ದೊಡ್ಡ ಬಸಪ್ಪ, ಕೆ. ಸಿದ್ದಪ್ಪ, ಎಸ್. ಮಲ್ಲೇಶಪ್ಪ, ಬಿ.ದೊಡ್ಡಪ್ಪ, ಹೆಚ್. ಉಚ್ಚಪ್ಪ, ದೊಡ್ಡ ಬಸಪ್ಪ, ಸಯ್ಯದ್ ಮೆಹಬೂಬ್, ಎಸ್. ಶಿವಾನಂದಪ್ಪ, ಜಿ. ನಾಗಪ್ಪ, ಸಿ.ಸಣ್ಣಪ್ಪ, ಹೆಚ್.ಎಂ. ಕರಿಬಸಯ್ಯ, ಎಸ್.ರಾಜರಪ್ಪ, ಎನ್. ಈರಣ್ಣ, ಅಮರೇಗೌಡ, ರಾಘವೇಂದ್ರ ಸ್ವಾಮಿ, ಬಿ.ಜಂಬಣ್ಣ, ಕುಷಿರ್ಕ್, ದೊಡ್ಡ ಬಸಪ್ಪ, ಶಂಕರಪ್ಪ, ನೀಲಕಂಠಪ್ಪ, ಮಲ್ಲನಗೌಡ, ಪೋರನ್ನ, ಸಿದ್ದರಾಮಪ್ಪ, ಸಿಂದಿಗಿ ಸಿದ್ದಪ್ಪ, ವಿ. ಶಿವಕುಮಾರಪ್ಪ, ಕೆ. ದೊಡ್ಡನಗೌಡ, ಡಿ. ಪಾಂಡುರಂಗಪ್ಪ.

ಹೊಸಪೇಟೆ ತಾಲೂಕು : ಲಂಬಾಡಿ ಅಬ್ಬಯ್ಯ, ಬಿ.ಎಂ. ಮರುಗಯ್ಯ, ಜೆ.ಪರಪ್ಪ ಗೊಟ್ಟಲ್, ಕೆ.ಎ. ಕಮಲಸ.ಅಂ., ವಿ.ಸಾಬನ್ನ, ಸಾಲನ್ನ, ಎಲ್. ಹುಸೇನ್ ಸಾಬ್ ಎ.ಖಾಜಾಸಾಹೆಬ್, ಕೆ. ಇಮಾಮ್ ಸಾಹೆಬ್, ಜೆ, ಶಂಕರಪ್ಪ, ಕೆ. ಭಾಸ್ಕರ, ಎ.ಸಿದ್ದಪ್ಪ, ಎಂ.ರಂಗಪ್ಪ, ಜೆ. ವೀರಪ್ಪ, ರಾಚಪ್ಪ.

ಕೂಡ್ಲಿಗಿ ತಾಲೂಕು: ಜೆ.ಯಂ. ಶಿವಾನಂದ ದತ್ತ, ಜಿ.ಬಸಪ್ಪ, ಜೆ.ದೇವರಮುನಿ, ಲಕ್ಷ್ಮಪ್ಪ, ರಾಜಶೇಖರಯ್ಯ, ಬಾಲನ್ನ, ಅಂಬಣ್ಣ, ಎಚ್. ಎರ್ರಪ್ಪ,

ಹಗರಿಬೊಮ್ಮನಹಳ್ಳಿ ತಾಲ್ಲೂಕು: ಎನ್. ಹಾಲಪ್ಪ, ಎನ್. ಲಿಂಗಜ್ಜ, ಆರ್. ರೇವಣಪ್ಪ, ಎಚ್. ಚರಪ್ಪ, ಎಂ. ಕರಿಯಲ್ಲಪ್ಪ, ಸಿ. ಕೊಟ್ರಬಸಪ್ಪ, ಕೆ. ಸಂಕ್ರಪ್ಪ, ಎ. ಮಾನಪ್ಪ, ಎ. ಕೊಟ್ರಪ್ಪ ಎಚ್. ಗಂಗಪ್ಪ, ಕೆ. ವೀರಪ್ಪ, ಎನ್. ನಾಗಪ್ಪ, ಬೇನಿಕಲ್ಲಪ್ಪ, ಜೆ. ಎಂ. ತಿರುಗಣಯ್ಯ, ಇವರೆಲ್ಲ ಸುಮಾರು ೨೯-೩೦ ದಿನಗಳವರೆಗೆ ಸೆರೆಮನೆ ವಾಸ ಅನುಭವಿಸಿದರು. ಜೈಲಿನಲ್ಲಿ ಅವರು ಅನೇಕ ತೊಂದರೆಗಳನ್ನು ಅನುಭವಿಸಿದರು. ಜೈಲಿನ ಅಧಿಕಾರಿಗಳು ತೆಲುಗಿನವರು ಮತ್ತು ತಮಿಳಿನವರಾಗಿದ್ದರು. ಅಧಿಕಾರಿಗಳು ಹೋರಾಟಗಾರರನ್ನು ಸಾಮಾನ್ಯ ಖೈದಿಗಳಂತೆ ಕಾಣುತ್ತಿದ್ದರು. ಉಣ್ಣುವ ಆಹಾರದಲ್ಲಿ ಹುಳುಗಳು ಇದ್ದರೂ ಅದನ್ನೇ ಕೊಡುತ್ತಿದ್ದರು. ಕೋಣೆಯ ಹೊರಗಿದ್ದ ಸ್ಟ್ರೀಟ್ ಲೈಟ್‌ಗಳನ್ನು ಹಾರಿಸಿ ಕತ್ತಲು ಕೋಣೆಯಲ್ಲಿ ಇರುವಂತೆ ಮಾಡುತ್ತಿದ್ದರು. ಅನೇಕ ಸಲ ಅವಾಚ್ಯ ನುಡಿಗಳಿಂದ ನಿಂದಿಸುತ್ತಿದ್ದರು. ಅಧಿಕಾರಿಗಳ ಈ ವರ್ತನೆಯಿಂದ ಬೇಸರಗೊಂಡ ಶಿರಿಗೇರಿ ಎಂ. ವಿ. ರೇವಣ್ಣ ಸಿದ್ದಯ್ಯನವರು ಜೈಲಿನಲ್ಲಿ ಸತ್ಯಾಗ್ರಹವನ್ನು ಮಾಡಿ, ಅಧಿಕಾರಿಗಳ ದುರ್ವರ್ತನೆ ನಿಲ್ಲುವಂತೆ ಮಾಡಿದರು. ಈ ರೀತಿ ಸತ್ಯಾಗ್ರಹಿಗಳು ಜೈಲಿನಲ್ಲಿದ್ದಾಗ ಅನೇಕ ಕಷ್ಟಗಳನ್ನು ಅನುಭವಿಸಿದರು. ಕರ್ನಾಟಕದ ಏಕೀಕರಣದಲ್ಲಿ ಈ ರೀತಿಯಾಗಿ ಜೈಲುವಾಸ ಮಾಡಿದ ಜನಸಾಮಾನ್ಯರನ್ನು ಬಳ್ಳಾರಿ ಜಿಲ್ಲೆಯಲ್ಲಿಯೇ ಮಾತ್ರ ಕಾಣಬಹುದಾಗಿದೆ. ಯಾವುದೇ ಘಟನೆಯಾಗಿರಲಿ ಅಥವಾ ಚಳವಳಿಯೇ ಆಗಲಿ ಜನಸಾಮಾನ್ಯರು ಅದರಲ್ಲಿ ಭಾಗಿಯಾದರೆ ಮಾತ್ರ ಜಯ ಸಿಗುವುದು ಎಂದು ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಏಕೀಕರಣ ಚಳವಳಿಯಿಂದ ತಿಳಿದು ಬರುತ್ತದೆ. (ಆಧಾರ: ಬಳ್ಳಾರಿ ಜಿಲ್ಲಾ ಕೇಂದ್ರ ಕಾರಾಗೃಹದ ಕಡತಗಳಿಂದ ಪಡೆಯಲಾಗಿದೆ.)

೫. ೬ ಚುನಾವಣೆಯಲ್ಲಿ ಜನಸಾಮಾನ್ಯರು

ಬಳ್ಳಾರಿ ಜಿಲ್ಲೆ ಮೈಸೂರು ರಾಜ್ಯದಲ್ಲಿ ವಿಲೀನವಾದುದನ್ನು ಪ್ರತಿಭಟಿಸಿ ವಿಧಾನಸಭೆಯಲ್ಲಿ ಬಳ್ಳಾರಿಯನ್ನು ಪ್ರತಿನಿಧಿಸುತ್ತಿದ್ದ ಮುಂಡ್ಲೂರು ಗಂಗಪ್ಪನವರು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಇದರಿಂದ ೧೯೫೬ ರಲ್ಲಿ ಉಪ ಚುನಾವಣೆಯನ್ನು ಘೋಷಿಸಲಾಯಿತು. ಗಂಗಪ್ಪನವರು ಬಳ್ಳಾರಿಯಲ್ಲಿದ್ದುಕೊಂಡು ಆಂಧ್ರದ ಅಂಧಾಭಿಮಾನಿಯಾಗಿದ್ದರು. ಅವರು ಈ ಚುನಾವಣೆಯಲ್ಲಿ ಗೆದ್ದರೆ ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸುವುದಾಗಿ, ಸೋತರೆ ಕರ್ನಾಟಕಕ್ಕೆ ಬಿಡುವುದಾಗಿ ಸವಾಲು ಹಾಕಿದರು. ಇದರಿಂದ ಆಂಧ್ರ ಪರವಾದಿಗಳೆಲ್ಲ ಎಂ. ಗಂಗಪ್ಪನವರನ್ನು ಬೆಂಬಲಿಸಿದರು. ಕರ್ನಾಟಕ ಪ್ರದೇಶ ಕಾಂಗೆಸ್ ಸಮಿತಿಯಾಗಲೀ, ಮೈಸೂರು ಪ್ರದೇಶ ಕಾಂಗೆಸ್ ಸಮಿತಿಯಾಗಲೀ ಕಾಂಗೆಸ್ ಅಭ್ಯರ್ಥಿಯನ್ನು ಸ್ಪರ್ಧೆಗೆ ನಿಲ್ಲಿಸಲು ಮುಂದಾಗಲಿಲ್ಲ. ಏಕೆಂದರೆ ಆಂಧ್ರ ಅಭ್ಯರ್ಥಿ ವಿರುದ್ಧ ಗೆಲುವಿನ ಭರವಸೆ ಅವರಿಗೆ ಇರಲಿಲ್ಲ. ಆಗ ಬಳ್ಳಾರಿಯ ಕನ್ನಡಿಗರು ತಮ್ಮ ಪರವಾಗಿ ಹರಗಿನಡೋಣಿ ಸಣ್ಣಬಸವನಗೌಡರನ್ನು ಕನ್ನಡದ ಅಭ್ಯರ್ಥಿಯಾಗಿ ಸ್ಪರ್ಧೆಗೆ ನಿಲ್ಲಿಸಿದರು. ಈ ಚುನಾವಣೆಯು ಬಳ್ಳಾರಿಯ ಕನ್ನಡಿಗರಿಗೆ ಪ್ರತಿಷ್ಠೆಯಾಗಿ ಪರಿಣಮಿಸಿತ್ತು. ಚುನಾವಣೆಯ ಸಮಯದಲ್ಲಿ ಅಳವಂಡಿ ಶಿವಮೂರ್ತಿ ಸ್ವಾಮಿ, ಗುಲ್ಬರ್ಗಾದ ಸರ್ದಾರ್ ಶರಣಗೌಡ ಇನಾಂದಾರ್ ರವರು ಕನ್ನಡಪರ ಅಭ್ಯರ್ಥಿಯ ಪರವಾಗಿ ಪ್ರಚಾರ ಮಾಡಿದರು. ಯಜಮಾನ್ ಶಾಂತರುದಪ್ಪನವರು ಕನ್ನಡ ಪರ ಅಭ್ಯರ್ಥಿಯ ಕಡೆಯಿಂದ ಭಿತ್ತಿ ಪತ್ರಗಳನ್ನು ಹಂಚಿ ಪ್ರಚಾರ ಮಾಡಿದರು. ಜನ ಪ್ರತಿನಿಧಿಗಳು ಪ್ರತಿಯೊಂದು ಮನೆಗೆ ಹೋಗಿ ಕನ್ನಡಪರ ಮತ ಹಾಕುವಂತೆ ಯಾಚಿಸಿದರು. ಹಳ್ಳಿಗಳಲ್ಲಿ ಈ ಚುನಾವಣೆಯು ಒಂದು ಯುದ್ಧದಂತೆ ಕಾಣುತ್ತಿತ್ತು. ಪ್ರತಿಯೊಂದು ಹಳ್ಳಿಗಳಲ್ಲಿ ಚುನಾವಣೆಗಾಗಿ ಎಲ್ಲರೂ ಕೂಡಿಕೊಂಡು ಕನ್ನಡಪರ ಅಭ್ಯರ್ಥಿಯನ್ನು ಗೆಲ್ಲಿಸಬೇಕೆಂದು ಸರ್ವಾನುಮತದಿಂದ ನಿರ್ಣಯಗಳನ್ನು ತೆಗೆದುಕೊಂಡರು. ತೀವ್ರ ಸ್ಪರ್ಧಾತ್ಮಕವಾಗಿ, ನಿರ್ಣಾಯಕವಾಗಿ ನಡೆದ ಈ ಉಪ ಚುನಾವಣೆಯಲ್ಲಿ ಕನ್ನಡ ಪರ ಅಭ್ಯರ್ಥಿಯಾದ ಹರಗಿನ ಡೋಣಿ ಸಣ್ಣಬಸವನಗೌಡರು ಅಧಿಕ ಬಹುಮತದಿಂದ ಚುನಾಯಿತರಾದರು. ಇದರಿಂದ ಬಳ್ಳಾರಿಯು ಕರ್ನಾಟಕದಲ್ಲಿ ಉಳಿಯುವಂತಾಯಿತು. ಈ ಚುನಾವಣೆಯು ಕನ್ನಡದ ಉಳಿವಿನ, ಬಳ್ಳಾರಿಯ ಭವಿಷ್ಯ ನಿರ್ಣಾಯಕ ಹಂತವಾಗಿತ್ತು. ಜಿಲ್ಲೆಯ ಮುಖಂಡರು, ಜನಸಾಮಾನ್ಯರು ವಿಶೇಷ ಪಾತ್ರವಹಿಸಿ ಬಳ್ಳಾರಿಯನ್ನು ಉಳಿಸಿಕೊಂಡ ಕೀರ್ತಿ ಅವರಿಗೆ ಸಲ್ಲುತ್ತದೆ.

೫. ೭. ವೀರಶೈವರ ಪಾತ್ರ

ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ವೀರಶೈವರ ಪಾತ್ರವನ್ನು ಕಡೆಗಣಿಸುವಂತಿಲ್ಲ. ರಾಜ್ಯದಲ್ಲಿ ಪ್ರದೇಶ ಕಾಂಗ್ರೆಸ್ ಸಮಿತಿ (ಕೆ.ಪಿ.ಸಿ.ಸಿ.) ರಚನೆಯಾದ ನಂತರ ಕರ್ನಾಟಕ ಮಟ್ಟದಲ್ಲಿ ರಾಜಕೀಯ ಸಮ್ಮೇಳನಗಳನ್ನು ನಡೆಸಲಾಯಿತು. ೧೯೨೨ ರಲ್ಲಿ ಮಂಗಳೂರಿನಲ್ಲಿ, ೧೯೨೪ ರಲ್ಲಿ ಗೋಕರ್ಣದಲ್ಲಿ ಸಮ್ಮೇಳನಗಳನ್ನು ನಡೆಸಿದರು. ೧೯೨೪ ರಲ್ಲಿ ಬೆಳಗಾವಿಯಲ್ಲಿ ಕರ್ನಾಟಕದ ಪ್ರಥಮ ಏಕೀಕರಣ ಸಮ್ಮೇಳನವನ್ನು ಮಾಡಿದರು. ಬಳ್ಳಾರಿಯಲ್ಲಿ ೧೯೨೬ ರಲ್ಲಿ ೪ನೇ ಕರ್ನಾಟಕ ಏಕೀಕರಣ ಸಮ್ಮೇಳನವನ್ನು ನಡೆಸಲಾಯಿತು. ಮೇಲಿನ ಎಲ್ಲಾ ಸಮ್ಮೇಳನಗಳಲ್ಲಿ ರಾಜಕೀಯದ ಮೂಲಕ ಏಕೀಕರಣವನ್ನು ಸಾಧಿಸುವುದಕ್ಕಾಗಿ ದೃಢನಿರ್ಧಾರಗಳನ್ನು ತೆಗೆದುಕೊಂಡರಲ್ಲದೆ, ಅವು ಜನರಿಗೆ ಮನದಟ್ಟಾಗುವಂತೆ ಮಾಡಿದರು. ಬಳ್ಳಾರಿಯಲ್ಲಿ ೧೯೩೫ರಲ್ಲಿ ಸರ್ವದರ್ಶನ ತೀರ್ಥ ವೈ. ನಾಗೇಶ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಏಕೀಕರಣ ಚಳುವಳಿ ಪ್ರಾರಂಭಿಸಿದರು. ಟಿ.ಹೆಚ್.ಎಂ. ಸಾದಶಿವಯ್ಯ, ಕೋರಿ ಸೂಗೂರಪ್ಪ, ವೈ. ಮಹಾಬಲೇಶ್ವರಪ್ಪ, ಗಮಕಿಗಳಾದ ಡಾ॥ ಜೋಳದರಾಶಿ ದೊಡ್ಡನಗೌಡರು, ವೀರಭದ್ರಪ್ಪ ಬಿ.ಎಂ. ಶ್ರೀಕಂಠಯ್ಯನವರು ಚಳುವಳಿಗಳಲ್ಲಿ ಭಾಗವಹಿಸಿದರು, ವೈ. ನಾಗೇಶ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಬಳ್ಳಾರಿಯ ವೀರಶೈವ ಶಾಲೆಯಲ್ಲಿ ೧೫.೧೦.೧೯೩೬ ರಿಂದ ಏಕೀಕರಣ ಚಳುವಳಿಯ ರೂಪರೇಷೆಗಳು ತಯಾರಾದವು. ಈ ಸಭೆಯಲ್ಲಿ ಎಸ್.ಎಂ.ಸಿಂಧಿಗಿ, ಬಿ.ಎಂ. ಬಸವನಗೌಡ, ಶಿವಚನ್ನಬಸವಸ್ವಾಮಿ ಯವರುಗಳು ಭಾಗವಹಿಸಿದರು.

ಏಕೀಕರಣಕ್ಕೆ ಸಂಬಂಧಿಸಿದ ಎಲ್ಲಾ ಸಮ್ಮೇಳನಗಳಲ್ಲಿ ಮತ್ತು ಚಳುವಳಿಯಲ್ಲಿ ಅನೇಕ ವೀರಶೈವದವರು ಮತ್ತು ಮಠಾಧಿಪತಿಗಳು ಭಾಗವಹಿಸಿದರು. ಅವರಲ್ಲಿ ಬಿಜಾಪುರದ ಬೃಹನ್ಮಠಾಧ್ಯಕ್ಷರಾದ ವಿದ್ಯಾಲಂಕಾರ ಶಂಭುಲಿಂಗ ಶಿವಾಚಾರ್ಯ ಸ್ವಾಮಿಗಳು ಪ್ರಮುಖರಾಗಿದ್ದರು. ಜಮಖಂಡಿ ಚಳುವಳಿಯಲ್ಲಿ ಭಾಗವಹಿಸುವುದಕ್ಕೆ ಬಳ್ಳಾರಿಯಿಂದ ಬೆಲ್ಲದ ಚೆನ್ನಪ್ಪ, ಗುಗ್ಗರಿ ದೊಡ್ಡಪ್ಪನವರು ಹೋಗಿದ್ದರು.

೧೯೨೬ರ ನೇ ಮೇ ೨೨, ೨೩, ೨೪ರಂದು ಬಳ್ಳಾರಿಯಲ್ಲಿ ಕನ್ನಡ ಸಾಂಸ್ಕೃತಿಕ ಸಮ್ಮೇಳನವು ರಾವ್‌ಬಹದ್ದೂರ್ ಫಕ್ಕೀರಪ್ಪ ಗುರುಬಸಪ್ಪ ಹಳಕಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ ಅನೇಕ ಕನ್ನಡ ಸಾಹಿತಿಗಳು ಭಾಗವಹಿಸಿ ಏಕೀಕರಣದ ಬಗ್ಗೆ ಮನವರಿಗೆ ಮಾಡಿಕೊಟ್ಟರು. ೨೫ನೇ ಕನ್ನಡ ಸಮ್ಮೇಳನದ ಅಧ್ಯಕ್ಷತೆಯನ್ನು ವೈ.ಚಂದ್ರಶೇಖರ ಶಾಸ್ತ್ರಿಗಳು ವಹಿಸಿಕೊಂಡಿದ್ದರು. ಕಲ್ಬುರ್ಗಿಯಲ್ಲಿ ನಡೆದ ೩೨ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಉತ್ತಂಗಿ ಚನ್ನಪ್ಪನವರು ಅಧ್ಯಕ್ಷ ಸ್ಥಾನದಿಂದ ಕನ್ನಡಿಗರನ್ನು ಎಚ್ಚರಿಸಿದರು.

೧೯೪೭ರಲ್ಲಿ ಉರವಕೊಂಡದಲ್ಲಿ ಏಕೀಕರಣದ ಸಮ್ಮೇಳನ ನಡೆಯಿತು. ಅಲ್ಲಿಯ ಗವಿಮಠ ಸಂಸ್ಥಾನದ ಪೀಠಾಧಿಪತಿಗಳಾದ ಶ್ರೀ ಕರಿಬಸವ ರಾಜೇಂದ್ರ ಸ್ವಾಮಿಗಳು ಭಾಷಣ ಮಾಡಿ ಉರವಕೊಂಡವು ಒಂದು ಕಾಲಕ್ಕೆ ಕರ್ನಾಟಕದ ನಡುನಾಡಾಗಿತ್ತೆಂಬುದನ್ನು, ಶಾಸನಗಳೆಲ್ಲವೂ ಕನ್ನಡದಲ್ಲೇ ಇರವುದನ್ನು ತಿಳಿಸಿದರು. ಅದೇ ಸಮ್ಮೇಳನದ ಪ್ರಾರಂಭದಲ್ಲಿ ಗದಗಿನ ಸಿದ್ದರಾಮಪ್ಪ ಅವರು ಕನ್ನಡಿಗರ ಮುಂದಿರುವ ಏಕೀಕರಣದ ಸಮಸ್ಯೆ ಬಗ್ಗೆ ಮನವರಿಕೆ ಮಾಡಿದ್ದರು. ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಬಳ್ಳಾರಿಯ 'ನವಸಂದೇಶ' ಪತ್ರಿಕೆ ಸಂಪಾದಕರೂ ಹಾಗೂ ವಕೀಲರೂ ಆಗಿದ್ದ ಟಿ.ಹೆಚ್.ಎಂ. ಚಂದ್ರಶೇಖರಶಾಸ್ತ್ರಿಗಳು ಭಾರತದ ಬೇರೆ ಯಾವುದೇ ಭಾಷಿಕರಿಗಿಂತ ಕನ್ನಡಿಗರ ಸ್ಥಿತಿಯು ಅತ್ಯಂತ ಶೋಚನೀಯವಾಗಿದೆ. ಎಂದು ಅಭಿಪ್ರಾಯಪಟ್ಟರು.

ಕನ್ನಡ ಸಮ್ಮೇಳನಗಳಲ್ಲಿ ಏಕೀಕರಣದ ಚಳುವಳಿಯಲ್ಲಿ ಮುಂಚೂಣಿಯಲ್ಲಿ ಇದ್ದುಕ್ಕೊಂಡು ನಾಡಿನಲ್ಲಿ ಏಕೀಕರಣದ ಬಗ್ಗೆ ಎಲ್ಲಾ ಜನರಿಗೆ ಅರ್ಥವಾಗುವ ರೀತಿಯಲ್ಲಿ ಸಮ್ಮೇಳನದ ಭಾಷಣಗಳ ಮೂಲಕ ತಿಳಿಸಿದರು. ಬಳ್ಳಾರಿಗೆ ಸಂಬಂಧಿಸಿದಂತೆ ಎಲ್ಲಾ ಘಟನೆಗಳಲ್ಲಿ ಮತ್ತು ಬಳ್ಳಾರಿಯ ಕ್ರಿಯಾಸಮಿತಿಯಲ್ಲಿ, ಸಂಘ-ಸಂಸ್ಥೆಗಳಲ್ಲಿ, ಭಾಗವಹಿಸಿದ ಅನೇಕ ವೀರಶೈವದವರು ಮಹತ್ತರವಾದ ಪಾತ್ರ ನಿರ್ವಹಿಸಿದ್ದಾರೆ. ಬಳ್ಳಾರಿಯನ್ನು ಉಳಿಸಿಕೊಳ್ಳುವಲ್ಲಿ ವೀರಶೈವರ ಕಾರ್ಯವು ಶ್ಲಾಘನೀಯವಾಗಿದೆ.

೫.೮. ಬಳ್ಳಾರಿ ಜಿಲ್ಲೆಯ ವಿಲೀನ ಸಮಾರಂಭದಲ್ಲಿ ಜನಸಾಮಾನ್ಯರು

ಬಳ್ಳಾರಿ ಜಿಲ್ಲೆಯು ಮೈಸೂರು ರಾಜ್ಯದಲ್ಲಿ ವಿಲೀನವಾಗುವ ಸಮಾರಂಭವನ್ನು ಬಳ್ಳಾರಿ ಜನರು ೩೦.೧೦.೧೯೫೩ರಂದು ವಿಜೃಂಭಣೆಯಿಂದ ಆಚರಿಸಲು ಸಕಲ ಸಿದ್ಧತೆಯನ್ನು ಮಾಡಿದ್ದರು. ಬಿ.ಡಿ.ಎ. ಮೈದಾನದಲ್ಲಿ ಸಮಾರಂಭಕ್ಕಾಗಿ ಪೆಂಡಾಲಗಳನ್ನು ಹಾಕಿದ್ದರು. ಸಮಾರಂಭವನ್ನು ನಡೆಯದಂತೆ ಆಂಧ್ರದ ಕೆಲವು ದುಷ್ಟರು

ಕೆಡಿಸುವುದಕ್ಕಾಗಿ ಬೆದರಿಕೆ ಹಾಕಿದ್ದರು. ಇದರಿಂದ ಆತಂಕಕ್ಕೆ ಒಳಗಾದ ಮುಖಂಡರು ಏನು ಮಾಡುವುದೆಂದು ತಿಳಿಯದೇ ಕುಳಿತಿದ್ದರು. ಆಗ ಪಿಂಜಾರ್ ರಂಜಾನ್ ಸಾಹೇಬರು ಪೆಂಡಾಲನ್ನು ಕಾಯುವ ಕಾರ್ಯ ನನ್ನದೆಂದು ಮುಖಂಡರಿಗೆ ಭರವಸೆ ನೀಡಿದ್ದರು. ರಂಜಾನ್ ಸಾಹೇಬ್ ಹಾಗೂ ಗರಡಿ ಮನೆಯ ಕೆಲವು ಪೈಲ್ವಾನರನ್ನು ಕರೆದುಕೊಂಡು ಕಾಯುವ ಕಾರ್ಯವನ್ನು ಮಾಡಿದರು. ೧೯೫೩ರ ಸೆಪ್ಟೆಂಬರ್ ೩ ರಂದು ಬಳ್ಳಾರಿ ನಗರದ ಕೋಟೆಯ ಮೇಲೆ ೨೧ ತೋಪುಗಳನ್ನು ವಿಜಯದ ಸಂಕೇತವಾಗಿ ಹಾರಿಸಿದರು. ಬಳ್ಳಾರಿ ನಗರವನ್ನು ತೋರಣಗಳಿಂದ ಅಲಂಕರಿಸಿದ್ದರು. ಎಲ್ಲಾ ದೇವಾಲಯ, ಚರ್ಚ್ ಮತ್ತು ಮಸೀದಿಗಳಲ್ಲಿ ವಿಶೇಷ ಪೂಜೆ, ಪ್ರಾರ್ಥನೆ, ನಮಾಜುಗಳು ನಡೆದವು. ಮಂಗಳಕರವಾದ್ಯಗಳು ಮೊಳಗಿದವು. ಹಿರಿಯರು, ಕಿರಿಯರು, ಹೆಂಗಸರು, ಮಕ್ಕಳು ಹೊಸ ಉಡುಪುಗಳಿಂದ ಶೋಭಿತರಾಗಿ, ಗಂಡಬೇರುಂಡ ಧ್ವಜವನ್ನು ಮನೆ ಮನೆಗಳ ಮೇಲೆ ಹಾರಿಸಿ 'ಜೈ ಕರ್ನಾಟಕ ಮಾತೆ' ಎಂದು ಘೋಷಣೆ ಮಾಡಿದರು. ಅಲ್ಲಲ್ಲಿ ಪಟಾಕಿಗಳನ್ನು ಸಿಡಿಸಿ ಕನ್ನಡದ ಜಯಭೇರಿಯು ದಿಗಂತದಲ್ಲಿ ಮೊಳಗುವಂತೆ ಮಾಡಿದರು. ಬೆಳಗಿನ ಜಾವ ಎರಡು ಮೂರು ಸಾವಿರ ವಿದ್ಯಾರ್ಥಿಗಳ ಹಾಗೂ ಸ್ವಯಂ ಸೇವಕ ದಳದವರ ಪ್ರಭಾತಫೇರಿ ನಡೆಯಿತು. ಸಾಂಬಮೂರ್ತಿ ಮೈದಾನದಲ್ಲಿ ಧ್ವಜ ವಂದನೆಯೊಡನೆ ಬೆಳಗಿನ ಕಾರ್ಯಕ್ರಮ ಮುಕ್ತಾಯವಾಯಿತು.

ಕರ್ನಾಟಕದ ಏಕೀಕರಣಕ್ಕೆ ಹೋರಾಡಿದವರು ಅನೇಕರು, ಆದರೆ ಹುತಾತ್ಮರಾದವರು ಒಬ್ಬರೇ ಅವರೇ ರಂಜಾನ್ ಸಾಹೇಬ್. ಅವರ ತ್ಯಾಗ, ಬಲಿದಾನವನ್ನು ಬಳ್ಳಾರಿ ಜಿಲ್ಲೆ ಮತ್ತು ರಾಜ್ಯವು ಎಂದೆಂದಿಗೂ ಸ್ಮರಿಸುತ್ತಿದೆ.

ಅಡಿ ಟಿಪ್ಪಣಿ

***ಈ ಲೇಖನದ ಮಾಹಿತಿಯು ಹೆಚ್ಚಿನ ಪ್ರಮಾಣದಲ್ಲಿ ಜನಸಾಮನ್ಯರನ್ನು ಪ್ರಶ್ನಾವಳಿಗಳ ಮೂಲಕ ಸಂದರ್ಶನ ಮಾಡಿ ದಾಖಲಿಸಿಕೊಂಡ ಮಾಹಿತಿಯಾಗಿರುತ್ತದೆ. ಇದರ ಜೊತೆಗೆ ಸಂಶೋಧಕರ ಬರಹಗಳು ಕೂಡಿಕೊಂಡಿವೆ.**

೬

ಬಳ್ಳಾರಿ ಜಿಲ್ಲೆಯ ಏಕೀಕರಣದಲ್ಲಿ ಸಂಘ–ಸಂಸ್ಥೆಗಳು

ಭಾರತದ ಸ್ವಾತಂತ್ರ್ಯಹೋರಾಟ ಹಾಗೂ ಭಾಷಾವಾರು ಪ್ರಾಂತ್ಯ ರಚನೆಗಾಗಿ ನಡೆದ ಹೋರಾಟದ ಸಂದರ್ಭದಲ್ಲಿ ನಮ್ಮ ಕರ್ನಾಟಕ ಪ್ರಾಂತವು ಈಗಿನಂತಿರಲಿಲ್ಲ. ಅದು ಅನೇಕ ಆಡಳಿತದಡಿಯಲ್ಲಿ ಸೇರಿಹೋಗಿತ್ತು. ಕನ್ನಡಿಗರು ಮರಾಠಿ, ತಮಿಳು, ತೆಲುಗು, ಉರ್ದು ಮೊದಲಾದ ಭಾಷೆಗಳನ್ನು ಆಡುವವರ ಮಧ್ಯೆ ಅಲ್ಪಸಂಖ್ಯಾತರಾಗಿದ್ದರು. ಇಂಥ ಸಂದರ್ಭದಲ್ಲಿ ಬಂಗಾಳದ ವಿಭಜನೆ (೧೯೦೫)ಯ ಘಟನೆ ನಡೆಯಿತು. ಸ್ವಾತಂತ್ರ್ಯಭಿಮಾನ ಮತ್ತು ಪ್ರಾಂತ್ಯಾಭಿಮಾನಿಗಳಿಗೆ ಈ ಘಟನೆ ಹೊಸ ತಿರುವು ಕೊಟ್ಟಿತು. ಉತ್ಕಲ ಐಕ್ಯ ಪರಿಷತ್, ವಂಗೀಯ ಸಾಹಿತ್ಯ ಪರಿಷತ್, ಮೊದಲಾದ ಸಾಹಿತ್ಯ, ಸಾಂಸ್ಕೃತಿಕ ಸಂಘಟನೆಗಳು ಹುಟ್ಟಿಕೊಂಡು ಅವರವರ ಭಾಷಾಭಿಮಾನವನ್ನು ಜಾಗೃತ ಗೊಳಿಸಿದವು. ಪರಿಣಾಮವಾಗಿ ಒರಿಸ್ಸಾ, ಬಿಹಾರ, ಬಂಗಾಳ ಪ್ರಾಂತ್ಯಗಳು ಹುಟ್ಟಿಕೊಂಡವು.[೧] ಇದರಿಂದ ಛಿದ್ರವಾಗಿದ್ದ ಕನ್ನಡಿಗರು ಹೆಚ್ಚು ಪ್ರಭಾವಿತರಾದುದಲ್ಲದೆ ಒಂದುಗೂಡುವ ಪ್ರಯತ್ನಗಳನ್ನು ಪ್ರಾರಂಭಿಸಿದರು. ಈ ನಿಟ್ಟಿನಲ್ಲಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಬಗೆಗೆ ಜನರಲ್ಲಿ ಅರಿವು ಮೂಡಿಸುವುದಕ್ಕೆ ಅನೇಕ ಸಂಘ-ಸಂಸ್ಥೆಗಳು ಹುಟ್ಟಿಕೊಂಡವು. ಕನ್ನಡ ಮಾತನಾಡುವ ಎಲ್ಲ ಪ್ರದೇಶಗಳ ಜನರನ್ನು ಪ್ರತಿನಿಧಿಸುವ ಸಂಸ್ಥೆಗಳಾಗಿ ಅವು ಏಕೀಕರಣಕ್ಕೆ ಸ್ಪಂದಿಸಿದವು. ಅವು ನಿರ್ವಹಿಸಿದ ಪಾತ್ರ ಮತ್ತು ಸಾಧನೆ ಇಲ್ಲಿದೆ;

೬.೧ ವಿದ್ಯಾವರ್ಧಕ ಸಂಘ

ಕರ್ನಾಟಕವನ್ನು ಒಂದುಗೂಡಿಸುವುದಕ್ಕೆ ಸಂಘಟನಾತ್ಮಕ ಹೋರಾಟ ಉತ್ತಮವೆಂದು ಏಕೀಕರಣ ನಾಯಕರು ತಿಳಿದುಕೊಂಡು, ಸಂಘದ ಮೂಲಕ ಕನ್ನಡ ಭಾಷೆಯನ್ನು, ಕನ್ನಡ ಸಾಹಿತ್ಯ, ಸಂಸ್ಕೃತಿಯನ್ನು ಬೆಳೆಸುವ ಉದ್ದೇಶಕ್ಕಾಗಿ ವಿದ್ಯಾವರ್ಧಕ ಸಂಘವನ್ನು ಧಾರವಾಡದಲ್ಲಿ ಸ್ಥಾಪಿಸಿದರು. ರಾ.ಹ. ದೇಶಪಾಂಡೆಯವರು ಆ ಕಾಲದ ಎಂ.ಎ. ಪದವಿ ಪಡೆದ ವ್ಯಕ್ತಿಯಾಗಿದ್ದು, ಈ ಸಂಸ್ಥೆಯು ಅವರ ಕಲ್ಪನೆಯ ಕೂಸು[೨]. ಕರ್ನಾಟಕ ವಿದ್ಯಾವರ್ಧಕ ಸಂಘವು ೨೦.೭.೧೮೯೦ರಂದು ಪ್ರಾರಂಭವಾಯಿತು. ವಿದ್ಯಾವರ್ಧಕ ಸಂಘದ ಮೂಲ ಉದ್ದೇಶವು ೧) ಕನ್ನಡದಲ್ಲಿ ಉಪಯುಕ್ತ ಕೃತಿಗಳ ರಚನೆಗೆ ಪ್ರೋತ್ಸಾಹ ೨) ಇತರ ಭಾಷೆಗಳ ಉಪಯುಕ್ತ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡಿಸಿ ಬಹುಮಾನ ನೀಡಿಕೆ. ೩) ಸಂಪನ್ಮೂಲಗಳಿಗೆ ತಕ್ಕಂತೆ ಹೊಸ ಕನ್ನಡ ಗ್ರಂಥ – ಭಂಡಾರಗಳ ಸ್ಥಾಪನೆ ಅಥವಾ ಸಾಹಿತ್ಯಕ ಪತ್ರಿಕೆಗಳ ಪ್ರಕಟಣೆ ಅಥವಾ ಈಗಾಗಲೇ ಇರುವ ಅಂತಹ ಪತ್ರಿಕೆಗಳಿಗೆ ಸಹಾಯ ಹಾಗೂ ೪) ಕನ್ನಡಿಗರಿಗೆ ಸಮರ್ಥವಾಗಿ ಸಂಪಾದಿತವಾದ ಪ್ರಾಚೀನ ಕನ್ನಡ ಕೃತಿಗಳನ್ನು ದೊರಕಿಸುವುದೇ ಆಗಿತ್ತು[೩]. ಕರ್ನಾಟಕ ವಿದ್ಯಾವರ್ಧಕ ಸಂಘವು ತನ್ನ ಧ್ಯೇಯೋದ್ದೇಶಗಳಿಗೆ ತಕ್ಕಂತೆ ೧೧ಕ್ಕೂ ಹೆಚ್ಚು ಗ್ರಂಥಗಳನ್ನು ಪ್ರಕಟಿಸಿತ್ತು. 'ವಾಗ್ಭೂಷಣ' ಎಂಬ ಮಾಸ ಪತ್ರಿಕೆಯನ್ನು ೧೮೯೬ರಲ್ಲಿ ಪ್ರಾರಂಭಿಸಿ ಆ ಮೂಲಕ ೮೫ಕ್ಕೂ ಹೆಚ್ಚು ಗ್ರಂಥಗಳನ್ನು ಬೆಳಕಿಗೆ ತಂದಿತು.

ವಿದ್ಯಾವರ್ಧಕ ಸಂಘವು ರಾಜ್ಯಾದ್ಯಂತ ಹಲವಾರು ಲೇಖಕರನ್ನು ಬೆಳೆಸಿತು. ಕನ್ನಡ ಗ್ರಂಥಗಳ ಭಾಷೆಯು ಏಕರೂಪವಾಗಿರಬೇಕೆಂದು ಸಂಘವು ಅಭಿಪ್ರಾಯಪಟ್ಟು, ಅಖಿಲ ಕರ್ನಾಟಕ ಮಟ್ಟದ ಗ್ರಂಥಕರ್ತರ ಸಮ್ಮೇಳನವನ್ನು ಧಾರವಾಡದಲ್ಲಿ ೧೯೦೭ರ ಜೂನ್ ತಿಂಗಳ ಮೊದಲ ವಾರದಲ್ಲಿ ನಡೆಸಿತು. ಎರಡನೇಯ ಸಮ್ಮೇಳವನ್ನು ಮೈಸೂರು ಸರ್ಕಾರದ ವಿದ್ಯಾ ಇಲಾಖೆಯವರು ಬೆಂಗಳೂರಿನಲ್ಲಿ ನಡೆಸಬೇಕಾಗಿತ್ತು. ಆದರೆ ಕಾರಣಾಂತರಗಳಿಂದ ಸಮ್ಮೇಳನವು ಧಾರವಾಡದಲ್ಲೇ ನಡೆಯಿತು[೪].

ಕರ್ನಾಟಕ ವಿದ್ಯಾವರ್ಧಕ ಸಂಘವು ಪ್ರಬಲವಾಗಿ ಬೆಳೆಯುತ್ತಾ ತನ್ನ ಉದ್ದೇಶಿತ ಕನ್ನಡ ನುಡಿಯ ಸೇವೆ ಮಾಡುತ್ತಲೇ, ಕರ್ನಾಟಕ ಏಕೀಕರಣ ಬಗೆಗೂ ಗಮನ ಹರಿಸಿತು. ೭.೧೦.೧೯೧೭ ರಂದು ನಡೆದ ಸಂಘದ ವ್ಯವಸ್ಥಾಪಕ ಸಮಿತಿಯ ಸಭೆಯು ಸರ್ವಾನುಮತದಿಂದ ಒಂದು ಗೊತ್ತುವಳಿಯನ್ನು ಸ್ವೀಕರಿಸಿತು. ಅದು

ಬ್ರಿಟಿಷ್ ಆಡಳಿತದಲ್ಲಿನ ಪ್ರತಿಯೊಂದು ಕನ್ನಡ ಊರು ತಾಲೂಕು ಜಿಲ್ಲೆಗಳನ್ನು ಒಟ್ಟುಗೂಡಿಸಿ ಒಂದು ರಾಜಕೀಯ ವಿಭಾಗವನ್ನು ಮಾಡಿ ಅದಕ್ಕೆ ಕರ್ನಾಟಕ ಪ್ರಾಂತವೆಂದು ಕರೆಯುವ ಬಗ್ಗೆ ಸರ್ಕಾರಕ್ಕೆ ಭಿನ್ನಹ ಮಾಡಬೇಕು, ಒಂದು ಕರ್ನಾಟಕ ಇಲಾಖೆ ಅಥವಾ ಪ್ರಾಂತವೆಂಬ ರಾಜಕೀಯ ವಿಭಾಗವನ್ನು ಮಾಡಿದರೆ ಕನ್ನಡಿಗರ ಐಕ್ಯಕ್ಕೂ, ಹಿತಕ್ಕೂ, ಬೆಳವಣಿಗೆಗೂ ಅನುಕೂಲವಾಗುವುದು ಎಂದು ಗೊತ್ತುವಳಿಯನ್ನು ಮಾಡಿದ್ದರು. ಈ ರೀತಿಯಾಗಿ ಕರ್ನಾಟಕ ಪ್ರಾಂತೀಕರಣದ ಬಗ್ಗೆ ಒಂದು ಸಂಸ್ಥೆ ಪ್ರಕಟಿಸಿದ ಅಭಿಪ್ರಾಯ ಇದೇ ಮೊದಲನೆಯಾದಾಗಿದೆ[೯].

೧೯೨೫ರಲ್ಲಿ ಭಾರತದ ರಾಜಕೀಯ ಸುಧಾರಣೆಗಳ ವಿಚಾರ ನಡೆದಾಗ ಸಂಘದ ಅಧ್ಯಕ್ಷರು ಕರ್ನಾಟಕದ ಜನರಿಗೆ ಏಕೀಕರಣದ ಬಗೆಗಿರುವ ಉತ್ಕಟ ಭಾವನೆಗಳ ಕಾರಣ ತಕ್ಷಣ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮನವಿಯನ್ನು ಮಾಡಿದ್ದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಾಧಿಕಾರದಿಂದ ಕರ್ನಾಟಕ ವಿಶ್ವವಿದ್ಯಾಲಯವು ಧಾರವಾಡದಲ್ಲಿ ಸ್ಥಾಪನೆಯಾಯಿತು. ೧೯೪೪ರಲ್ಲಿ ಬೆಳಗಾವಿಯಲ್ಲಿ ಉದ್ದೇಶಿಸಲಾದ ಮಹಾರಾಷ್ಟ್ರ ಸಾಹಿತ್ಯ ಸಮ್ಮೇಳನವನ್ನು ನಡೆಯದಂತೆ ಪ್ರತಿಭಟಸಿದರು. ೧೯೩೬ರಲ್ಲಿ ನಡೆದ ವಿಜಯನಗರದ ಸಾಮ್ರಾಜ್ಯ ಸ್ಥಾಪನೆಯ ಆರನೂರು ಶತಮಾನೋತ್ಸವ ಕಾರ್ಯಕ್ರಮದ ಜವಾಬ್ದಾರಿಯನ್ನು ಕರ್ನಾಟಕ ವಿದ್ಯಾವರ್ಧಕ ಸಂಘವು ವಹಿಸಿಕೊಂಡು ಯಶಸ್ವಿಯಾಗಿ ನಿರ್ವಹಿಸಿತು.

೬..೨. ಕನ್ನಡ ಸಾಹಿತ್ಯ ಪರಿಷತ್ತು (೧೯೧೫)

ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಯಲ್ಲಿ ಎಂ. ವಿಶ್ವೇಶ್ವರಯ್ಯನವರ ದೂರದರ್ಶಿತ್ವವು ಪ್ರಮುಖವಾಗಿತ್ತು. ಪರಿಷತ್ತು ಸ್ಥಾಪನೆಯಾದದು ಆಲೂರರು ಮತ್ತು ಅವರ ಸ್ನೇಹಿತ ಸತತ ಪ್ರಯತ್ನಗಳಿಂದ, ಕರ್ನಾಟಕದ ಬಹುತೇಕ ಎಲ್ಲಾ ಕನ್ನಡಾಭಿಮಾನಿಗಳ ಸಂಕಲ್ಪದಿಂದ ೧೯೧೫ರಂದು ಬೆಂಗಳೂರಿನಲ್ಲಿ ಸ್ಥಾಪನೆಗೊಂಡಿತ್ತು. ಪರಿಷತ್ತಿನ ಕಾರ್ಯ ನಿರ್ವಾಹಣ ಮಂಡಳಿಯು ಮೈಸೂರು ಸಂಸ್ಥಾನದ ಪ್ರತಿನಿಧಿತ್ವದಲ್ಲಿದ್ದಿತು. ಉಳಿದ ಎಲ್ಲಾ ಸಂಸ್ಥೆಗಳ, ಪ್ರದೇಶಗಳ ಪ್ರಾತಿನಿಧ್ಯವಿದ್ದುದು ಗಮನಾರ್ಹವಾಗಿದೆ. ಸಮಗ್ರ ಕರ್ನಾಟಕ ಪ್ರತಿನಿಧಿ ಸಂಸ್ಥೆಯಾದ ಕರ್ನಾಟಕ ಸಾಹಿತ್ಯ ಪರಿಷತ್ತು. ನಂತರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಎಂದು ಹೆಸರು ಬದಲಾಯಿತು. ಪರಿಷತ್ತು ಆರಂಭ ಕಾಲದ ಉದ್ದೇಶಗಳ ಜೊತೆಗೆ ಕರ್ನಾಟಕ ಏಕೀಕರಣ ವಿಷಯದಲ್ಲಿಯೂ ಆಸಕ್ತಿ ವಹಿಸಿತು. ಕನ್ನಡ ನುಡಿ ಮತು ಸಾಹಿತ್ಯ ಪರಿಷತ್ ಪತ್ರಿಕೆಗಳ ಮೂಲಕ ಕರ್ನಾಟಕದ ಆನೇಕ ಸಾಹಿತಿಗಳು ಕನ್ನಡದ ಹಲವಾರು ಸಮಸ್ಯೆಗಳು ಮತ್ತು ಅದಕ್ಕೆ ತಕ್ಕತಂಹ ಪರಿಹಾರಗಳನ್ನು ಪ್ರಕಟಿಸುತ್ತಾ ಏಕೀಕಣಕ್ಕೆ ಶ್ರಮಿಸಿದರು.

೬.೩. ಕರ್ನಾಟಕ ಸಭೆ

ಕರ್ನಾಟಕ ಏಕೀಕರಣ ವಿಷಯವನ್ನೇ ಪ್ರಧಾನವಾಗಿರಿಸಿಕೊಂಡು ಸ್ಥಾಪಿಸಲಾದ ಸಭೆಯೇ 'ಕರ್ನಾಟಕ ಸಭೆ'. ಇದನ್ನು ೧೯೧೬ರಲ್ಲಿ ಗದಿಗೆಯ್ಯ ಹೊನ್ನಾಪುರಮಠ ಅವರ ಮನೆಯಲ್ಲಿ ಆಲೂರರು, ಕಡಪಾ ರಾಘವೇಂದ್ರರಾಯರು, ನರಗುಂದರವರು ಒಟ್ಟಾಗಿ ಸ್ಥಾಪಿಸಿದರು. ಸಂಸ್ಥೆಯ ಕಾರ್ಯದರ್ಶಿಯಾಗಿ ಕಡಪಾ ರಾಘವೇಂದ್ರರಾಯರೇ ಕಾರ್ಯ ನಿರ್ವಹಿಸಿದರು. ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಮಿತಿಯು ಕರ್ನಾಟಕದಲ್ಲಿ ಪ್ರಾಂತೀಯ ಕಾಂಗ್ರೆಸ್ ಸಮಿತಿಯನ್ನು ರಚಿಸಲು ಕರ್ನಾಟಕ ಸಭೆಯು ಕಾರಣವಾಯಿತು. ಬಾಲಗಂಗಾಧರ ತಿಲಕರು ರಾಷ್ಟ್ರೀಯತೆಯನ್ನು ಜನರಲ್ಲಿ ಜಾಗೃತಿಗೊಳಿಸುವುದಕ್ಕೆ ಗಣೇಶ ಉತ್ಸವ ಮತ್ತು ಶಿವಾಜಿ ಉತ್ಸವನ್ನು ಸಾರ್ವಜನಿಕ ಉತ್ಸವಗಳಾಗಿ ಪ್ರಾರಂಭಿಸಿದರು. ಆದೇ ರೀತಿಯಾಗಿ ಆಲೂರರು ಕರ್ನಾಟಕದ ಬಗ್ಗೆ ಜನರಲ್ಲಿ ಆಸಕ್ತಿ ಹುಟ್ಟಿಸಲು, ನಾಡಹಬ್ಬ, ವಿದ್ಯಾರಣ್ಯ ಉತ್ಸವ, ವಿಜಯನಗರ ಉತ್ಸವ, ಬಸವೇಶ್ವರ ಉತ್ಸವ, ನಿಜಗುಣ ಶಿವಯೋಗಿಗಳ ಉತ್ಸವ, ಕುಮಾರವ್ಯಾಸ ಉತ್ಸವ, ಪಂಪ ಉತ್ಸವಗಳ ಆಚರಣೆಯನ್ನು ಆರಂಭಿಸಿದರು[೬]. ಕಡಪಾ ರಾಘವೇಂದ್ರರಾಯರು ಕರ್ನಾಟಕದ ಏಕೀಕರಣದ ವಿಷಯವನ್ನು ಪ್ರಚಾರ ಮಾಡಿ ಬಳ್ಳಾರಿ ಜನರಲ್ಲಿ ತಿಳುವಳಿಕೆ ಮೂಡುವಂತೆ ಮಾಡಿದರು. ಅಲ್ಲದೆ ಅವರು ಕರ್ನಾಟಕ ಸಭಾದ ಮೂಲಕ ಪ್ರಕಟಿಸಿದ "ಕನ್ನಡಿಗರ ಕರ್ತವ್ಯ" ಎಂಬ ಕಿರುಹೊತ್ತಿಗೆಯು ಆ ನಿಟ್ಟಿನಲ್ಲಿ ಕನ್ನಡಿಗರ ಮನವೊಲಿಸಿ ಒಂದಾಗಬೇಕೆಂಬ ಪ್ರೇರಣೆ ನೀಡಲು ಸಹಕಾರಿಯಾಯಿತು. ಕೇವಲ ಸಾಹಿತಿಗಳ ಮತ್ತು ಕನ್ನಡಾಭಿಮಾನಿಗಳ ಸಂಸ್ಥೆಯಾಗಿ ಬೆಳೆದ ಕರ್ನಾಟಕ ಸಭಾ, ೧೯೨೪ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಜೊತೆ ಸೇರಿ, ಅಖಿಲ ಕರ್ನಾಟಕ ಏಕೀಕರಣ

ಸಂಘ ಆಯಿತು. ಸಂಘದಲ್ಲಿ ಕಾಂಗ್ರೆಸ್ಸಿಗರಲ್ಲದ ಜನರೂ ಇದ್ದರು. ಅಲ್ಪ ಅವಧಿಯಲ್ಲಿಯೇ ಸಂಘವು ಅಪಾರವಾದ ಸಾಧನೆಯನ್ನು ಮಾಡಿ ಕನ್ನಡ, ಕರ್ನಾಟಕದ ಬಗ್ಗೆ ಜನರಲ್ಲಿ ಪ್ರಜ್ಞೆ ಮೂಡುವಂತೆ ಮಾಡಿದೆ.

೬.೪. ಕರ್ನಾಟಕ ಏಕೀಕರಣ ಪರಿಷತ್ತು

೧೯೨೪ ರಿಂದ ಆರಂಭವಾಗಿ ೧೯೪೬ರವರೆಗೆ ನಡೆದ ಕರ್ನಾಟಕ ಏಕೀಕರಣ ಪರಿಷತ್ತಿನ ಮುಖ್ಯ ಉದ್ದೇಶವೂ ಕರ್ನಾಟಕ ಏಕೀಕರಣವೇ ಆಗಿತ್ತು. ಬೇರೆ ಬೇರ ಸ್ಥಳಗಳಲ್ಲಿ ನಡೆದ ಪರಿಷತ್ತಿನ ಸಭೆಗಳಲ್ಲಿ ಸ್ವಾಗತಾಧ್ಯಕ್ಷರಾಗಲೀ, ಉದ್ಘಾಟಕರಾಗಲೀ ಅಥವಾ ಅಧ್ಯಕ್ಷರಾಗಲೀ ಕರ್ನಾಟಕ ಏಕೀಕರಣವನ್ನು ಹೊರತು ಪಡಿಸಿ ಬೇರೇನನ್ನು ಪ್ರಸ್ತಾಪಿಸಿಲ್ಲ[೨]. ೩೧.೮.೧೯೪೬ ರಂದು ದಾವಣಗೆರೆಯಲ್ಲಿ ಕರ್ನಾಟಕಸ್ಥರ ಮಹಾಸಭೆ ನಡೆಯಿತು. ಸಭೆಯ ಸ್ವಾಗತಾಧ್ಯಕ್ಷತೆಯನ್ನು ಉರುವಕೊಂಡದ ಜಗದ್ಗುರುಗಳು ವಹಿಸಿಕೊಂಡಿದ್ದರು. ಕೆ.ಆರ್. ಕಾರಂತರು ಮಹಾಸಭೆಯನ್ನು ಉದ್ಘಾಟಿಸಿವರು. ಅಧ್ಯಕ್ಷತೆಯನ್ನು ಎಂ.ಪಿ. ಪಾಟೀಲರು ವಹಿಸಿಕೊಂಡಿದ್ದರು. ಕರ್ನಾಟಕದ ಎಲ್ಲಾ ಭಾಗಗಳಿಂದ ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಬಂದಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಬರುವ ದಿನಗಳು ಹತ್ತಿರದಲ್ಲಿವೆ ಎಂದು, ಬಹುತೇಕರಿಗೆ ತಿಳಿದಿತ್ತು. ರಾಷ್ಟ್ರದಲ್ಲಿ ರಾಜಕೀಯ ಘಟನೆ ಸಿದ್ದವಾಗುವುದಕ್ಕೆ ಮೊದಲೇ ಭಾಷಾವಾರು ಪ್ರಾಂತ ರಚನೆ ಆಗುವುದು ಒಳಿತು, ಹಾಗೂ ಸೂಕ್ತ ಎಂದು ಅನೇಕರ ಆಭಿಪ್ರಾಯವಾಗಿತ್ತು. ಆ ಸಭೆಯಲ್ಲಿ ಸಾಧ್ಯವಾದರೆ ಮೈಸೂರನ್ನು ಒಳಗೊಂಡು, ಅಗತ್ಯವಾದರೆ ಅವನ್ನು ಬಿಟ್ಟು ಕರ್ನಾಟಕ ರಾಜ್ಯ ನಿರ್ಮಾಣವಾಗಬೇಕು ಎಂಬ ಗೊತ್ತುವಳಿಯನ್ನು ಬಳ್ಳಾರಿಯ ಕೋ.ಚೆನ್ನಬಸಪ್ಪ ಮಂಡಿಸಿದರು. ಅದನ್ನು ಬೆಂಗಳೂರಿನ ಬಿ. ಬಸವಲಿಂಗಪ್ಪ ಅನುಮೋದಿಸಿದರು. ಗೊತ್ತುವಳಿಗೆ ಕೆಂಗಲ್ ಹನುಮಂತಯ್ಯನವರು ಒಂದು ಬಹು ಮುಖ್ಯ ತಿದ್ದುಪಡಿ ತಂದರು. ಆದು ಮೈಸೂರನ್ನು ಒಳಗೊಂಡು ಕರ್ನಾಟಕ ರಾಜ್ಯ ನಿರ್ಮಾಣವಾಗಬೇಕು ಎಂದಿತ್ತು. ಅದರ ಕಾರ್ಯ ಸಾಧನೆಗೆ ಪರಿಷತ್ತು ಹಲವಾರು ಕಾರ್ಯಗಳನ್ನು ಮುಂದುವರೆಸಿಕೊಂಡು ಬಂದಿತ್ತು.

೬.೫. ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು

ಕರ್ನಾಟಕದ ಏಕೀಕರಣಕ್ಕಾಗಿ ೧೯೫೩ರವರೆಗೆ ಅನೇಕ ಹೋರಾಟಗಳು ನಡೆದವು. ೧೯.೪.೧೯೫೩ರಲ್ಲಿ ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯವರು ಏಕೀಕರಣದ ವಿಚಾರವಾಗಿ ಸಭೆಯನ್ನು ಆಯೋಜಿಸಿದರು. ಈ ಸಭೆಗೆ ಎಲ್ಲಾ ಕಾಂಗ್ರೆಸ್ಸಿನ ನಾಯಕರು, ಹಾಗೂ ಸದಸ್ಯರು ಪಾಲ್ಗೊಂಡಿದ್ದರು. ಸಭೆಯಲ್ಲಿ ಕಾಂಗ್ರೆಸ್ ನಾಯಕರಿಗೂ ಜನರಿಗೂ ವಾದ ಪ್ರತಿವಾದ ಪ್ರಾರಂಭವಾಗಿ ಕೊನೆಗೆ ಸಂಘರ್ಷಣೆ, ದ್ವಂಸಗಳಿಂದಾಗಿ ಸಭೆಯು ಪೂರ್ಣಗೊಳ್ಳಲಿಲ್ಲ. ಇದರಿಂದ ಕಾಂಗ್ರೆಸ್ ನಾಯಕರು ಪ್ರಧಾನಿಯವರಿಗೆ ಏಕೀಕರಣಕ್ಕಾಗಿ ಒತ್ತಾಯಿಸ ತೊಡಗಿದರು. ಕಾಂಗ್ರೆಸ್‌ನಲ್ಲಿ ಕೆಲವು ನಾಯಕರು ನಿರ್ಲಿಪ್ತರಾಗಿದ್ದರು. ನಾಯಕರ ಬೇಜವ್ದಾರಿಯ ವರ್ತನೆಯನ್ನು ಗಮನಿಸಿದ ಕಾಂಗ್ರೆಸ್‌ಯೇತರ ಪಕ್ಷಗಳ ನಾಯಕರು ಸರ್ವಪಕ್ಷೀಯ ಏಕೀಕರಣ ಪರಿಷತ್ತನ್ನು ನಡೆಸಿದರು. ಈ ಪರಿಷತ್ತಿನಲ್ಲಿ ಕಮ್ಯುನಿಷ್ಟ್ ಮತ್ತು ಸೋಷಿಯಲಿಸ್ಟ್ ಪಕ್ಷಗಳು ಪ್ರಮುಖವಾಗಿದ್ದವು. ಕರ್ನಾಟಕ ರಾಜ್ಯ ನಿರ್ಮಾಣವನ್ನೇ ಮುಖ್ಯ ಗುರಿಯನ್ನಾಗಿಸಿಕೊಂಡು ಚಳುವಳಿಯನ್ನು ನಡೆಸಲು ಈ ಪಕ್ಷಗಳು ಮುಂದಾದವು. ಇದರ ಫಲವಾಗಿ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು ರೂಪಗೊಂಡಿತು. ದಾವಣಗೆರೆಯಲ್ಲಿ ಸಂಘವನ್ನು ಸ್ಥಾಪಿಸಲಾಗಿ, ಪರಿಷತ್ತಿನ ಕಾರ್ಯದರ್ಶಿಯಾಗಿ ಎಸ್.ವಿ. ಘಾಟೆಯವರು ನಿರ್ವಹಿಸಿದ್ದರು. ಅ. ಕ. ರಾ. ನಿ. ಪರಿಷತ್ತಿನ ಮೊದಲ ಅಧಿವೇಶನ ಧಾರವಾಡದಲ್ಲಿ ನಡೆಯಿತು. ಅಧಿವೇಶದಲ್ಲಿ ಬಳ್ಳಾರಿಯನ್ನು ಕರ್ನಾಟಕಕ್ಕೆ ಸೇರಿಸಬೇಕು ಎಂದು ಮಿಶ್ರಾರವರ ವರದಿಯನ್ನು ಒಪ್ಪಿಕೊಂಡಿತ್ತು. ಪರಿಷತ್ತಿನ ಪದಾಧಿಕಾರಿಗಳು ಕರ್ನಾಟಕದ ಎಲ್ಲೆಡೆ ಸಂಚರಿಸಿ ಏಕೀಕರಣ ಬಗೆಗೆ ಜನರಿಗೆ ಜಾಗೃತಿ ಮೂಡಿಸಲು ಅನೇಕ ಸಮ್ಮೇಳನಗಳನ್ನು ನಡೆಸಿದರು. ಪ್ರಧಾನಿ ನೆಹರೂರವರನ್ನು ಭೇಟಿಯಾದ ಅಳವಂಡಿ ಶಿವಮೂರ್ತಿ ಸ್ವಾಮಿಗಳು ಮತ್ತು ಕೆ.ಆರ್. ಕಾರಂತರು ಏಕೀಕರಣದ ಬಗೆಗೆ ಅವರಲ್ಲಿ ಚರ್ಚಿಸಿ ಅವರಿಂದ ನಿರಾಶದಾಯಕವಾದ ಉತ್ತರವನ್ನು ಪಡೆದರು. ಇದರಿಂದ ಅ. ಕ. ರಾ. ನಿ. ಯು ೧೯೫೩ ಸೆಪ್ಟಂಬರ್ ಮೊದಲ ವಾರವನ್ನು 'ಕರ್ನಾಟಕ ವಾರ' ಎಂದು ಆಚರಿಸಿತು.

ಅ. ಕ. ರಾ. ನಿ ಪರಿಷತ್ತಿನ ಎರಡನೆಯ ಅಧಿವೇಶನವು ಹಂಪೆಯಲ್ಲಿ ೩.೧೨.೧೯೫೩ರಂದು ಸಮಾವೇಶಗೊಂಡಿತ್ತು. ದಾಮೋದರ ಮೆನಲ್‌ರವರ ಅಧಿವೇಶನವನ್ನು ಉದ್ಘಾಟಿಸಿದರು. ಕೆ.ಆರ್. ಕಾರಂತರು

ಅಧ್ಯಕ್ಷತೆಯನ್ನು ವಹಿಸಿಕೊಂಡು, ಪರಿಷತ್ತು ಈ ಮೊದಲು ಸಾಧಿಸಿದ ಕಾರ್ಯಗಳನ್ನು ಮತ್ತು ಲೋಕಸಭೆಯಲ್ಲಿನ ಸದಸ್ಯರಿಗೆ ಕರ್ನಾಟಕ ಏಕೀಕರಣಕ್ಕಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಾಯಿಸುವಂತೆ ಶಿವಮೂರ್ತಿ ಸ್ವಾಮಿಗೆ ಮತ್ತು ಎಂ.ಎಸ್. ಗುರುಪಾದಸ್ವಾಮಿಯವರಿಗೆ ತಿಳಿಸಿದರು. ಇದಕ್ಕಾಗಿ ಎಲ್ಲಾ ರೀತಿಯಿಂದಲು ಕಾರ್ಯಗಳನ್ನು ಹಾಕಿಕೊಂಡು ಕರ್ನಾಟಕವನ್ನು ಕಟ್ಟುವುದಕ್ಕೆ ಪರಿಷತ್ತು ಶ್ರಮಿಸಿತು.

೬.೬. ಬಳ್ಳಾರಿ ಜಿಲ್ಲಾ ಕ್ರಿಯಾ ಸಮಿತಿ:

ಬಳ್ಳಾರಿಯನ್ನು ಕರ್ನಾಟಕದಲ್ಲೇ, ಉಳಿಸಿಕೊಳ್ಳುವುದಕ್ಕೆ ಸಾಂಘಿಕವಾದ ಹೋರಾಟದ ಬಗ್ಗೆ ಮನಗೊಂಡು ಇಲ್ಲಿಯ ನಾಯಕರು ಸೇರಿ ಒಂದು ಸಮಿತಿಯನ್ನು ರಚನೆ ಮಾಡಿದ್ದರು. 'ಬಳ್ಳಾರಿ ಜಿಲ್ಲಾ ಕ್ರಿಯಾ ಸಮಿತಿ' ಎಂದು ಹೆಸರಿಸಿದರು. ಸಮಿತಿಯಲ್ಲಿ ಟಿ. ಸುಬ್ರಹ್ಮಣಂ, ಅಬ್ದುಲ್ ರಜಾಕ್ ಸಾಬ್, ಎಂ. ರಾಘವೇಂದ್ರ ರಾವ್, ಗಡಿಗಿ ಮರಿಸ್ವಾಮಪ್ಪ, ಏನ್.ಎಂ. ಕೊಟ್ರಬಸಯ್ಯ, ಎನ್.ಎಂ.ಕೊಟ್ರಯ್ಯ, ಕೆ. ಸಾಂಬಣ್ಣ, ಬಿ. ಅನಂತಾಚಾರ್ಯ, ಕೋ. ಚೆನ್ನಬಸಪ್ಪ ಮುಂತಾದವರು ಸೇರಿ ಅಖಂಡ ಬಳ್ಳಾರಿ ಜಿಲ್ಲಾ ಕ್ರಿಯಾ ಸಮಿತಿಯನ್ನು ರಚಿಸಿದರು[೯]. ಜಿ. ಗಾದಿಲಿಂಗಪ್ಪನವರು ಸಮಿತಿಯ ಅಧ್ಯಕ್ಷತೆಯನ್ನು ವಹಿಸಿಕೊಂಡು ವಿಲೀನ ಪೂರ್ವದ ಬಳ್ಳಾರಿ ಜಿಲ್ಲೆಯನ್ನು ಇಡಿಯಾಗಿ ಕರ್ನಾಟಕದಲ್ಲಿ ಉಳಿಸಲು ಬಳ್ಳಾರಿ ಜನ ಮಾತ್ರವಲ್ಲದೆ ಕನ್ನಡಿಗರೆಲ್ಲರೂ ಎಂತಹ ತ್ಯಾಗಕ್ಕಾದರೂ ಸಿದ್ಧರಾಗಬೇಕೆಂದು ಕರೆ ನೀಡಿದರು.

ಬಳ್ಳಾರಿ ಜಿಲ್ಲಾ ಕ್ರಿಯಾ ಸಮಿತಿಯು ಬಳ್ಳಾರಿಗೆ ಭೇಟಿ ನೀಡಿದ ವಿವಿಧ ಆಯೋಗಗಳ ಮುಂದೆ ಮನವಿಗಳನ್ನು ಮಂಡಿಸತಲ್ಲದೆ ಬಳ್ಳಾರಿ ಜಿಲ್ಲೆಯನ್ನು ಮೈಸೂರು ರಾಜ್ಯದಲ್ಲಿ ವಿಲೀನ ಮಾಡಬೇಕೆಂದು ಒತ್ತಾಯ ಮಾಡಿತು. ನಿಯೋಗಗಳು ಬಂದ ಸಮಯದಲ್ಲಿ ಈ ಸಮಿತಿಯು ವಹಿಸಿದ ಪಾತ್ರವು ಬಹುಮುಖ್ಯವಾಗಿದೆ. ಆಯೋಗಗಳ ಮುಂದೆ ತನ್ನ ವಾದವನ್ನು ಮಂಡಿಸುವ ಮುನ್ನ ಸಮಿತಿಯ ಎಲ್ಲಾ ಸದಸ್ಯರು ಕಛೇರಿಯಲ್ಲಿ ಸೇರಿಕೊಂಡು ಕನ್ನಡ ಪರ ವಾದ ವಿಚಾರಗಳನ್ನು ಚರ್ಚಿಸಿ ಪೂರ್ವಸಿದ್ಧತೆ ಮಾಡಿಕೊಳ್ಳುತ್ತಿದ್ದರು. ತದನಂತರ ಅವರು ಬಳ್ಳಾರಿಯನ್ನು ಮೈಸೂರು ಪ್ರಾಂತ್ಯದಲ್ಲಿ ಸೇರಿಸುವಂತೆ ಆಯೋಗಗಳಿಗೆ ಮನವಿಗಳನ್ನು ಮಾಡುತ್ತಿದ್ದರು. ಇಂತಹ ಪೂರ್ವ ಸಿದ್ಧತಾ ಸಭೆಗಳಿಗೆ ಅನೇಕ ಗಣ್ಯರನ್ನು ಕರೆಸುತ್ತಿದ್ದರು. ಹೀಗೆ ಬಂದವರಲ್ಲಿ ಧಾರವಾಡ ಪಂಚಮುಖಿಯವರು ಒಬ್ಬರು. ಬಳ್ಳಾರಿಯು ಕರ್ನಾಟಕಕ್ಕೆ ಸೇರಬೇಕಾದ ಔಚಿತ್ಯದ ಬಗ್ಗೆ ಮತ್ತು ಅವಶ್ಯಕತೆಯ ಬಗ್ಗೆ ಆಯೋಗದ ಅಧ್ಯಕ್ಷರಾದ ಮಿಶ್ರಾರಿಗೆ ಮನವರಿಕೆ ಮಾಡಿಕೊಟ್ಟರು. ಇಂತಹ ಸಂಘಟಿತ ಪ್ರಯತ್ನಗಳು ಜಿಲ್ಲೆಯ ಅಸ್ತಿತ್ವವನ್ನು ಉಳಿಸಲು ಬಹುತೇಕ ಕಾರಣವಾಗಿವೆ.

ಆಂಧ್ರಪ್ರದೇಶ ರಚನೆಯಾದ ನಂತರ ಬಳ್ಳಾರಿಯು ಎಲ್ಲಿ ಉಳಿಯಬೇಕೆಂಬ ಪ್ರಶ್ನೆ ಬಂದಿತು. ಆಗ ಮದ್ರಾಸಿನಲ್ಲಿ ಉಳಿಸಿಕೊಳ್ಳಲು ಅಲ್ಲಿನ ಮುಖ್ಯಮಂತ್ರಿ ರಾಜಾಜಿ ಸಿದ್ಧವಿರಲಿಲ್ಲ. ಆಗ ಬಳ್ಳಾರಿ ಕರ್ನಾಟಕ ಕ್ರಿಯಾ ಸಮಿತಿ ಈ ಸಂದರ್ಭ ಬಳಸಿಕೊಂಡು ಬಳ್ಳಾರಿಯನ್ನು ಮೈಸೂರಿನಲ್ಲಿ ಸೇರಿಸುವುದಕ್ಕೆ ನಿಯೋಗವೊಂದನ್ನು ಮಾಡಿಕೊಂಡು ಮೈಸೂರಿನ ಮುಖ್ಯಮಂತ್ರಿ ಮತ್ತು ಅವರ ಸಚಿವ ಸಂಪುಟದ ಸದಸ್ಯರನ್ನು, ಶಾಸಕರನ್ನು ಭೇಟಿ ಮಾಡಿತು. ಆ ನಿಯೋಗದಲ್ಲಿ ಕ್ರಿಯಾ ಸಮಿತಿ ಅಧ್ಯಕ್ಷ ಶ್ರೀ ಜಂತಕಲ್ಲು ಗಾದಿಲಿಂಗಪ್ಪ, ಇತರ ಪದಾಧಿಕಾರಿಗಳಾದ ಹರಗಿನಡೋಣಿ ಸಣ್ಣಬಸವನಗೌಡ, ಅಲ್ಲಂ ಕರಿಬಸಪ್ಪ ಕೊಳಗಾರಹಳ್ಳಿ ಲಿಂಗಣ್ಣ, ಬಿ.ಎಂ. ರೇವಣಸಿದ್ದಯ್ಯ ಮುಸ್ಲಿಮರ ಮುಖಂಡ ಮಾಜಿ ನಗರ ಸಭಾಧ್ಯಕ್ಷ ಅಬ್ದುಲ್ ರಜಾಕ್ ಸಾಹೇಬ್, ಕ್ರಿಯಾ ಸಮಿತಿ ಕಾರ್ಯದರ್ಶಿ ಕೋ. ಚನ್ನಬಸಪ್ಪ, ಗಡಿಗಿ ಮರಿಸ್ವಾಮಿಪ್ಪ ಮುಂತಾದವರು ಸುಮಾರು ೧೫ಜನ ಮುಖ್ಯಮಂತ್ರಿಗಳನ್ನು ಬೇಟಿ ಮಾಡಿ ಬಳ್ಳಾರಿ ಜಿಲ್ಲೆಯನ್ನು ಮೈಸೂರಿನಲ್ಲಿ ಸೇರಿಸಿಕೊಳ್ಳಬೇಕಾದ ಅಗತ್ಯವನ್ನು ಮನವರಿಕೆ ಮಾಡಿಕೊಟ್ಟರು. ಮೈಸೂರು ಶಾಸನ ಸಭೆಯ ಬಹುತೇಕ ಎಲ್ಲ ಸದಸ್ಯರನ್ನು ಅವರಿದ್ದಲ್ಲಿಗೆ ಹೋಗಿ ಖುದ್ದಾಗಿ ಕಂಡು ಬಳ್ಳಾರಿ ಜಿಲ್ಲೆಯನ್ನು ಮೈಸೂರು ರಾಜ್ಯಕ್ಕೆ ಸೇರಿಸಿಕೊಳ್ಳಬಹುದೆಂಬ ಮನವಿಗೆ ಸಹಿ ಪಡೆದು ಮಾನ್ಯ ಮುಖ್ಯಮಂತ್ರಿಗಳಿಗೆ ಅರ್ಪಿಸಲಾಯಿತು. ಆ ಒಪ್ಪಿಗೆಯ ಮನವಿಯ ಆಧಾರದ ಮೇಲೆ ಬಳ್ಳಾರಿಯನ್ನು ಮೈಸೂರು ರಾಜ್ಯದಲ್ಲಿ ಸೇರಿಸಲು ಮೈಸೂರು ವಿಧಾನಸಭೆ ಒಪ್ಪಿಗೆಯನ್ನು ನೀಡಿತು.

ರಾಜ್ಯ ಪುನರ್ವಿಂಗಡಣ ಆಯೋಗಕ್ಕೆ ಬಳ್ಳಾರಿ ಕ್ರಿಯಾ ಸಮಿತಿಯ ಪರವಾಗಿ ಕೋ. ಚೆನ್ನಬಸಪ್ಪನವರು ಮನವಿಯನ್ನು ಕೊಟ್ಟರು, ರಾಜ್ಯ ಪುನರ್ವಿಂಗಡಣಾ ಆಯೋಗವು ಬಳ್ಳಾರಿ ತಾಲೂಕು, ಸಿರುಗುಪ್ಪ ತಾಲೂಕು,

ತುಂಗಭದ್ರ ಅಣೆಕಟ್ಟು ಸೇರಿದಂತೆ ಹೊಸಪಟೆ ತಾಲೂಕುಗಳನ್ನು ಆಂದ್ರಕ್ಕೆ ಸೇರಿಸಬೇಕೆಂದು ತನ್ನ ವರದಿಯಲ್ಲಿ ಸೂಚಿಸಿತು. ಇದರಿಂದ ಕ್ರಿಯಾ ಸಮಿತಿಯವರು ವರದಿಯ ವಿರುದ್ದ ಆಕ್ರೋಶಗೊಂಡು ಚಳುವಳಿಯನ್ನು ಪ್ರಾರಂಭಿಸಿದರು. ಅಳವಂಡಿ ಶಿವಮೂರ್ತಿಯವರ ಅಧ್ಯಕ್ಷತೆಯಲ್ಲಿ ಅ. ಕ. ರಾ. ನಿ. ಪರಿಷತ್ತು ಹಂಪೆಯಲ್ಲಿ ಸಭೆ ಸೇರಿತು. ಸಭೆಯಲ್ಲಿ ತುಂಗಭದ್ರ ವಿಮೋಚನಾ ಸಮಿತಿಯನ್ನು ರಚಿಸಿಕೊಂಡು ನೀರಿನ ಸತ್ಯಾಗ್ರಹ ಪ್ರಾರಂಭ ಮಾಡಿದರು. ಸುಮಾರು ೩೦ ದಿನಗಳವರೆಗೆ ಚಳವಳಿ ನಡೆಯಿತು. ಇದರಲ್ಲಿ ೧೨೦೦ ಜನರು ಬಂಧಿತರಾದರು. ನೀರಿನ ಸತ್ಯಾಗ್ರಹ ಚಳುವಳಿಯು ಯಶಸ್ವಿಯಾಗಿ ಬಳ್ಳಾರಿಯು ಕರ್ನಾಟಕದಲ್ಲಿ ಸೇರಿಸುವಂತೆ ಮಾಡಿದ ಕೀರ್ತಿಯು ಬಳ್ಳಾರಿ ಜಿಲ್ಲಾ ಕ್ರಿಯಾ ಸಮಿತಿಗೆ ಸಲ್ಲುತ್ತದೆ.

ಬಳ್ಳಾರಿಯಲ್ಲಿ ನಡೆದ ಏಕೀಕರಣ ಚಳುವಳಿಯಲ್ಲಿ ಭಾಗವಹಿಸಿದ ಅನೇಕ ಜನರು, ಬಳ್ಳಾರಿ ಜಿಲ್ಲಾ ಕ್ರಿಯಾ ಸಮಿತಿಯ ಸದಸ್ಯರಾಗಿದ್ದರು. ಇವರೆಲ್ಲರು ಕರ್ನಾಟಕ ಏಕೀಕರಣಕ್ಕೆ ಮತ್ತು ಕನ್ನಡದ ಉಳಿವಿಗಾಗಿ ದುಡಿದವರಾಗಿದ್ದಾರೆ. ಕರ್ನಾಟಕ ಏಕೀಕರಣಕ್ಕೆ ಬಲಿಯಾದ ಕರ್ನಾಟಕದ ಏಕೈಕ ವ್ಯಕ್ತಿಯಾದ ಪಿಂಜಾರ ರಂಜಾನ್ ಸಾಬ್ ಈ ಕ್ರಿಯಾ ಸಮಿತಿಯ ಸದಸ್ಯರಾಗಿದ್ದರು. ಬಳ್ಳಾರಿ ಜನರಿಗೆ ಕರ್ನಾಟಕದ ಬಗ್ಗೆ, ಕನ್ನಡದ ಉಳಿವಿನ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸುವಲ್ಲಿ ಈ ಕ್ರಿಯಾ ಸಮಿತಿಯ ಪಾತ್ರ ಮಹತ್ವದಾಗಿದೆ.

೬.೭. ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘ

೧೯೧೬ರಲ್ಲಿ ಜನ್ಮವೆತ್ತಿದ್ದ "ಮದ್ರಾಸ್ ವೀರಶೈವ ವಿದ್ಯಾವರ್ಧಕ ಸಂಘ, ಬಳ್ಳಾರಿ" ಎಂಬ ಮೊಟ್ಟಮೊದಲ ಸಾರ್ವಜನಿಕಾಪೇಕ್ಷೆಯುಳ್ಳ ಒಂದು ಸಂಸ್ಥೆ, ಬಳ್ಳಾರಿ ಜಿಲ್ಲೆಯಲ್ಲಿ ಕನ್ನಡ ಮಾಧ್ಯಮದ ಶಾಲೆಗಳನ್ನು ತೆರೆಯುವುದು. ಆ ಮೂಲಕ ಈ ಭಾಗದ ಜನರಿಗೆ ಶಿಕ್ಷಣವನ್ನು ಒದಗಿಸುವ ಗುರಿಯನ್ನು ಹಾಗೂ ಉದ್ದೇಶವನ್ನು ಅದು ಹೊಂದಿತ್ತು.

ಸಂಸ್ಥೆಯು ತನ್ನ ಉದ್ದೇಶಿತ ಗುರಿಯನ್ನು ಸಾಧಿಸುವ ದಿಸೆಯಲ್ಲಿ ಅನೇಕ ಶಾಲಾ, ಕಾಲೇಜುಗಳನ್ನು ಜಿಲ್ಲೆಯಾದ್ಯಂತ ಸ್ಥಾಪಿಸಿ, ಜನರಿಗೆ ಶಿಕ್ಷಣ ದೊರೆಯುವಂತೆ ಮಾಡಿತು. ವಿದ್ಯಾ ಚಟುವಟಿಕೆಗಳ ಜೊತೆಗೆ ಈ ಸಂಸ್ಥೆಯ ಸದಸ್ಯರುಗಳು ಏಕೀಕರಣ ಚಳುವಳಿಯಲ್ಲೂ ಭಾಗವಹಿಸುತ್ತಿದ್ದರು.

೧೯೫೩ರಲ್ಲಿ ವಾಂಛೂರವರ ವರದಿಯಂತೆ ಬಳ್ಳಾರಿಯ ಮೂರು ತಾಲ್ಲೂಕುಗಳಾದ ಆದವಾನಿ, ಅಲೂರು ಮತ್ತು ರಾಯದುರ್ಗವನ್ನು ಆಂಧ್ರ ಪ್ರದೇಶಕ್ಕೆ ವರ್ಗಾಯಿಸಿ ಮಿಕ್ಕ ಇಡೀ ಜಿಲ್ಲೆಯನ್ನು ಹಳೇ ಮೈಸೂರು ಸಂಸ್ಥಾನಕ್ಕೆ ಸೇರಿಸಿದ್ದರು. ಎಲ್.ಎಸ್..ಮಿಶ್ರಾರವರು ಮತ್ತೊಮ್ಮೆ ಪರಿಸ್ಕರಿಸಿ ಬಳ್ಳಾರಿಯನ್ನು ಕರ್ನಾಟಕದಲ್ಲಿ ಸೇರಿಸುವಂತೆ ವರದಿ ನೀಡಿದರು. ಅದರೆ, ರಾಜ್ಯ ಪುನರ್ವಿಂಗಡಣಾ ಆಯೋಗವು ಬಳ್ಳಾರಿ ನಗರವನ್ನು ಮತ್ತು ಹೊಸಪೇಟೆಯ ಹತ್ತಿರದ ತುಂಗಭದ್ರ ಜಲಾಶಯವಿರುವ ಉಪ ತಾಲ್ಲೂಕಾದ ಮಲ್ಲಾಪುರವನ್ನು ಆಂಧ್ರ ಪ್ರದೇಶಕ್ಕೆ ನೀಡಬೇಕೆಂದು ಶಿಫಾರಸ್ಸು ಮಾಡಿತು. ಇದರಿಂದ ಕನ್ನಡಿಗರಿಗೆ ಆಘಾತವಾಗಿಯಿತು. ಕನ್ನಡ ಭಾಷೆಯ ಸಮಸ್ತ ಕೋಮುಗಳೆಲ್ಲಾ ಒಂದಾಗಿ ನಿಂತವು. ಹೋರಾಟಕ್ಕಾಗಿ ತನುಮನಧನ ಸಮರ್ಪಿಸಲು ಸಿದ್ಧರಾದರು.

೧೯೫೫ರಲ್ಲಿ ನಡೆದ ಹೋರಾಟದಲ್ಲಿ ಸಂಘ ತನ್ನ ಆಸ್ತಿತ್ವವನ್ನು ಮರೆತು ತನ್ನ ಸಂಪತ್ತನ್ನೆಲ್ಲಾ ಈ ಹೋರಾಟಕ್ಕೆ ಪಣವಾಗಿಟ್ಟಿತು. ಬಳ್ಳಾರಿ ಮತ್ತೊಮ್ಮೆ ತೆಲುಗರ ಪಾಲಾಗುವ ಸಂದರ್ಭ ಬಂದಿತ್ತು. ಆಗ. ಸಂಘವು ತನ್ನ ಆಸ್ತಿತ್ವವೇ ಮಾಯಾವಾಗುತ್ತೆಂದು ತಿಳಿದು ಹೋರಾಟಕ್ಕೆ ಮುಂದಾಯಿತು. ಸಂಘದ ಕಛೇರಿ ಮತ್ತು ವೀರಶೈವ ಕಾಲೇಜುಗಳು ಹೋರಾಟದ ಕಣಗಳಾದವು. ಹಾಗೇನಾದರೂ ಒಂದು ವೇಳೆ ಬಳ್ಳಾರಿಯು ತೆಲುಗರ ಕೈವಶವಾದುದಾದರೆ ಇಡೀ ಸಂಘಕ್ಕೆ ಮತ್ತು ಅದರ ಕೇಂದ್ರವಾದ ವೀರಶೈವ ಕಾಲೇಜಿಗೆ ಬೆಂಕಿಯಿಟ್ಟು ಬೂದಿ ಮಾಡಿ ಆಂಧ್ರಕ್ಕೆ ಕೊಡುತ್ತೇವೆ ಎಂಬಷ್ಟು ಆಕ್ರೋಶ ಸಂಘದ್ದಾಗಿತ್ತು, ಆದರೆ ಅಂತಿಮವಾಗಿ ಕನ್ನಡಕ್ಕೆ, ಕನ್ನಡಿಗರಿಗೆ ಜಯವಾಗಿ ಬಳ್ಳಾರಿಯು ಕರ್ನಾಟಕಕ್ಕೆ ಸೇರಿತು. ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘದ ಅವಿರತ ಹೋರಾಟವು ಏಕೀಕರಣ ಇತಿಹಾಸದಲ್ಲಿ ಸ್ಮರಣಾರ್ಹವಾಗಿದೆ. ಬಳ್ಳಾರಿ ಉಳಿದರೆ ಕನ್ನಡ ಉಳಿಯುತ್ತದೆ ಎಂದು ನಂಬಿ ಟೊಂಕ ಕಟ್ಟಿ ಬಳ್ಳಾರಿಯ ಜನರು ನಡೆಸಿದ ಹೋರಾಟದಲ್ಲಿ ಈ ಸಂಘದವರ ಸಹಭಾಗಿತ್ವವು ಗಮನಾರ್ಹ ಎನಿಸಿದೆ.

೬.೮. ಬಳ್ಳಾರಿಯ ಕರ್ನಾಟಕ ಸಂಘ (ಈಗಿನ ಕನ್ನಡ ಸಾಹಿತ್ಯ ಪರಿಷತ್ತು)

ಬಳ್ಳಾರಿಯಲ್ಲಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಬೆಳೆಸುವ ಮತ್ತು ಏಕೀಕರಣಕ್ಕೆ ಸಾಂಘಿಕ ಬಲವನ್ನು ಹೆಚ್ಚಿಸುವುದಕ್ಕಾಗಿ, ೧೯೩೫ ರಲ್ಲಿ ಬಳ್ಳಾರಿಯ ಕರ್ನಾಟಕ ಸಂಘವನ್ನು ಸ್ಥಾಪಿಸಲಾಯಿತು. ಸಂಘದ ಕಾರ್ಯಕಲಾಪಗಳು ವೈ. ನಾಗೇಶ ಶಾಸ್ತ್ರಿರವರ ಅಧ್ಯಕ್ಷತೆಯಲ್ಲಿ ನಡೆದವು. ಈ ಸಂದರ್ಭದಲ್ಲಿ ವೈ. ಮಹಾಬಲೇಶ್ವರಪ್ಪನವಗನ್ನು ಸಂಘದ ಅಧ್ಯಕ್ಷರಾಗಿ ಆಯ್ಕೆ ಮಾಡಿದರು. ಎಸ್.ಆರ್. ವಟ್ಟಂ ಹಾಗೂ ಕೆ. ಗುರುರಾಜರಾವ್ ಅವರನ್ನು ಉಪಾಧ್ಯಕ್ಷರನ್ನಾಗಿ ಆರಿಸಿದರು. ಟಿ.ಹೆಚ್.ಎಂ. ಶಿವಯ್ಯನವರು ಕಾರ್ಯದರ್ಶಿಯಾದರು.

ಬಳ್ಳಾರಿಯ ಕರ್ನಾಟಕ ಸಂಘವು ಸ್ಥಾಪನೆಯಾದ ನಂತರ ಜಿಲ್ಲೆಯಲ್ಲಿ ಅನೇಕ ಸಾಹಿತ್ಯ ಸಮ್ಮೇಳನಗಳು ನಡೆದವು. ಸಮ್ಮೇಳನದಲ್ಲಿ ವಿದ್ವಾಂಸರು ಹೋರಾಟಗಾರರು ಭಾಗವಹಿಸಿ, "ಬಳ್ಳಾರಿಯು ಕರ್ನಾಟಕದ ಗಡಿ ನಾಡು, ಅಚ್ಚ ಕನ್ನಡ ನಾಡು; ಬಳ್ಳಾರಿ ಜಿಲ್ಲೆಯ ತರುಣರೇ ಕನ್ನಡ ಸಂಸ್ಕೃತಿಯನ್ನು ಕಾಪಾಡಲು ನಡುಗಟ್ಟಿ ನಿಲ್ಲಿರಿ", ಎಂದು ಉದ್ಘಾರ ತೆಗೆದರು[೧೦]. ೧೯೪೯ರಲ್ಲಿ ನಡೆದ ಅದವಾನಿ ಸಮ್ಮೇಳನದಲ್ಲಿ ಟಿ.ಹೆಚ್.ಎಂ. ಸದಾಶಿವಯ್ಯನವರು ತಮ್ಮ "ಕರ್ನಾಟಕದ ಗಡಿ ಗೆರೆಗಳು" ಎಂಬ ಕೃತಿಯ ಮೂಲಕ ಕರ್ನಾಟಕದ ಗಡಿಗಳನ್ನು ನಿರ್ಣಯಿಸುವ ಪ್ರಯತ್ನ ಮಾಡಿದ್ದರು, ಕರ್ನಾಟಕ ಪ್ರದೇಶಗಳು ವಿವಿಧ ಆಡಳಿತದಲ್ಲಿ ಹಂಚಿಹೋಗಿರುವುದರಿಂದ ಬೇರೆ ಭಾಷಿಕರು ಗಡಿ ಭಾಗಗಳನ್ನು ಆಕ್ರಮಿಸಲು ಪ್ರಯತ್ನಗಳನ್ನು ನಡೆಸುತಿದ್ದರು. ಇದರಿಂದ ಕರ್ನಾಟಕದ ಅಳಿವೋ, ಉಳಿವೋ? ಎಂಬ ಕೊನೆಯ ಪ್ರಶ್ನೆ ಎದ್ದಿರುವ ಸಮಯದಲ್ಲಿ, ಅಖಿಲ ಕರ್ನಾಟಕ ನಿರ್ಮಾಣದ ಅವಶ್ಯಕವನ್ನು ಮನಗೊಂಡ ಕನ್ನಡಿಗರು ಅದನ್ನು ಸಾಧಿಸಿದೆ ಕೈ ಕಟ್ಟಿಕೊಂಡು ಕುಳಿತರೆ, ಕನ್ನಡ ಇತಿಹಾಸದಲ್ಲಿ ಇದೇ ಕೊನೆಯ ಪ್ರಕರಣವಾಗುವುದು ಎಂದು 'ಶಿವಸುತ' ಎಂಬ ಕಾವ್ಯದಲ್ಲಿ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ[೧೧].

ಬಳ್ಳಾರಿಯ ಏಕೀಕರಣದ ಉದ್ದೇಶಕ್ಕಾಗಿ ಸಂಘದ ಬಲವನ್ನು ಹೆಚ್ಚಿಸುವ ಉದ್ದೇಶದಿಂದ ಬಳ್ಳಾರಿಯ ಅನೇಕ ನಾಯಕರು ಸೇರಿ ಕರ್ನಾಟಕ ಸಂಘವನ್ನು ಕಟ್ಟಿದರು. ಕನ್ನಡ ಸಾಹಿತ್ಯ ಸಮ್ಮೇಳನಗಳ ಮೂಲಕ ಈ ಸಂಘ ಜನರಲ್ಲಿ ಕನ್ನಡದ ಅಭಿಮಾನ, ಏಕೀಕರಣದ ಧ್ಯೇಯೋದ್ದೇಶಗಳನ್ನು ಬಿತ್ತಿತು. ಬಳ್ಳಾರಿಯು ಕರ್ನಾಟಕದಲ್ಲಿ ಉಳಿಯುವಂತೆ ಮಾಡಿತು.

ಅಡಿ ಟಿಪ್ಪಣಿಗಳು

೧. ಗೋವಿಂದರಾಜು ಸಿ.ಆರ್. **ಕರ್ನಾಟಕದ ಏಕೀಕರಣ ಮತ್ತು ಕನ್ನಡ ಸಾಹಿತ್ಯ ಪರಿಷತ್ತು,** ಪುಟ - ೧.

೨. ಪ್ರಧಾನ ಸಂ. ಅನಂತರಾಮ್ ರಾವ್ ಕೆ.: **ಸುವರ್ಣ ಕರ್ನಾಟಕ ದರ್ಶನ** (೫೦ ಸಂವತ್ಸರಗಳು) ಪುಟ - ೧೧೦

೩. ಡಾ॥ ಗೋಪಾಲ್ ರಾವ್ ಎಚ್.ಎನ್.: **ಕರ್ನಾಟಕ ಏಕೀಕರಣ ಇತಿಹಾಸ,** ಪುಟ –೬೭.

೪. ಪ್ರಧಾನ ಸಂ. ಅನಂತರಾಮ್ ರಾವ್ ಕೆ.: **ಸುವರ್ಣ ಕರ್ನಾಟಕ ದರ್ಶನ** (೫೦ ಸಂವತ್ಸರಗಳು) ಪುಟ - ೧೧೧

೫. ಡಾ॥ ಗೋಪಾಲ್ ರಾವ್ ಎಚ್.ಎಸ್.: **ಕರ್ನಾಟಕ ಏಕೀಕರಣ ಇತಿಹಾಸ,** ಪುಟ –೬೮.

೬. **ಅದೇ,** ಪುಟ –೭೬.

೭. ಪ್ರಧಾನ ಸಂ. ಅನಂತರಾಮ್ ರಾವ್ ಕೆ.: **ಸುವರ್ಣ ಕರ್ನಾಟಕ ದರ್ಶನ** (೫೦ ಸಂವತ್ಸರಗಳು), ಪುಟ - ೧೧೫

೮. ಡಾ॥ ಗೋಪಾಲ್ ರಾವ್ ಎಚ್.ಎಸ್.: **ಕರ್ನಾಟಕ ಏಕೀಕರಣ ಇತಿಹಾಸ,** ಪುಟ –೨೩೧.

೯. **ಅಮೃತ ಮಹೋತ್ಸವ ಸ್ಮಾರಣ ಸಂಚಿಕೆ** ಪುಟ ೬೯

೧೦. **ಬಳ್ಳಾರಿ ಏಕೀಕರಣದಲ್ಲಿ ವೀರಶೈವರ ಪಾತ್ರ,** (ಲೇ. ಬಸವರಾಜ), ಟಿ.ಎಚ್.ಎಂ. ಪುಟ ೩

೧೧. **ಅದೇ,** ಪುಟ ೬

೭

ಪ್ರಸ್ತುತ ಏಕೀಕೃತ ಕರ್ನಾಟಕದಲ್ಲಿ ಬಳ್ಳಾರಿ ಜಿಲ್ಲೆ

೧೯೫೩ರಲ್ಲಿ ಬಳ್ಳಾರಿ ಜಿಲ್ಲೆಯು ಹಳೇ ಮೈಸೂರಿಗೆ ಸೇರಿತು. ನಂತರದಲ್ಲಿ ವಿಶಾಲ ಮೈಸೂರಿನ ಒಂದು ಜಿಲ್ಲೆಯಾಗಿ ಹೊರಹೊಮಿತ್ತು. ಬಳ್ಳಾರಿಯ ಜನತೆ ಇಂದು ಕರ್ನಾಟಕದ ಪ್ರಗತಿಪರ ಹೋರಾಟಗಳ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ. ಏಕೀಕರಣ ನಂತರದ ನಡೆದ, ನಡೆಯುತ್ತಿರುವ ಎಲ್ಲಾ ಚಳವಳಿಯಲ್ಲಿ ಬಳ್ಳಾರಿಯು ಪ್ರಮುಖಪಾತ್ರವಹಿಸಿದೆ. ಕರ್ನಾಟಕದಲ್ಲಿ ಸುಮಾರು ಅರವತ್ತರ ದಶಕದಲ್ಲಿ ಕನ್ನಡ ಚಳವಳಿ ಪ್ರಾರಂಭವಾಯಿತು. ಚಳವಳಿ ರಾಜ್ಯ ಎಲ್ಲಾ ಭಾಗಗಳಲ್ಲಿ ಹರಡಿತ್ತು. ಇದರ ಪ್ರಮುಖ ಉದ್ದೇಶ ಕನ್ನಡ ಭಾಷೆಯನ್ನು ರಾಜ್ಯ ಭಾಷೆಯಾಗಿ ಮಾಡುವುದು, ಕನ್ನಡಿಗರಿಗೆ ಉದ್ಯೋಗಾವಕಾಶಗಳನ್ನು ಕಾಯ್ದಿರಿಸಬೇಕೆಂಬ ಅಪೇಕ್ಷೆಯೊಂದಿಗೆ ಕನ್ನಡ ಪ್ರಜ್ಞೆಯನ್ನು ಜಾಗೃತಗೊಳಿಸುವ ಉದ್ದೇಶವನ್ನು ಹೊಂದಿತ್ತು. ಕನ್ನಡ ಪ್ರಜ್ಞೆಯ ಬಗ್ಗೆ ಜಾಗೃತಿ ಮೂಡಿಸಲು ಏಕೀಕರಣದ ಸಂದರ್ಭದಲ್ಲಿ ಅನುಸರಿಸಿದ ಮರುಗಳಿಕೆಯ ವಿಧಾನವನ್ನೇ ಮುಂದುವರೆಸಲಾಯಿತು. ಆಂದರೆ ಕರ್ನಾಟಕ ಸಾಂಸ್ಕೃತಿಕ ಪರಂಪರೆಯ ಸಾಧನೆಗಳನ್ನು ಗುರುತಿಸಿ, ಆ ಬಗ್ಗೆ ಅಭಿಮಾನವನ್ನು ಮೂಡಿಸುವ ಮೂಲಕ ಕನ್ನಡ ಪ್ರಜ್ಞೆಯನ್ನು ನೆಲೆಗೊಳಿಸುವುದಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಬಳ್ಳಾರಿಯ ಜನರಲ್ಲಿ ಮೂಡಿಸುವಂತೆ ನಾಯಕರು ಪ್ರಯತ್ನಿಸಿದರು.

೭.೧. ಗೋಕಾಕ್ ಚಳುವಳಿ

೧೯೮೨ರಲ್ಲಿ ರಾಜ್ಯಾದ್ಯಂತ ಸಣ್ಣ ಪ್ರಮಾಣದಲ್ಲಿ ಪ್ರಾರಂಭವಾದ ಚಳವಳಿ ನಂತರದಲ್ಲಿ 'ಕನ್ನಡ ಉಳಿಸಿ ಕನ್ನಡ ಬಳಸಿ ಕನ್ನಡ ಬೆಳೆಸಿ' ಎಂಬ ಘೋಷಣೆ ಕಾರ್ಯಕ್ರಮಗಳೊಡನೆ ತಲೆ ಎತ್ತಿತ್ತು. ಸಾರ್ವಜನಿಕ ವಲಯಗಳಲ್ಲಿ ಕನ್ನಡ ಬಳಕೆ ಕಡಿಮೆಯಾಗಿದ್ದು, ಮಾತ್ರವಲ್ಲದೆ ಕನ್ನಡ ಬಳಕೆ ಅವಮಾನಕರ ಎಂಬ ಪರಿಸ್ಥಿತಿ ಮೂಡಿದೆ ಎನ್ನುವುದು ಈ ಚಳವಳಿಯ ಹೇಳಿಕೆ[೧]. ಇದನ್ನು ರಾಜ್ಯ ಕಂಡ ಪ್ರಮುಖವಾದ 'ಗೋಕಾಕ್ ಚಳುವಳಿ' ಎಂದು ಹೆಸರಾಗಿದೆ.

ಈ ಚಳವಳಿಗಳಿಗೆ ಬಳ್ಳಾರಿಯಲ್ಲಿ ಭಾಷಿಕ ನೆಲೆಗಟ್ಟನ್ನು ಭದ್ರಗೊಳಿಸಲು ಕನ್ನಡಿಗರಲ್ಲಿ ಸ್ವಾಭಿಮಾನ ಮೂಡಿಸುವ ನಿಟ್ಟಿನಲ್ಲಿ ಕರ್ನಾಟಕದಲ್ಲೇ ಪ್ರಥಮವಾಗಿ ಬಳ್ಳಾರಿಯಿಂದ ೧೯೮೨ರ ಮೇ ೧೯ ರಂದು ಕೆ.ಎಂ. ಮಹೇಶ್ವರಸ್ವಾಮಿ, ಯಜಮಾನ್ ಶಾಂತರುದ್ರಪ್ಪ, ಸಿರಿಗೇರಿ ಬಸವರಾಜ್‌ರವರ ನೇತೃತ್ವದಲ್ಲಿ ಪ್ರಾರಂಭವಾಯಿತು. ಗೋಕಾಕ್ ಚಳುವಳಿಯಲ್ಲಿ ಕನ್ನಡಿಗರ ಕಣ್ಮಣಿ ಡಾ॥ ರಾಜಕುಮಾರ್‌ರವರ ಜೊತೆಗೆ ಪ್ರಸಿದ್ಧ ನಟರು, ಸಾಹಿತಿಗಳು ಕನ್ನಡಪರರು ತಂಡೋಪತಂಡವಾಗಿ ಬಳ್ಳಾರಿಗೆ ಆಗಮಿಸಿ ಚಳುವಳಿಯನ್ನು ರಾಜ್ಯಮಟ್ಟಕ್ಕೆ ವಿಸ್ತರಿಸಿದ್ದು ಗಮನಾರ್ಹವಾಗಿದೆ. ಚಳವಳಿಗಳಲ್ಲಿ ಬಳ್ಳಾರಿ ಜಿಲ್ಲೆಯು ಪ್ರಮುಖವಾದ ಪಾತ್ರವನ್ನು ನಿರ್ವಹಿಸಿಕೊಂಡು ಬಂದಿದೆ.

ಕರ್ನಾಟಕ ಮತ್ತು ಕನ್ನಡಿಗರಿಗೆ ನಿರಂತರವಾಗಿ ಪರಭಾಷಿಕರ ಮತ್ತು ಅನ್ಯ ಸಂಸ್ಕೃತಿಗಳ ದಾಳಿ ತಪ್ಪಿಲ್ಲ. ಇವುಗಳ ವಿರುದ್ಧ ಹೋರಾಡಲು ಇಂದು ಜಿಲ್ಲೆಯಲ್ಲಿ ಅನೇಕ ಕನ್ನಡಪರ ಸಂಘಟನೆಗಳು ಸ್ಥಾಪನೆಯಾಗಿವೆ. ಇತ್ತೀಚಿಗೆ ಪರಭಾಷಾ ಚಿತ್ರಗಳ ವಿರುದ್ಧ ನಾಡಿನಾದ್ಯಾಂತ ಹೋರಾಟ ನಡೆಯುತ್ತಿದ್ದರೆ ಬಳ್ಳಾರಿಯಲ್ಲಿಯೂ ಸಾಕಷ್ಟು ಪ್ರಮಾಣದಲ್ಲಿ ಇಂತಹ ಹೋರಾಟಗಳು ನಡೆದವು. ಬಳ್ಳಾರಿಯ ಕ್ರಿಯಾಶೀಲ ಕನ್ನಡಪರ ಹೋರಾಟಗಾರರಾದ ಶ್ರೀ ವಿ.ಎನ್. ಪರದೇವಯ್ಯನವರು ಬಳ್ಳಾರಿಯ ಎಲ್ಲಾ ಕನ್ನಡಪರ ಸಂಘಟನೆಗಳ ಒಕ್ಕೂಟವಾಗಿರುವ 'ಕನ್ನಡ ಕ್ರಿಯಾ ಸಮಿತಿಯನ್ನು' ರಚಿಸಿ ನಿರಂತರ ಹೋರಾಟ ನಡೆಸುತ್ತಿದ್ದಾರೆ. ನಾಗರಿಕ ಸಮಾಜದ ಮೂಲಭೂತ ಸಮಸ್ಯೆಗಳ ವಿರುದ್ಧ ಅರಿವು ಮೂಡಿಸುವ ಹಾಗೂ ಸರ್ಕಾರಕ್ಕೆ ಎಚ್ಚರಿಸುವ ಚಳುವಳಿಗಳು ನಡೆಯುತ್ತಿವೆ. ಈ ಕಾರ್ಯಗಳನ್ನು ಪ್ರಜ್ಞಾವಂತರು ಚಾಚುತಪ್ಪದೆ ಮುನ್ನಡೆಸಿಕೊಂಡು ಬರುತ್ತಿದ್ದಾರೆ.

೭.೨. ರೈಲ್ವೆ ಚಳುವಳಿ

ಲಿಂಗಣ್ಣನವರ ಗ್ರಂಥಾಲಯ

ಬಳ್ಳಾರಿಯಲ್ಲಿ ರೈಲ್ವೆ ಚಳುವಳಿ ಒಂದು ಮಹತ್ವದ ಹೋರಾಟವಾಗಿದೆ. ಬಳ್ಳಾರಿಯ ರೈಲ್ವೆ ಭಾಗಗಳಾದ ರಣಜಿತ್‌ಪುರ, ಬಂಟನಾಳ, ರಾಮದುರ್ಗ ವಾರ್ಷಿಕ ರೂ. ೨೫೦ ಕೋಟಿಗೂ ಅಧಿಕ ಆದಾಯ ತರುವುದರಿಂದ ಅವುಗಳನ್ನು ದಕ್ಷಿಣ ಮಧ್ಯೆ ರೈಲ್ವೆ ಅಧಿಕಾರಿಗಳು ಹುಬ್ಬಳ್ಳಿಯ ನೈರುತ್ಯ ರೈಲ್ವೆ ವಲಯಕ್ಕೆ ಬಿಟ್ಟುಕೊಡದೆ, ಅಧಿಕೃತ ವಲಯವೆಂದು ಘೋಷಣೆ ಮಾಡಿದರು. ಈ ಅನ್ಯಾಯದ ವಿರುದ್ಧ ಶ್ರೀ ಕೆ.ಎಂ.ಮಹೇಶರ್ವಸ್ವಾಮಿ ನೇತೃತ್ವದಲ್ಲಿ ಸುಮಾರು ೧೮೮ ದಿನಗಳ ಕಾಲ ವಿವಿಧ ಹಂತದ ಹೋರಾಟ ನಡೆಯಿತು. ಅನೇಕರು ಇದರಲ್ಲಿ ಭಾಗವಹಿಸಿ ಬಳ್ಳಾರಿಯ ರೈಲ್ವೆ ಭಾಗಗಳನ್ನು ನೈರುತ್ಯ ರೈಲ್ವೆ ವಲಯದಲ್ಲಿ ಸೇರುವಂತೆ ಮಾಡುವಲ್ಲಿ ಯಶಸ್ವಿಯಾದರು. ಈ ಸಂದರ್ಭದಲ್ಲಿ ಜೈಲ್ ಭರೋ ಚಳುವಳಿಯಲ್ಲಿ ಅನೇಕ ಜನ ಬಂದಿತರಾದರೂ ಧೃತಿಗೆಡದೆ ತಮ್ಮ ಬೇಡಿಕೆಯನ್ನು ಈಡೇರಿಸಿಕೊಂಡು ಬಳ್ಳಾರಿಯ ಇತಿಹಾಸದಲ್ಲಿ ದಾಖಲೆ ನಿರ್ಮಿಸಿದರು.

ಕೊಟ್ಟೂರು–ಹರಿಹರ ರೈಲು ಮಾರ್ಗದ ನಿರ್ಮಾಣಕ್ಕಾಗಿ ಬಹುದಿನಗಳಿಂದ ಜಿಲ್ಲೆಯ ಜನರು ನಿರಂತರ ಹೋರಾಟವನ್ನು ಮಾಡಿಕೊಂಡು ಬರುತ್ತಿದ್ದಾರೆ. ಈ ಚಳುವಳಿಗೆ ೨೫ ವರ್ಷಗಳು ತುಂಬಿವೆ. ಆದರೂ ಇದು ಇಂದಿಗೂ ಜೀವಂತ ಹೋರಾಟವಾಗಿ ನಡೆಯುತ್ತಿದೆ. ಪರಿಣಾಮವಾಗಿ ಈ ಯೋಜನೆಗೆ ಕೇಂದ್ರ ಸರಕಾರದ ಚಾಲನೆ ದೊರತಿದೆ. ಈ ಯೋಜನೆಯು ಜಾರಿಗೆ ಬಂದರೆ ಈ ಭಾಗದ ಅರ್ಥಿಕ ಚಟುವಟಿಕೆ ಅಧಿಕಗೊಳ್ಳುವುದು. ಆನರಿಗೆ ಉದ್ಯೋಗ, ಕೃಷಿಉತ್ಪನ್ನಗಳ ಅಭಿವೃದ್ಧಿ, ರಾಷ್ಟ್ರದ ಬೆಳವಣಿಗೆ, ವಿದೇಶಿವಿನಿಮಯದಲ್ಲಿ ಹೆಚ್ಚಿನ ಕಾಣಬಹುದಾಗಿದೆ. ಬರಪೀಡಿತ ಪ್ರದೇಶವಾಗಿರುವ ಈ ಭಾಗಕ್ಕೆ ಇದರ ಅವಶ್ಯಕತೆ ಹೆಚ್ಚಾಗಿದೆ.

೭.೩. ಸಾಹಿತ್ಯ ಸಂವರ್ಧನೆ

130106

ಕನ್ನಡ ಸಾಹಿತ್ಯ ಚರಿತ್ರೆಗೆ ಬಳ್ಳಾರಿ ಜಿಲ್ಲೆಯಲ್ಲಿನ ಸಾಹಿತ್ಯಗಳ ಕೊಡುಗೆ ಅಪಾರವಾಗಿದೆ. ಶ್ರೀಯುತರಾದ ವೆ. ನಾಗೇಶಶಾಸ್ತ್ರಿಗಳು, ವ್ಯಾಕರಣತೀರ್ಥ ಚಂದ್ರಶೇಖರಸ್ವಾಮಿಗಳು, ಗಮಕಿಗಳಾದ ಡಾ. ಜೋಳದರಾಶಿ ದೊಡ್ಡನಗೌಡ, ಹಾಸ್ಯ ಚಕ್ರವರ್ತಿಯಾದ ಬೀಚಿ, ಸುಭದ್ರಮ್ಮ ಮನ್ಸೂರು, ಬಳ್ಳಾರಿ ರಾಘವ, ಇತ್ತೀಚಿನ ಕುಂ. ವೀರಭದ್ರಪ್ಪ, ಜನಪದ ಕಣಜವಾಗಿರುವ ದರೋಜಿ ಈರಮ್ಮ, ಯಡ್ರಾಮಳ್ಳಿಯ ಬರಮಪ್ಪ, ಮುದೇನೂರು ಸಂಗಣ್ಣ ಮುಂತಾದವರ ಕೊಡುಗೆ ಅಪಾರವಾಗಿದೆ. ನಮ್ಮ ಜಿಲ್ಲೆಯಲ್ಲಿ ಅರಳಿದ ಸಾಹಿತ್ಯ ಕೃತಿಗಳು ವಿವಿಧ ದೃಶ್ಯ ಮಾಧ್ಯಮಗಳಿಗೆ ನೆರವಾಗಿ ನಾಡಿನಾದ್ಯಂತ ಪಸರಿಸಿವೆ. ಇದರ ನಡುವೆ ಸಾವಿರಾರು ಯುವ ಲೇಖಕರು ಈ ಜಿಲ್ಲೆಯ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ಸಾಹಿತ್ಯ ಬೆಳವಣಿಗೆಯ ಜೊತೆಗೆ ಕನ್ನಡ ಭಾಷೆ ಸಂಸ್ಕೃತಿಯ ಶೋಧನೆಯ ಕಾರ್ಯ ವ್ಯಾಪಕವಾಗತೊಡಗಿದೆ. ಹಂಪಿಯಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕನ್ನಡ ವಿಶ್ವವಿದ್ಯಾಲಯವು ನಾಡಿನ ಬಹುಮುಖಿ ಶೋಧನೆಗಳಿಗೆ ಕೇಂದ್ರಬಿಂದುವಾಗಿ ಕಾರ್ಯನಿರ್ವಹಿಸುತ್ತಿದೆ. ಕನ್ನಡ ನಾಡು-ನುಡಿ-ಸಂಸ್ಕೃತಿಯನ್ನು ಸಮಗ್ರವಾಗಿ ಅಧ್ಯಯನ ಮಾಡುವ ದೃಷ್ಟಿಯಿಂದ ಸ್ಥಾಪಿತವಾದ ಈ ವಿಶ್ವವಿದ್ಯಾಲಯವು ಹೊಸ ಪೀಳಿಗೆಯ ಸಂಶೋಧಕರ ತಯಾರಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ.

ಜಿಲ್ಲೆಯ ಪತ್ರಿಕೋದ್ಯಮದ ಇತಿಹಾಸವನ್ನು ನಾವು ಕಡೆಗಣಿಸುವಂತಿಲ್ಲ. ಪತ್ರಿಕೋದ್ಯಮದ ಹುಟ್ಟು ಈ ಜಿಲ್ಲೆಯಿಂದಲೇ ಆದದ್ದು ಗಮನಾರ್ಹ. ಕನ್ನಡ ಸಮಾಚಾರವೆಂಬ ಹೆಸರಿನಲ್ಲಿ ಕನ್ನಡದ ಪ್ರಪ್ರಥಮ ವಾರ್ತಾಪತ್ರಿಕೆ ಪ್ರಕಟಗೊಂಡಿದ್ದು ಬಳ್ಳಾರಿಯಿಂದಲೇ ಆಗಿದೆ. ನಂತರ ಇದು ಮಂಗಳೂರಿಗೆ ವರ್ಗಾವಣೆಗೊಂಡು ಮಂಗಳೂರು ಸಮಾಚಾರವೆಂದಾಯಿತು. ಏಕೀಕರಣದ ಸಂದರ್ಭದಲ್ಲಿ ಮತ್ತು ನಂತರದಲ್ಲಿ ಹೊಸ ಚಿಂತಕರ, ಬರಹಗಾರರ ಪಡೆಯು ನಿರ್ಮಾಣವಾಗುವುದಕ್ಕೆ ಪತ್ರಿಕಾ ಮಾಧ್ಯಮ ನೆರವಾಗುತ್ತದೆ.

೭.೪. ರಾಜಕೀಯವಲ್ಲಿ

ಕರ್ನಾಟಕ ರಾಜಕಾರಣದ ಪರಂಪರೆಯಲ್ಲಿ ಬಳ್ಳಾರಿ ಜಿಲ್ಲೆಗೆ ಒಂದು ಪ್ರಮುಖ ಅಧ್ಯಾಯ ಇದೆ. ಏಕೀಕರಣದ ನಂತರ ಮತ್ತು ಅದಕ್ಕೂ ಮುಂಚೆ ಬಳ್ಳಾರಿಯು ರಾಜಕೀಯವಾಗಿ ಗುರುತಿಸಿಕೊಂಡು ಬಂದಿದೆ. ಬಳ್ಳಾರಿಯ ರಾಜಕೀಯದ ವಿಶೇಷವೆಂದರೆ, ಇದು ಆರಂಭದಿಂದಲೂ ಕಾಂಗ್ರೆಸಿಗೆ ಭದ್ರಕೋಟೆಯಾಗಿ ನಿಂತಿತು. ಪ್ರತಿಯೊಂದು ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವನ್ನು ಪಡೆಯುತ್ತಿತ್ತು. ಇದಕ್ಕೆ ಕಾರಣ ಏಕೀಕರಣ ಸಮಯದಲ್ಲಿ ಕಾಂಗ್ರೆಸ್ಸಿನವರು ಬಳ್ಳಾರಿಗೆ ಬೆಂಬಲವಾಗಿ ನಿಂತು ಅದರ ವಿಲೀನಕ್ಕೆ ಸಹಕರಿಸಿದಕ್ಕೆ ಇಲ್ಲಿಯ ಜನರು ಅದಕ್ಕೆ

ಕೃತಜ್ಞತೆಯನ್ನು ಈ ಮೂಲಕ ಸಲ್ಲಿಸಿದರು. ರಾಷ್ಟ್ರದ ಕಾಂಗ್ರೆಸ್‌ನ ರಾಷ್ಟ್ರೀಯ ನಾಯಕರಿಗೆ ಜಿಲ್ಲೆಯ ಅನೇಕ ವ್ಯಕ್ತಿಗಳು ಹತ್ತಿರದವರಾಗಿ ಗಮನ ಸೆಳೆದಿದ್ದಾರೆ. ಅವರಲ್ಲಿ, ಜವಾಹರಲಾಲ್ ನೇಹರೂ ಅವರಿಗೆ ಸಂಸದ ಟೇಕೂರು ಸುಬ್ರಹ್ಮಣ್ಯಂ ಆಪ್ತರಾಗಿದ್ದರು. ಚಿಕ್ಕಜೋಗಿಹಳ್ಳಿಯ ಈಡಿಗರ ವೆಂಕಟಸ್ವಾಮಿರವರು ಶ್ರೀಮತಿ ಇಂದಿರಾಗಾಂಧಿಯ ಪ್ರೀತಿ–ವಿಶ್ವಾಸವನ್ನು ಗಳಿಸಿದರು. ರಾಜೀವ್ ಗಾಂಧಿ ಮತ್ತು ಪಿ.ವಿ. ನರಸಿಂಹರಾವ್‌ಗೆ ಭವಿಷ್ಯ ಹೇಳುತಿದ್ದ ಜೋತಿಷಿಗಳು ಇಲ್ಲಿಯವರಾಗಿದ್ದರು. ಕೆ.ಸಿ. ಕೊಂಡಯ್ಯನವರು ಬಳ್ಳಾರಿ ಲೋಕಸಭಾ ಕ್ಷೇತ್ರ ಚುನಾವಣೆಯಲ್ಲಿ ಶ್ರೀಮತಿ ಸೋನಿಯಗಾಂಧಿಯವರನ್ನು ಸ್ಪರ್ಧಿಸಲು ಆಹ್ವಾನಿಸಿ, ರಾಷ್ಟ್ರ ರಾಜಕಾರಣಕ್ಕೆ ಹೊಸ ಭಾಷ್ಯೆ ಬರೆದರು. ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ನಾಯಕರೂ, ಬುದ್ಧಿಜೀವಿ ರಾಜಕಾರಣಿ ಎಂಬ ಕೀರ್ತಿ ಪಡೆದ ಎಂ.ಪಿ.ಪ್ರಕಾಶ್ ಮತ್ತು ದಕ್ಷ ಅರ್ಥಿಕ ತಜ್ಞ ಎನ್ನಿಸಿಕೊಂಡ ಎಂ.ವೈ. ಘೋರ್ಪಡೆಯವರು ಬಳ್ಳಾರಿ ಜಿಲ್ಲೆಯವರಾಗಿದ್ದಾರೆ. ಗ್ರಾಮೀಣ ಅಭಿವದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆಗೆ ಹೊಸ ರೂಪ ನೀಡಿದ ಎಂ. ನಜೀರ್‌ಸಾಬ್ ರವರ ನಂತರದ ಕೀರ್ತಿ ಎಂ.ವೈ. ಘೋರ್ಪಡೆ ಮತ್ತು ಎಂ.ಪಿ. ಪ್ರಕಾಶರವರೆಗೆ ಸಲ್ಲುತ್ತದೆ. ಇವರು ಬಳ್ಳಾರಿ ಜಿಲ್ಲೆಯ ಹೆಮ್ಮೆಯ ರಾಜಕಾರಣಿಗಳಾಗಿ ರಾಜ್ಯದ ರಾಜಕೀಯದಲ್ಲಿ ಹೊರಹೊಮ್ಮಿದ್ದಾರೆ.

೧೯೯೯ರ ಚುನಾವಣೆಯು ಭಾರತ ರಾಜಕೀಯ ದೃಷ್ಟಿಯಿಂದ ಮಹತ್ವ ಪಡೆದಿತ್ತು. ಏಕೆಂದರೆ, ರಾಷ್ಟ್ರದ ಎರಡು ಪ್ರಮುಖ ಪಕ್ಷಗಳ ನಾಯಕರು, ಬಳ್ಳಾರಿ ಜಿಲ್ಲೆಯಲ್ಲಿ ಸ್ಪರ್ಧಿಸಿದರು. ಇದರಿಂದ ಬಳ್ಳಾರಿಯ ರಾಜಕೀಯದಲ್ಲಿ ಬದಲಾವಣೆಯ ಗಾಳಿ ಬೀಸಲು, ಕಾಂಗ್ರೆಸ್ಸ್ ಪಕ್ಷದ ಭದ್ರಕೋಟೆಯು ಅಲುಗಾಡಿತು. ೨೦೦೦ ರಲ್ಲಿ ಬಳ್ಳಾರಿ ನಗರಸಭೆಯಲ್ಲಿ ಬಿ.ಜೆ.ಪಿ. ಪಕ್ಷ ಜಯಗಳಿಸುವುದರ ಮೂಲಕ ಜಿಲ್ಲೆಯ ರಾಜಕೀಯಕ್ಕೆ ಹೊಸ ತಿರುವು ಸಿಕ್ಕಿತು. ಬಿ.ಜೆ.ಪಿ.ಗೆ ಬೆಂಬಲ ದೊರೆತದರಿಂದ ಕಾಂಗ್ರೆಸ್ಸಿನ ಭದ್ರಕೋಟೆ ಒಡೆದುಹೋಯಿತು. ೨೦೦೪ರ ಲೋಕಸಭಾ ಚುನಾವಣೆಯಲ್ಲಿ ಬಿ.ಜೆ.ಪಿ. ಜಯಭೇರಿ ಮುಂದುವರಿಸಿ ರಾಷ್ಟ್ರದಲ್ಲಿ ಗ್ರಾಮೀಣ ಮಟ್ಟದಿಂದ ಸಂಸತ್‌ವರೆಗೆ ಅಧಿಕಾರ ಪಡೆದಿರುವ ಬಿ.ಜೆ.ಪಿಯ ಏಕೈಕ ಜಿಲ್ಲೆ ಎಂಬ ಕೀರ್ತಿ ಪಡೆದಿದೆ. ಅದರೆ ಈ ದೃಷ್ಟಿಯಿಂದ ಹಲವಾರು ಕೋಮುಗಲಭೆ, ಅಸ್ಪೃಶ್ಯ ಅಚರಣೆಗಳಂತಹ ಅನಿಷ್ಟ ಘಟನೆಗಳಿಗೆ ಜಿಲ್ಲೆ ಒಳಗಾಗುತ್ತಿರುವುದನ್ನು ಹೆಚ್ಚಾಗಿ ಗುರುತಿಸಬಹುದಾಗಿದೆ. ಇದು ಮೇಲ್ನೋಟಕ್ಕೆ ಅಜ್ಞಾನವೆಂದು ಕಂಡರು ಸಹ ಅಂತರಾಳದಲ್ಲಿ ಜಿಲ್ಲೆಯ ರಾಜಕೀಯವೇ ಮುಖ್ಯಕಾರಣವಾಗಿದೆ.

೭.೫. ಕೋಮುಸೌಹಾರ್ದತೆ

ಕನ್ನಡಿಗರ ಪರಂಪರೆಯ ಬಹುಮುಖ್ಯ ಗುಣವೆಂದರೆ ಸರ್ವ ಧರ್ಮ ಸಮನ್ವಯತೆಯಲ್ಲಿ ನಂಬಿಕೆಯನ್ನು ಇಟ್ಟು ಅದನ್ನು ಪೂರೈಸಿಕೊಂಡು ಬರುತ್ತಿರುವುದು. ರಾಜ್ಯದಲ್ಲಿ ವಿವಿಧ ಧರ್ಮ, ಮತ, ಆಚರಣೆಗಳಿಗೆ ಸೇರಿದ ಜನರು ಅನೇಕ ವರ್ಷಗಳಿಂದ ಇಲ್ಲಿ ಬಾಳಿ ಬದುಕುತ್ತಿದ್ದಾರೆ. ವಿವಿಧತೆಯಲ್ಲಿ ಏಕತೆಯನ್ನು ಕಾಪಾಡಿಕೊಂಡು ಬಂದಿರುವ ಹಿರಿಮೆಯನ್ನು ಬಳ್ಳಾರಿ ಜಿಲ್ಲೆಯಲ್ಲಿ ಕಾಣಬಹುದು. ರಾಜಕೀಯವಾಗಿ ಜಿಲ್ಲೆಯ ಬದಲಾವಣೆ ಕಂಡರು, ಸಮಾಜಿಕವಾಗಿ ಜಿಲ್ಲೆಯು ಶಾಂತಿಯುತವಾಗಿದೆ. ಹಿಂದು, ಮುಸ್ಲಿಂ, ಕ್ರೈಸ್ತ, ಸಿಕ್ಕರು ನೆಲೆಸಿದ್ದು, ಎಲ್ಲಾರು ಶಾಂತಿಯುತವಾದ ಹಾಗೂ ಸೌಹಾರ್ದಯುತ, ಜೀವನವನ್ನು ನಡೆಸಿಕೊಂಡು ಬರುತಿದ್ದಾರೆ. ಸಮಾನ್ಯವಾಗಿ ಮದ್ಯಮವರ್ಗದ ಜೀವನ ಶೈಲಿಯನ್ನು ಹೆಚ್ಚಿಗೆ ಬಯಸುವ ಜನರಿದ್ದಾರೆ. ಇವರಲ್ಲಿ ಕೋಮಿನ ವಿಚಾರವಾಗಿ ಎಂದಿಗೂ ಸಂಘರ್ಷಣೆಗಳು ನಡೆದಿಲ್ಲ. ರಾಷ್ಟ್ರದಲ್ಲಿ ನಡೆದ ಬಾಬ್ರಿ ಮಸೀದಿಯ ಘಟನೆಯು ಇಡೀ ರಾಷ್ಟ್ರದ ಶಾಂತಿಯನ್ನು ಕದಡಿತ್ತು. ಕರ್ನಾಟಕದಲ್ಲಿ ಕೂಡ ಈ ವಿಚಾರವಾಗಿ ಅನೇಕ ಕಡೆ ಹಿಂಸಾತ್ಮಕ ಘಟನೆಗಳು ನಡೆದವು. ಆದರೆ ಬಳ್ಳಾರಿ ಜಿಲ್ಲೆಯಲ್ಲಿ ಮಾತ್ರ ಈ ಸಂದರ್ಭದಲ್ಲಿ ಯಾವುದೇ ಗಲಭೆಗಳು ನಡೆಯಲಿಲ್ಲ. ಇಲ್ಲಿಯ ಜನರು ಅಂತಹ ಹಿಂಸಾತ್ಮಕ ಗಲಭೆಗೆ ಅವಕಾಶವನ್ನು ನೀಡದೆ ಹಿಂದೂ–ಮುಸ್ಲಿಮರು ಸಮರಸ್ಯದಿಂದ ನಡೆದುಕೊಂಡರು. ಜಿಲ್ಲೆಯಲ್ಲಿ ಶಾಂತಿಯನ್ನು ಕಾಯ್ದುಕೊಂಡಿದ್ದಕ್ಕೆ ರಾಜೀವ್‌ಗಾಂಧಿ ಶಾಂತಿ ಪ್ರಶಸ್ತಿಯನ್ನು ಬಳ್ಳಾರಿ ನಗರಸಭೆಗೆ ನೀಡಲಾಯಿತು. ಇಂದಿಗೂ ಎಲ್ಲಾ ಕೋಮಿನವರು ಸಹಬಾಳ್ವೆ ನಡೆಸಿಕೊಂಡು ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುತ್ತಾರೆ. ವಿಶೇಷವಾಗಿ ಮೊಹರಂ ಹಬ್ಬವನ್ನು, ವಿವಿಧ ಸಂತರ ಉರುಸ್‌ಗಳನ್ನು, ಅನೇಕ ಜಾತ್ರೆಗಳನ್ನು ಹಿಂದು-ಮುಸ್ಲಿಮರು ಸೇರಿಕೊಂಡು ಆಚರಿಸುವುದು ನಿಜಕ್ಕೂ ವೈಶಿಷ್ಟ್ಯ ಎನಿಸಿದೆ. ಇಂತಹ ಸಾಂಸ್ಕೃತಿಕ ಏಕತೆಯನ್ನು ಹಾಳುಗೆಡವಲು ಕೆಲವು ಕೋಮುಶಕ್ತಿಗಳು ಪ್ರಯತ್ನಿಸುತ್ತಿದ್ದರೂ, ಅವರ ಪ್ರಚೋದನೆಗಳಿಗೆ ಜಿಲ್ಲೆಯ ಜನರು ಯಾವ ಕಿಮ್ಮತ್ತೂ ನೀಡುತ್ತಿಲ್ಲ.

೭.೬. ವಿಜಯನಗರ ಉಕ್ಕಿನ ಕಾರ್ಖಾನೆ

ಕರ್ನಾಟಕದಲ್ಲಿ ಅತ್ಯಧಿಕವಾಗಿ ಕಬ್ಬಿಣದ ಅದಿರು ದೊರೆಯುವ ಪ್ರದೇಶ ಬಳ್ಳಾರಿಯಾಗಿದೆ. ಈ ಪರಿಸರದಲ್ಲಿ ಉತ್ತಮ ಗುಣಮಟ್ಟದ ಖನಿಜಗಳ ಅದಿರುಗಳು ದೊರೆಯುತ್ತವೆ. ಇದರಿಂದಾಗಿ ಜಿಲ್ಲೆಯಲ್ಲಿ ಗಣಿಗಾರಿಕೆಯು ಪ್ರಾರಂಭವಾಗಿ, ಬೃಹತ್ ಉದ್ಯಮವಾಗಿ ಬೆಳೆಯತೊಡಗಿದೆ. ಇದರಿಂದ ಜಿಲ್ಲೆಯ ಜನರು ಉಕ್ಕಿನ ಕಾರ್ಖಾನೆಯನ್ನು ಈ ಭಾಗದಲ್ಲಿ ಪ್ರಾರಂಭಿಸಬೇಕೆಂದು ಅನೇಕ ವರ್ಷಗಳಿಂದ ಕೇಳುತ್ತಾ ಬಂದಿದ್ದರು. ಅದಕ್ಕಾಗಿ ಗಮನಸೆಳೆಯುವ ಹೋರಾಟವನ್ನು ನಡೆಸುತ್ತಾ ಬಂದರು. ಇದರ ಪರಿಣಾಮವಾಗಿ ೧೯೭೪ ರಲ್ಲಿ ಅಂದಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ವಿಜಯನಗರ ಕಾರ್ಖಾನೆಗೆ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಆದರೆ ಅನೇಕ ವರ್ಷಗಳ ಕಾಲ ಕಾರ್ಖಾನೆಯು ಪ್ರಾರಂಭವಾಗಲಿಲ್ಲ. ಉದ್ಯಮದ ಸ್ಥಾಪನೆಯಿಂದ ನಮ್ಮ ಜೀವನ ಸುಧಾರಿಸಬಹುದು ಎಂಬ ಆಶೆಯನ್ನು ಹೊಂದಿದ್ದ ಜನರು ನಿರಾಶೆಗೊಂಡರು. ಅಂತಿಮವಾಗಿ ಹೋರಾಟವನ್ನು ಪ್ರಾರಂಭಿಸಿದರು. ಜನರು ನಿರಂತರವಾದ ಚಳವಳಿಯನ್ನು ಮಾಡುವ ಮೂಲಕ ಬೇಡಿಕೆಯನ್ನು ಈಡೇರಿಸಿಕೊಳ್ಳುವುದಕ್ಕೆ ಪ್ರಯತ್ನಿಸಿದರು. ಅಂತಿಮವಾಗಿ ಸರ್ಕಾರವು ಅವರ ಬೇಡಿಕೆಯನ್ನು ಒಪ್ಪಿಕೊಂಡು ಖಾಸಗಿ ಒಡೆತನದಲ್ಲಿ ಕಾರ್ಖಾನೆಯನ್ನು ಸ್ಥಾಪಿಸಲು ಅವಕಾಶ ನೀಡಿತು. ಇದರಿಂದಾಗಿ ಉತ್ತರ ಭಾರತದ ದೊಡ್ಡ ಉದ್ಯಮಪತಿಗಳಾದ ಜಿಂದಾಲ್ ಅವರು ಜಿಂದಾಲ್ ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಿದರು. ಈ ಕಾರ್ಖಾನೆಯ ಹೆಸರಿನ ವಿಚಾರವಾಗಿ ಗೊಂದಲ ಉಂಟಾಗಿದೆ. ಕಾರಣ ಪ್ರಾರಂಭದಲ್ಲಿ ಕಾರ್ಖಾನೆಗೆ ವಿಜಯನಗರ ಉಕ್ಕಿನ ಕಾರ್ಖಾನೆ ಎಂದು ಹೆಸರಿಸಿದ್ದರು. ಆದರೆ ಈಗ ಅದರ ಸ್ಥಾನದಲ್ಲಿ ಜೆ.ಎಸ್.ಡಬ್ಲ್ಯೂ. ಎಂಬ ಹೆಸರು ಕೂತಿದೆ. ಹೆಸರನ್ನು ಬದಲಿಸುವಂತೆ ಜಿಲ್ಲೆಯ ಕನ್ನಡ ಪರ ಸಂಘಟನೆಗಳು ಚಳವಳಿಗಳನ್ನು ನಡೆಸಿಕೊಂಡು ಬರುತ್ತಿವೆ. ಜಿಲ್ಲೆಯ ಜನರಿಗೆ ಹೆಚ್ಚಿನ ಉದ್ಯೋಗವಕಾಶಗಳು ದೊರೆಯಬೇಕೆಂಬುದು ಈ ಭಾಗದವರ ಬಹುಮುಖ್ಯ ಬೇಡಿಕೆಯಾಗಿದೆ. ಇಂತಹ ಬೇಡಿಕೆ, ಗೊಂದಲಗಳ ನಡುವೆಯೂ ಕಾರ್ಖಾನೆಯು ದೊಡ್ಡದಾಗಿ ಬೆಳೆಯುತ್ತಾ ಬಳ್ಳಾರಿಯನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯವಾಗಿ ಗುರುತಿಸುವಂತೆ ಮಾಡಿದೆ.

೭.೭. ಹಂಪಿ ಉತ್ಸವ

ಕರ್ನಾಟಕದ ರೋಮ್ ಎಂದೇ ಖ್ಯಾತಿಯಾದ ಹಂಪಿ ಬಳ್ಳಾರಿ ಜಿಲ್ಲೆಯಲ್ಲಿದೆ. ಪ್ರಾಚೀನ ರೋಂ ಸಾಮ್ರಾಜ್ಯದ ಹಾಗೆಯೇ ವಿಜಯನಗರ ಸಾಮ್ರಾಜ್ಯವು ಬಹುದೊಡ್ಡ ಹೆಸರು ಪಡೆದಿತ್ತು. ಆ ಸಾಮ್ರಾಜ್ಯದ ಹೆಮ್ಮೆ ಇನ್ನೂ ಕನ್ನಡಿಗರಲ್ಲಿದೆ. ಕರ್ನಾಟಕದ ಏಕೀಕರಣಕ್ಕೆ ಮೂಲ ಪ್ರೇರಣೆ ಹಂಪಿಯಾಗಿತ್ತು, ಕರ್ನಾಟಕಕ್ಕೆ ಗತವೈಭವವನ್ನು ಮರಳಿ ಪಡೆಯುವ ಹುಮ್ಮಸ್ಸನ್ನು ಸಾಹಿತಿಗಳು ಹಂಪಿಯ ಮೂಲಕ ಕನ್ನಡಿಗರಲ್ಲಿ ತುಂಬಿದರು. ಆದೇ ರೀತಿಯಾಗಿ ಇಂದು ಹಂಪಿಯು ಕರ್ನಾಟಕದ ಸಂಸ್ಕೃತಿಯನ್ನು ಬೆಳೆಸುವ ಕೇಂದ್ರವಾಗಿದೆ. ವಿಜನಗರ ಅರಸರು ನಡೆಸುತ್ತಿದ್ದ ದಸರ ಹಬ್ಬದ ರೀತಿಯಲ್ಲೆ ಹಂಪಿ ಉತ್ಸವನ್ನು ಪ್ರಾರಂಭಿಸಲು ಸರ್ಕಾರಕ್ಕೆ ಕೇಳಿಕೊಳ್ಳಲಾಗಿತ್ತು. ಅನೇಕ ಪ್ರಯತ್ನಗಳ ನಂತರ ಹಂಪಿ ಉತ್ಸವವನ್ನು ಪ್ರಾರಂಭಿಸಿದರು. ಈ ಆಚರಣೆಯಿಂದಾಗಿ ಸ್ಥಳಿಯ ಸಂಸ್ಕೃತಿ, ಜನಪದ, ಗ್ರಾಮೀಣ ಸಂಸ್ಕೃತಿಯು ಬೆಳೆಸುವುದಕ್ಕೆ ಅವಕಾಶ ದೊರೆಯಿತ್ತು. ಸಂಪ್ರದಾಯಿಕ ಪರಂಪರೆಗಳಿಗೆ ಮರುಜೀವಕೊಡುವ ಕಾರ್ಯವನ್ನು ಹಂಪಿ ಉತ್ಸವದ ಮೂಲಕ ಪ್ರಾರಂಭವಾಗಿದೆ. ಈ ಹಂಪಿ ಉತ್ಸವವು ಜನರ ಉತ್ಸವವಾಗಿ, ನಾಡಹಬ್ಬವಾಗಿ ಆಚರಣೆಯಾಗುತ್ತಿದೆ. ವಿಶ್ವಪರಂಪರೆಯ ಐತಿಹಾಸಿಕ ತಾಣಗಳಲ್ಲಿ ಒಂದಾಗಿರುವ ಹಂಪಿಯು ತನ್ನ ಸಾಂಸ್ಕೃತಿಕ ಹಿರಿಮೆಯನ್ನು ಕಾಪಾಡಿಕೊಳ್ಳುವುದಕ್ಕೆ ಹಂಪಿ ಉತ್ಸವ ಪ್ರೇರಣೆಯಾಗಿ ಮುಂದುವರಿಯುತ್ತಿದೆ.

ಒಟ್ಟಾರೆಯಾಗಿ ಬಳ್ಳಾರಿ ಜಿಲ್ಲೆಯು ಭೂತ ಮತ್ತು ವರ್ತಮಾನ ಕಾಲಘಟ್ಟಗಳಲ್ಲಿ ತನ್ನ ಪಾತ್ರವನ್ನು ಸಮರ್ಪಕವಾಗಿ ನಿರ್ವಹಿಸಿಕೊಂಡು ಬಂದಿದೆ. ಸಮಾಜದ ಏಳಿಗೆಯ ದೃಷ್ಟಿಯಿಂದ, ಜಿಲ್ಲೆಯ ಅಭಿವೃದ್ಧಿಗಾಗಿ ಸಂದರ್ಭಗಳು ಬಂದಾಗಲೆಲ್ಲಾ ಹೋರಾಟಗಳನ್ನು ಮಾಡಿ ಸಾರ್ಥಕತೆಯನ್ನು ಪಡೆದುಕೊಂಡಿದೆ. ಕೈಗಾರಿಕೋದ್ಯಮಗಳು ಬೆಳೆಯುತ್ತಿರುವುದರಿಂದ ಇಲ್ಲಿಯ ಜನರ ಆರ್ಥಿಕ ಜೀವನವು ಉತ್ತಮವಾಗತೊಡಗಿದೆ. ಜಿಲ್ಲೆಯ ಸಾಂಸ್ಕೃತಿಕ ಬೆಳವಣಿಗೆಯನ್ನು ನಿರಂತರವಾಗಿ ಕಾಪಾಡಿಕೊಂಡು ಬರುತ್ತಿದೆ. ರಾಜ್ಯದಲ್ಲಿ ಹಿಂದುಳಿದ ಪ್ರದೇಶವೆಂದು ಗುರುತಿಸಿಕೊಂಡರೂ, ಅಲ್ಪಮಟ್ಟಿಗಾದರೂ ತನ್ನ ಛಾಪನ್ನು ರಾಜ್ಯದಲ್ಲಿ ಮೂಡಿಸಿದೆ. ಇಂದಿನ ಜಾಗತೀಕರಣದ ಜಗತ್ತಿನಲ್ಲಿ ವೇಗವನ್ನು ಹೆಚ್ಚಿಸಿಕೊಂಡು ಜಿಲ್ಲೆಯು ಮುಂದುವರೆಯಬೇಕಾಗಿದೆ.

ಅಡಿ ಟಿಪ್ಪಣಿಗಳು

೧. ಡಾ॥ ರವೀಂದ್ರನಾಥ, **ಬಳ್ಳಾರಿ ಜಿಲ್ಲಾ ದರ್ಶನ**, ಗುಲ್ಬರ್ಗಾವಿಶ್ವವಿದ್ಯಾಲಯ, ಪ್ರಸಾರಂಗ, ಪುಟ ೬೫

೨. **ಅದೇ,** ಪುಟ. ೬೫

೩. **ಅದೇ,** ಪುಟ. ೬೭


೪. **ಅದೇ,** ಪುಟ. ೩

೫. **ಕನ್ನಡ ಪ್ರಭ,** ಅಕ್ಟೋಬರ್ ೨೦೦೬, ಪುಟ. ೩

೮

ಬಳ್ಳಾರಿ ಜಿಲ್ಲೆಯ ಏಕೀಕರಣದಲ್ಲಿ ದುಡಿದ ಮಹನೀಯರ ಸಂದರ್ಶನ

೮.೧ ಶ್ರೀ ಕೋ. ಚೆನ್ನಬಸಪ್ಪ



೧. ಬಳ್ಳಾರಿಯಲ್ಲಿ ಏಕೀಕರಣದ ವಿಷಯವಾಗಿ ಹೋರಾಟ ಆರಂಭವಾದದ್ದು ಯಾವಾಗ?

ಕೋ.ಚೆ.:- ೧೯೧೬ರಲ್ಲಿ ಆಂಧ್ರ ವಿಶ್ವವಿದ್ಯಾಲಯವಾದಾಗ ಬಳ್ಳಾರಿಯ ಕಾಲೇಜುಗಳನ್ನು ಅಲ್ಲಿಗೇ ಸೇರಿಸಲಾಯಿತು. ಅದನ್ನು ಪ್ರತಿಭಟಿಸಿ ಹೋರಾಟ ನಡೆಯಿತು. ಮದ್ರಾಸ್ ವಿಶ್ವವಿದ್ಯಾಲಯದಲ್ಲೇ ಇರಬೇಕೆಂಬ ಅಭಿಪ್ರಾಯವಿತ್ತು. ಅದೇ ಕನ್ನಡ-ಕರ್ನಾಟಕ ಪರ ಹೋರಾಟದ ಆರಂಭ. ೧೯೨೦ರ ವರೆಗೂ ಬಳ್ಳಾರಿಯಲ್ಲಿ ಕನ್ನಡ ಶಾಲೆಗಳೇ ಇರಲಿಲ್ಲ. ಬಳ್ಳಾರಿಯಲ್ಲಿ ಕನ್ನಡಿಗರು ತೆಲುಗು ನಾಟಕ ಆಡುತ್ತಿದ್ದರು. ಅನಂತಪುರದಲ್ಲಿ ತೆಲುಗರು ಕನ್ನಡ ಬಯಲಾಟ ಆಡ್ತಾರೆ, ಇದು ೧೯೪೬ರ ವರೆಗೂ ಪ್ರಚಲಿತವಿದ್ದ ನೆನಪು ನನಗೆ. ೧೯೨೨ ರಲ್ಲಿರಬೇಕು. ಕಾಂಗ್ರೆಸ್ ಸಂಸ್ಥೆಯನ್ನು ಭಾಷಾವಾರು ರಚಿಸಿದಾಗ ಬಳ್ಳಾರಿಯನ್ನು ಎಲ್ಲಿಗೆ ಸೇರಿಸಬೇಕೆಂಬ ಬಗ್ಗೆ ವಿವಾದವಿದ್ದು. ಅದನ್ನು ಬಗೆಹರಿಸಲು ಎಸ್.ಸಿ.ಕೇಳ್ಕರ್ ನೇಮಕಗೊಂಡರು ಅವರು ಬಳ್ಳಾರಿಯನ್ನು ಕರ್ನಾಟಕಕ್ಕೆ ಸೇರಿಸಿದರು. ಅದು ಹೋರಾಟದ ಎರಡನೇಯ ಘಟ್ಟ. ಆಂಧ್ರರಿಗೆ ಬಳ್ಳಾರಿ ಸಹಿತ ಹಂಪಿಯವರೆಗೂ ಕಣ್ಣಿತ್ತು. ಆಂಧ್ರರಿಗೆ ವಿಜಯನಗರ ಮತ್ತು ಆ ಮೂಲಕ ಹಂಪಿಯ ಬಗ್ಗೆ ಅತ್ಯಂತ ಭಾವನಾತ್ಮಕ ಸಂಬಂಧವಿದೆ. ೧೯೩೬ರಲ್ಲಿ ಹಂಪಿಯಲ್ಲಿ ವಿಜಯನಗರದ ೬೦೦ನೇ ಶತಮಾನೋತ್ಸವವನ್ನು ಆಚರಿಸಲು, ಹಂಪಿಯ ಮೇಲೆ ಕರ್ನಾಟಕದ ಹಕ್ಕನ್ನು ಸ್ಥಾಪಿಸುವ ಉದ್ದೇಶವೂ ಇತ್ತು.

೨. ಬಳ್ಳಾರಿಯಲ್ಲಿ ಏಕೀಕರಣ ಚಳವಳಿಯ ಮುಖ್ಯ ಉದ್ದೇಶವೇನಾಗಿತ್ತು.

ಕೋ.ಚೆ.:- ೧೯೦೮ರಲ್ಲಿ ಕರ್ನಾಟಕದ ಕಲ್ಪನೆ ಬಂದಿತ್ತು. ದೇಶದ ಸ್ವಾತಂತ್ರ್ಯದ ನಾಯಕರು ದೇಶಕ್ಕಾಗಿ ಹೋರಾಟ ಮಾಡುತ್ತಿದ್ದರು ಅದರ ಜೊತೆಯಲ್ಲಿಯೇ ಆಲೂರು ವೆಂಕಟರಾಯರು, ಶ್ರೀನಿವಾಸರಾಯ್ ದೊಡ್ಡ ಮೇಟ್ಟಿ, ಚನ್ನ ಬಸಪ್ಪನವರು ಕರ್ನಾಟಕ ಏಕೀಕರಣ ಆಗಬೇಕೆಂದು ಕನ್ನಡ ಪರ ಹೋರಾಟ ಮಾಡಿದ್ದರು. ಆ ಸಮಯದಲ್ಲಿ ಬಳ್ಳಾರಿಯಲ್ಲಿ ಏಕೀಕರಣಕ್ಕೆ ಮುಖ್ಯವಾಗಿ ೨ ಉದ್ದೇಶಗಳನ್ನು ಹೊಂದಿತ್ತು. ೧) ಮಾತೃಭಾಷೆಯಲ್ಲಿ ಅಂದರೆ ಕನ್ನಡದಲ್ಲಿ ಶಿಕ್ಷಣವಾಗಬೇಕೆಂಬುದು. ೨) ಮತ್ತು ತೆಲುಗು ಭಾಷೆಯನ್ನು ಕಡಿಮೆ ಮಾಡಿ ಕನ್ನಡ ಭಾಷಯನ್ನು ಕನ್ನಡವನ್ನು ಬೆಳೆಸುವುದು ಮುಖ್ಯ ಉದ್ದೇಶಗಳಾಗಿದ್ದವು.

೩. ಬಳ್ಳಾರಿಯಲ್ಲಿ ಏಕೀಕರಣದ ಸ್ವರೂಪ ಯಾವ ರೀತಿ ಇದ್ದಿತ್ತು.

ಕೋ.ಚೆ.:- ಪ್ರಾರಂಭದಲ್ಲಿ ಅದು ಪ್ರಜ್ಞಾವಂತರಲ್ಲಿ ಬೆಳೆಯಿತು. ನಂತರ ಅದು ಪ್ರತಿಯೊಂದು ಹಳ್ಳಿ ಹಳ್ಳಿಗಳಲ್ಲಿ ಬೆಳೆಯಿತು. ಚಳವಳಿಯು ಶಾಂತಿ ರೀತಿಯಾದ ಹೋರಾಟವಾಗಿತ್ತು.

೪. ಏಕೀಕರಣದ ಸಮಯದಲ್ಲಿ ಜನರನ್ನು ಯಾವ ರೀತಿ ಸಂಘಟಿಸಿದಿರಿ.

ಕೋ.ಚೆ.:- ಜನ ಸಾಮಾನ್ಯರಿಗೆ ಇದರ ಬಗ್ಗೆ ಹಳ್ಳಿ ಹಳ್ಳಿಗಳಿಗೆ ಹೋಗಿ ಕನ್ನಡ ನಮ್ಮ ಉಸಿರು ಎಂದು ಅದನ್ನು ತೆಲುಗರು ನಮ್ಮಿಂದ ಕಸಿದುಕೊಳ್ಳುವರು ಎಂದು ಅವರಿಗೆ ಭಾವನಾತ್ಮಕವಾಗಿ ಭಾಷಣಗಳು ಮಾಡುವುದರ ಮೂಲಕ ಅವರ ಮನಗಳಲ್ಲಿ ತೆಲುಗು ಎಂಬುದು ಒಂದು ರೀತಿಯ ಆತಂಕದ ಜೀವನದ ನೆಲೆಯಾಗಿತ್ತು ಎಂಬ ಭಾವದ ಮೂಲಕ ಅವರಿಗೆ ತಿಳಿಸಿದ್ದೀವೆ.

೫. ನಿಮ್ಮ ರೈತ ಪತ್ರಿಕೆಯಲ್ಲಿ ಚಳವಳಿಯ ಬಗ್ಗೆ ಯಾವ ರೀತಿ ಪ್ರಚಾರ ಮಾಡುತ್ತಿದ್ದೀರಿ.

ಕೋ.ಚೆ.:– ರೈತ ಪತ್ರಿಕೆಯನ್ನು ೧೯೪೪ರಲ್ಲಿ ಪ್ರಾರಂಭಿಸಿದೆವು. ಈ ಪತ್ರಿಕೆಯು ರೈತ ಉದ್ದೇಶಿಯೆ ಮಾಡಿದ್ದಾಗಿತ್ತು. ಇದರಲ್ಲಿ ಚಳುವಳಿಗೆ ಸಂಬಂಧಿಸಿದಂತೆ ನಾಯಕರ ಭಾಷಣಗಳನ್ನು ಸಾಹಿತಿಗಳ ವಿಚಾರಗಳನ್ನು ಮತ್ತು ಸರ್ಕಾರದ ಧೋರಣೆಗಳನ್ನು ಪ್ರಕಟಿಸುತ್ತಿದ್ದೇವು. ಇದು ಪ್ರತಿಯೊಂದು ಹಳ್ಳಿ ಹಳ್ಳಿಗೂ ದೊರೆಯುವಂತೆ ಮಾಡಿ ಅವರಲ್ಲಿ ವಿಚಾರ ಜ್ಞಾನ ಮೂಡುವಂತೆ ಚಳವಳಿಯ ಬಗ್ಗೆ ಅರಿವಾಗುವಂತೆ ಮಾಡಿದ್ದೇವೆ.

೬. ಕರ್ನಾಟಕ ಏಕೀಕರಣ ಅಥವಾ ಬಳ್ಳಾರಿಯನ್ನು ಮೈಸೂರಿಗೆ ಸೇರಿಸುವ ಚಳವಳಿಯಲ್ಲಿ ಬಳ್ಳಾರಿಯ ಎಲ್ಲಾ ಧರ್ಮಿಯ ಸಹಕಾರ ವಿದ್ದಿತೆ.

ಕೋ.ಚೆ.:– ಬಳ್ಳಾರಿಯಲ್ಲಿ ಎಲ್ಲಾ ಜನಾಂಗದವರು, ಧರ್ಮಿಯರು ಸಹಾಕರ ವಿದ್ದಿತು. ಮುಸ್ಲಿಂ ಜನಾಂಗದವರು ಈ ವಿಷಯದಲ್ಲಿ ಬಹಳ ಸಹಕಾರ ನೀಡಿದ್ದರು, ಅವರಲ್ಲಿ ರಂಜಾನ ಸಾಹೆಬ್, ಪ್ರಮುಖರು.

೭. ಆಯೋಗಗಳು ಬಂದಾಗ ಬಳ್ಳಾರಿಯ ವಿಷಯದ ವರದಿಗಳನ್ನು ಯಾವ ರೀತಿ ನೀಡಿದ್ದೀರಿ.


ಕೋ.ಚೆ.:– ಆಯೋಗಗಳು ಬಂದಾಗ ಜನ ಪ್ರತಿನಿಧಿಗಳು, ಕರ್ನಾಟಕ ಕ್ರಿಯ ಸಮಿತಿಯ ಸದಸ್ಯರು ಎಲ್ಲಾ ಜನರು ಸೇರಿ ಬಳ್ಳಾರಿಯು ಕನ್ನಡ ಪ್ರದೇಶವೆಂದು ಬಂದಂತಹ ಆಯೋಗದ ಮುಂದೆ ವಿವರಗಳನ್ನು ಕೊಡುತ್ತಿದ್ದೇವು. ಸಾಮಾನ್ಯ ಜನರು ತಾವು ಕರ್ನಾಟಕಕ್ಕೆ ಸೇರಿದ್ದವರು ಕನ್ನಡ ನಮ್ಮ ಭಾಷೆ ಎಂದು ಆಯೋಗದ ಮುಂದೆ ಹೇಳುತ್ತಿದ್ದರು.

೮. ಬಳ್ಳಾರಿ ತಾಲ್ಲೂಕು ಮತ್ತು ತುಂಗಭದ್ರ ಅಣೆಕಟ್ಟೆಯ ಸಮಸ್ಯೆಯನ್ನು ಯಾವ ರೀತಿ ಬಗೆ ಅರಿಸಿಕೊಂಡಿರಿ.

ಕೋ.ಚೆ.:– ಬಳ್ಳಾರಿಯನ್ನು ಕರ್ನಾಟಕದಲ್ಲೇ ಉಳಿಸಿಕೊಳ್ಳಲು ತುಂಗಭದ್ರಾ ಹೋರಾಟ ಸಮಿತಿಯನ್ನು ಮಾಡಿಕೊಂಡೆವು. ಅದರಲ್ಲಿ ಅ. ಕ. ರಾ. ನಿ ಪರಿಷತ್ತಿನ ಅಳವಂಡಿ ಶಿವಮೂರ್ತಿ ಸ್ವಾಮಿಯೂ ಇದ್ದರು. ಹೋರಾಟ ಸಮಿತಿಯ ಕಾರ್ಯ ಏನೆಂದರೆ ಪ್ರತಿದಿನ ನೂರಾಒಂದು ಜನ ಸತ್ಯಾಗ್ರಹ ಮಾಡುವುದು. ಪ್ರತಿಯೊಬ್ಬರೂ ತುಂಗಭದ್ರಾ ಕಾಲುವೆಯಿಂದ ಒಂದೊಂದು ಬಿಂದಿಗೆ ನೀರನ್ನು ತುಂಬಿಕೊಂಡು ಕರ್ನಾಟಕದ ಜಮೀನಿಗೆ ಹಾಕುವುದು, ಸತ್ಯಾಗ್ರಹದಲ್ಲಿ ಪ್ರತಿದಿನ ಪಾಲುಗೊಳ್ಳುವ ೧೦೧ ಜನರ ಹೆಸರನ್ನು ಹಿಂದಿನ ದಿನವೇ ಕಲೆಕ್ಟರ್‌ಗೆ ಒದಗಿಸಲಾಗುತ್ತಿತ್ತು. ಸುಮಾರು ೨೯–೩೦ ದಿನ ಸತ್ಯಾಗ್ರಹ ನಡೆಯಿತು. ૩೦೦೦ ರಿಂದ ૩೧೦೦೦ ಜನರು ಬಂದಿತರಾದರು. ಇದರಲ್ಲಿ ಹಳ್ಳಿಯ ಹೆಚ್ಚಿನ ಜನರು ಭಾವಹಿಸಿದ್ದರು. ತ್ರೀಮೂರ್ತಿ ಸಮಿತಿಯ ವರದಿಯನ್ನು ಖಂಡಿಸಿದರು, ಅನಕ್ಷರಸ್ಥ ಮುದುಕಿಯೊಬ್ಬಳು (ಲಿಂಗಮ್ಮವ್ವ ಎಂಬ ಹೆಸರಿನವಳು) ಕೂಡಾ ಚಳುವಳಿಯಲ್ಲಿ ಭಾಗವಹಿಸಲು ಮುಂದೆ ಬಂದಿದ್ದಳು. ಒಂದು ದಿನ ಆಕೆ ನಮ್ಮ ಮನೆಗೆ ಬಂದು ಬಳ್ಳಾರಿನ ಆಂದ್ರಕ್ಕೆ ಸೇರಿಸ್ತಾರಂತೆ, ನಿಜವೇನೋ ಅಪ್ಪಾ, ಅಂತ ಕೇಳಿದಳು, "ಹೌದಮ್ಮ, ವರದಿ ಹಂಗಂತ ಬಂದಿದೆ' ಎಂದೆ ತಾನು ಹಂಗಾಗಬಾರ್ದು, ಅದನ್ನು ತಪ್ಪಿಸೋಕೆ ಏನು ಮಾಡಬೇಕು? ಎಂದು ಆಕೆ ಕೇಳಿದಳು ನೀನೇನು ಮಾಡ್ತೀಯಾ ಹೋಗಿ ಯರ್ರಿತಾತನ್ನು ಪ್ರಾರ್ಥನೆ ಮಾಡ್ಕೊ." ಎಂದೆ.

ಹಿಂಗಾಗಬಾರ್ದು ಅಂತ ಆಕೆ ಕೇಳಿದಳು ನೀವೇನೂ ಸತ್ಯಾಗ್ರಹ ಮಾಡ್ತಿರಂತೆ ಅದಕ್ಕೆ ನಮ್ಮನ್ನು ಸೇರಿಸ್ಕೋಬಾರ್ದೆ; ಆಕೆಯನ್ನು ಸಂತೈಸಿ ವಾಪಸು ಕಳುಹಿಸಿದೆ. ಹೀಗೆ ಇಲ್ಲಿನ ಪ್ರತಿಯೊಬ್ಬರ ಆಸೆ – ಹಂಬಲ ಮೈಸೂರಿಗೆ ಸೇರುವುದೇ ಆಗಿತ್ತು. ನೀರಿನ ಸತ್ಯಾಗ್ರಹವು ನಿಲ್ಲಿಸಲು, ૩೦ ನೇ ದಿನ ಸರ್ಕಾರದಿಂದ ತಂತಿ ಬಂತು. 'ಮಿಶ್ರಾ ವರದಿಯನ್ನು ಒಪ್ಪಿಕೊಳ್ಳಲಾಗುತ್ತದೆ. ಸತ್ಯಾಗ್ರಹವನ್ನು ನಿಲ್ಲಿಸಿ ಅಂತ. ಈ ರೀತಿ ಬಳ್ಳಾರಿಯು ಮೈಸೂರಿಗೆ ಸೇರಿತು.

೮.೨ ಹಿರೆಹಾಳ್ ಇಬ್ರಾಂಹಿಮ್ ಸಾಹೇಬ್



೧. ಏಕೀಕರಣ ಚಳವಳಿಯು ಬಳ್ಳಾರಿಯಲ್ಲಿ ಯಾವಾಗ ರೂಪುಗೊಂಡಿತು?

ಹಿ.ಇಂ: ೧೯೫೨ರಲ್ಲಿ ಆಂಧ್ರದ ಪೊಟ್ಟಿ ಶ್ರೀರಾಮುಲು ಭಾಷಾವಾರು ರಾಜ್ಯಕ್ಕಾಗಿ ಉಪವಾಸ ಮಾಡಿದರು. ಆವಾಗ ಬಳ್ಳಾರಿಯ ತೆಲುಗರು ಆ ಬಗ್ಗೆ ಚಳುವಳಿಯನ್ನು ಮಾಡಿದರು. ಇದರಿಂದ ಬಳ್ಳಾರಿಯ ಕನ್ನಡಿಗರು ತಮ್ಮ ಭಾಷೆಯ ಉಳಿವಿಗಾಗಿ ಹೋರಾಟವನ್ನು ಮಾಡಿದರು. ಈ ರೀತಿಯಾಗಿ ಚಳುವಳಿಯು ರೂಪುಗೊಂಡಿತು.

೨. ನೀವು ಏಕೀಕರಣ ಚಳವಳಿಯಲ್ಲಿ ಯಾವಾಗ ಭಾಗಿಯಾಗಿದ್ದಿರಿ.

ಹಿ.ಇಂ: ಏಕೀಕರಣ ಚಳವಳಿಯ ಸಮಯದಲ್ಲಿ ನಾನು ಶಾಲೆ ಓದುತ್ತಿದ್ದೆ. ಅವಾಗ ಪತ್ರಿಕೆಗಳನ್ನು ಓದುವುದರ ಮೂಲಕ ಮತ್ತು ಬಳ್ಳಾರಿಯಲ್ಲಿನ ರಂಜಾನ್ ಸಾಹಿಬ್‌ರು ನಮ್ಮ ಜನಾಂಗದವರು. ಅವರು ಈ ಚಳವಳಿಯಲ್ಲಿ ಭಾಗವಹಿಸುತ್ತಿದ್ದರು. ಇದರಿಂದ ಎಲ್ಲರು ಚಳವಳಿಯಲ್ಲಿ ಭಾಗವಹಿಸುತ್ತಿದ್ದರು ಅವರ ಜೊತೆಯಲ್ಲಿಯೇ ನಾನು ಚಳವಳಿಯಲ್ಲಿ ಭಾಗವಹಿಸಿದೆ.

೩. ಏಕೀಕರಣ ಚಳವಳಿಯಲ್ಲಿ ಯಾರ ಸ್ಫೂರ್ತಿಯಿಂದ ತಾವು ಭಾಗವಹಿಸಿದಿರಿ.

ಹಿ.ಇಂ: ಸ್ಫೂರ್ತಿ ಎಂದರೆ ಕನ್ನಡ ಭಾಷೆಯು ಮೊದಲು. ನಂತರದಲ್ಲಿ ಕನ್ನಡ ಕವಿಗಳು ಕೆ.ಪುಟ್ಟನವರ ಕಟ್ಟಾ ಅಭಿಮಾನಿಯಾದೆ. ನಂತರದಲ್ಲಿ ಬಳ್ಳಾರಿ ರಂಜಾನ್ ಸಾಹೇಬ್ ಅವರ ಸ್ಫೂರ್ತಿ ಪ್ರೋತ್ಸಾಹದಿಂದ ಭಾಗವಹಿಸಿದ್ದೆ.

೪. ಆಯೋಗಗಳು ಬಂದಾಗ ಜನರನ್ನು ಯಾವರೀತಿ ಸಜ್ಜುಗೊಳಿಸುತ್ತಿದ್ದೀರಿ.

ಹಿ.ಇಂ: ಆಯೋಗಗಳು ಬಂದಾಗ ನಾವು ಗುಂಪೊಂದು ಮಾಡಿಕೊಂಡು ಹಳ್ಳಿ ಹಳ್ಳಿಗೆ ಹೋಗಿ, ಪ್ರತಿಯೊಂದು ಮನೆಗೂ ಭೇಟಿಕೊಟ್ಟು "ನಾವು ಕನ್ನಡಿಗರು ನಮ್ಮ ಭಾಷೆ ಕನ್ನಡ" ಎಂದು ತಿಳಿಸುವಂತೆ ಮನ ಮುಟ್ಟುವಂತೆ ಅವರಿಗೆ ತಿಳಿಸಿ ಹೇಳುತ್ತಿದ್ದೆವು. ಸೈಕಲಿನಲ್ಲಿ ಹಳ್ಳಿ ಹಳ್ಳಿಗಳಿಗೂ ಹೋಗಿ ಹೇಳುತಿದ್ದೆವು.

೫. ಬಳ್ಳಾರಿ ಏಕೀಕರಣದಲ್ಲಿ ಮುಸ್ಲಿಮರ ಪಾತ್ರ ಮಹತ್ವವಾಗಿತ್ತು ಇದರ ಬಗ್ಗೆ ತಮ್ಮ ಅಭಿಪ್ರಾಯ.

ಹಿ.ಇಂ: ಬಳ್ಳಾರಿ ಏಕೀಕರಣದಲ್ಲಿ ಮುಸ್ಲಿಮರ ಮತವು ನಿರ್ಣಾಯಕವಾಗಿತ್ತು. ಅದರಲ್ಲಿ ನಮ್ಮ ಪಿಂಜಾರ್ ಜನಾಂಗದವರು ಸೇರಿದ್ದರು. ಬಳ್ಳಾರಿಯಲ್ಲಿ ಯಾವಾಗಿನಿಂದಲೂ ಜೀವನ ನಡೆಸುತ್ತಿದ್ದ ಇವರು ಇಲ್ಲಿನ ಸೌಮ್ಯ ವಾತವಾರಣಕ್ಕೆ ಹೊಂದಿಕೊಂಡು ಸೌರ್ಹದತೆಯಿಂದ ಬದುಕುತಿದ್ದರಿಂದ ಅವರು ಮೈಸೂರು ಅಥವಾ ಬಳ್ಳಾರಿಯು ಕನ್ನಡ ನಾಡಿನಲ್ಲಿ ಇರುವುದಕ್ಕೆ ಮುಂದೆ ಬಂದಿದ್ದರು.

೬. ಬಳ್ಳಾರಿಯಲ್ಲ ನಡೆದ ಸಾರ್ವತ್ರಿಕ ಚುನಾವಣೆಯು ಯಾವ ರೀತಿ ಮಹತ್ವದ್ದಾಗಿತ್ತು. ಅದರ ಬಗ್ಗೆ ನಿಮ್ಮ ಅನುಭವನ್ನು ಹೇಳಿ.

ಹಿ.ಇಂ: ಬಳ್ಳಾರಿಯು ಮದ್ರಾಸ್‌ನಲ್ಲಿ ಇತ್ತು. ಆ ಕಾಲಕ್ಕೆ ಭಾಷಾವಾರು ಸದಸ್ಯರಲ್ಲಿಯೇ ಚುನಾವಣೆಗಳು ನಡೆದ್ದವು. ಬಳ್ಳಾರಿಯಲ್ಲಿ ಸಹಜವಾಗಿಯೇ ತೆಲುಗರು ಚುನಾವನೆಯನ್ನು ಗೆದ್ದರು. ಅವರಲ್ಲಿ ಮುಂಡ್ಲೂರು ಗಂಗಪ್ಪ ಕಟ್ಟಾ ಆಂಧ್ರ ಅಭಿಮಾನಿಯಾಗಿದ್ದರು. ಅವರು ಚುನಾವಣೆಯಲ್ಲಿ ಮೊದಲಿಗೆ ಗೆದ್ದರು. ನಂತರ ಭಾಷಾವಾರು ರಾಜ್ಯಗಳ ರಚನೆಯ ಸಮಯದಲ್ಲಿ ಗಂಗಪ್ಪನವರು ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸುತ್ತೇನೆ ಎಂದು ಹೇಳಿದ್ದರು. ಆಗ ಇಲ್ಲಿನ ಕನ್ನಡಿಗರು ಹೋರಾಟ ಮಾಡಿದ್ದರು. ಆ ಸಮಯದಲ್ಲಿ ಗಂಗಪ್ಪನವರು ಮದ್ರಾಸ್ ಸಂಸತ್ತಿನಲ್ಲಿ ತಮ್ಮ ಪೇಟೆಯನ್ನು ತೆಗೆದು ಇಟ್ಟು ಇದನ್ನು ರಾಜೀನಾಮೆ ಎಂದು ಭಾವಿಸಿರಿ ಎಂದು ಹೇಳಿದರು. ನಂತರ ಚುನಾವಣೆ ನಡೆದಾಗ ಇದರಲ್ಲಿ ತಾನು ಗೆದ್ದರೆ ಬಳ್ಳಾರಿ ಆಂಧ್ರಕ್ಕೆ ಸೋತರೆ ಮೈಸೂರಿಗೆ

ಎಂದು ಅವರು ಸವಾಲು ಹಾಕಿದರು. ಇದರಿಂದಾಗಿ ಕನ್ನಡಿಗರು ಹರಗಿನಡೋಣಿ ಚನ್ನಬಸಪ್ಪನವರನ್ನು ಕನ್ನಡದ ಅಭ್ಯರ್ಥಿಯಾಗಿ ನಿಲ್ಲಿಸಿದರು. ಚುನಾವಣೆಯು ಕನ್ನಡದ ಉಳಿವಿಗಾಗಿ ನಡೆದಿತು ಇಡೀ ಕರ್ನಾಟಕದ ಅಭಿಮಾನದ ಚುನಾವಣೆಯಾಗಿತ್ತು. ಅನೇಕ ಗಲಭೆಗಳು ನಡೆದವು. ಕೊನೆಗೆ ಗಂಗಪ್ಪನವರು ಕನ್ನಡದ ಅಭ್ಯರ್ಥಿ ಹರಗಿನದೋಣಿ ಚನ್ನಬಸಪ್ಪನವರ ೩೦೦೦೦ ಮತಗಳಿಂದ ಸೋತರು. ಇದರಿಂದ ಮಾಡಿದ್ದ ಸವಾಲಿನಂತೆ ಅವರು ಬಳ್ಳಾರಿಯನ್ನು ಮೈಸೂರಿನಲ್ಲಿ ವಿಲಿನಕ್ಕೆ ಒಪ್ಪಿಕೊಂಡರು. ಈ ಚುನಾವಣೆಗಾಗಿ ಬಳ್ಳಾರಿಯ ನಾಯಕರು, ಜನರು ಬಹಳ ಶ್ರಮಪಟ್ಟರು. ಅಳವಂಡಿ ಶಿವಮೂರ್ತಿ ಸ್ವಾಮಿ, ಶಾಂತಪ್ಪ ಸತ್ಯವಂತ, ರೇವಣಸಿದ್ದಪ್ಪ ಮರಳು ಸಿದ್ದಯ್ಯ, ಚೆಳ್ಳಗುರ್ಕಿ ರೇವಣ್ಣ ಸಿದ್ದಯ್ಯ ಶ್ರಮಿಸಿದ ನಾಯಕರಾಗಿದ್ದಾರೆ.


೭. ಬಳ್ಳಾರಿಯ ಏಕೀಕರಣ ಚಳುವಳಿಯು ಕೋಮು ಸೌರ್ಹದತೆಯಿಂದ ನಡೆಯಿತೆ?

ಹಿ.ಇಂ: ಹೌದು. ಇಡೀ ಕರ್ನಾಟಕದಲ್ಲಿ ಬಳ್ಳಾರಿಯಲ್ಲಿ ಮಾತ್ರ ಈ ಅಂಶವನ್ನು ಕಾಣಬಹುದಾಗಿದೆ, ಏಕೆಂದರೆ ಇಲ್ಲಿ ಜಾತಿ ಧರ್ಮವನ್ನು ಚಳವಳಿಯಲ್ಲಿ ತರಲಿಲ್ಲ. ಹಿಂದೂ, ಮುಸ್ಲಿಂ ಎಂಬ ಭೇಧವನ್ನು ಇಲ್ಲಿ ಯಾರು ಮಾಡಲಿಲ್ಲ. ಆ ಕಾರಣಕ್ಕಾಗಿ, ಮತ್ತು ಮುನ್ಸಿಪಲ್ ಪ್ರೆಸಿಡೆಂಟಾಗಿ ಅಬ್ದುಲ್ ರಜಾಕ್ ಸಾಹೇಬರು ಮತ್ತು ಕ್ರಿಯಾ ಸಮಿಯ ಸದಸ್ಯರಾಗಿ ಪಿಂಜಾರ್ ರಂಜಾನ್ ಸಾಬ್ ಅವರು ಸಹಾಯಕರಾಗಿ ಇದ್ದರು ಇದರಿಂದ ಬಳ್ಳಾರಿಯು ಇಡೀ ಕರ್ನಾಟಕ್ಕೆ ಕೋಮು ಸೌರ್ಹದತೆಯಲ್ಲಿ ಮಾದರಿ ಎಂದೆನಿಸಿತು.

೮.೩ ಶ್ರೀ ಡಬ್ಲ್ಯೂ ಮಲ್ಲಪ್ಪ

೧. ನೀವು ಬಳ್ಳಾರಿಯ ಏಕೀಕರಣ ಚಳವಳಿಯಲ್ಲಿ ಯಾವಾಗ ಭಾಗವಹಿಸಿದ್ದೀರಿ.

ಮಲ್ಲಪ್ಪ: ೧೯೫೪ರ ಸುಮಾರಿನಲ್ಲಿ. ನಮ್ಮ ಹಳ್ಳಿಯಲ್ಲಿ ಯುವಕ ಸಂಘ ಒಂದನ್ನು ಕಟ್ಟಿದ್ದೆವು ವಿದ್ಯಾವಂತರಾದ ಅನೇಕರು ಸೇರಿಕೊಂಡು ಪತ್ರಿಕೆಗಳನ್ನು ತರಿಸಿಕೊಂಡು ವಿಷಯವನ್ನು ಎಲ್ಲರಿಗೂ ತಿಳಿಯುವಂತೆ ಮಾಡುತ್ತಿದ್ದೆವು. ಪತ್ರಿಕೆಗಳಲ್ಲಿ ಬರುತ್ತಿದ್ದ ಅಳವಂಡಿ ಶಿವಮೂರ್ತಿ ಸ್ವಾಮಿಯವರ ಭಾಷಣಗಳನ್ನು ಮತ್ತು ವಿದ್ವಾಂಸರ ಹೇಳಿಕೆಗಳನ್ನು ತಿಳಿದುಕೊಂಡು ತಾವುಗಳು ಸಹ ಚಳವಳಿಯಲ್ಲಿ ಭಾಗವಹಿಸಬೇಕೆಂದು ನಿರ್ಧಾರ ಮಾಡಿಕೊಂಡೆವು.



೨. ನೀವು ಹಳ್ಳಿಯಲ್ಲಿ ಯಾವ ರೀತಿ ಸಂಘಟಿಸಿದಿರಿ.

ಮಲ್ಲಪ್ಪ: ಚಳವಳಿಗಾಗಿ ಪ್ರತಿಯೊಂದು ಮನೆಯಿಂದ ಒಬ್ಬರು ಭಾಗವಾಗಬೇಕೆಂದು ಕೇಳಿಕೊಂಡೆವು. ಎಲ್ಲರು ತಾತನ ಸನ್ನಿಧಿಯಲ್ಲಿ ಸೇರಿಕೊಂಡು ಮಾಡಬೇಕಾದ ಕಾರ್ಯಗಳನ್ನು ಚರ್ಚಿಸಿ ಮುಂದಕ್ಕೆ ಹೋಗುತ್ತಿದ್ದೆವು.

೩. ನಿಮ್ಮ ಹಳ್ಳಿಯಲ್ಲಿ ಯಾವ ಚಳುವಳಿಯನ್ನು ಮಾಡಿದಿರಿ?

ಮಲ್ಲಪ್ಪ: ನಮ್ಮ ಹಳ್ಳಿ ಆಂಧ್ರಕ್ಕೆ ಕೇವಲ ೨–೩ ಕಿ.ಮೀ. ದೂರದಲ್ಲಿದೆ. ಅದಕ್ಕಾಗಿ ಈ ಕಡೆಯಿಂದ ಹೊರಡುವ ಬಸ್ಸುಗಳನ್ನು ಕನ್ನಡದ ನಾಮಫಲಕಗಳನ್ನು ಹಾಕಬೇಕೆಂದು ಚಳವಳಿಯನ್ನು ಮಾಡಿದೆವು. ಆಗ ಸರ್ಕಾರವು ಪೊಲೀಸ್‌ಕಾರ್ಯ ನಡೆಸಿತು. ಆಗ ಊರಿನ ಎಲ್ಲಾ ಜನರು ಸೇರಿ ಅವರಿಗೆ ಯಾವುದನ್ನು ಕೊಡಬಾರದೆಂದು ಅಂದರೆ ನೀರು, ಆಹಾರ ಮುಂತಾದವುಗಳನ್ನು ಕೊಡಬಾರದು ಎಂದು ತೀರ್ಮಾನಿಸಿ ಹೋರಾಟ ಮುಂದುವರೆಸಿದವು. ಆಗ ಹಿರಿಯರು ಬಳ್ಳಾರಿಯಲ್ಲಿ ಚರ್ಚಿಸುವಂತೆ ಹೇಳಿದ್ದರು. ಆ ಸಮಯಕ್ಕೆ ಸರಿಯಾಗಿ ಪೋಲಿಸರು, ಕೋಟ್ರಯ್ಯ ಮತ್ತು ನಾಗಣಗೌಡ ರವರನ್ನು ಕರೆದುಕೊಂಡು ಹಗರಿಯಲ್ಲಿ ನಿಲ್ಲಿಸಿ ಚೆನ್ನಾಗಿ ಒಡೆದು ಕಳುಹಿಸಿದರು. ಇದರಿಂದ ಜನ ಸಿಟ್ಟಿ ಗೆದ್ದರು. ಆಗ ಅಳವಂಡಿ ಶಿವಮೂರ್ತಿಯವರು, ಕೋ. ಚನ್ನಬಸಪ್ಪನವರು, ಗಡಿಗಿ ಚನ್ನಪ್ಪನವರು ಮುಂತಾದ ಮುಂಖಡರು ಸೇರಿಸಿ, ಸಮಾಧಾನ ಮಾಡಿ ಕನ್ನಡ ನಾಮಫಲಕವನ್ನು ಬಸ್ಸಿನಲ್ಲಿ ಹಾಕುವಂತೆ ಮಾಡಿದರು. ಬಸ್ಸಿನವರು ಒಪ್ಪಿ ಅವರು ಚಳ್ಳಗುರ್ಕಿವರೆಗೆ ಕನ್ನಡ ನಾಮಫಲಕವನ್ನು ಹಾಕಿ ನಂತರ ಮುಂದಕ್ಕೆ ತೆಲುಗು ನಾಮಫಲಕವನ್ನು ಹಾಕಿಕೊಂಡು ಹೋಗುತ್ತಿದ್ದರು.


೪. ತುಂಗಭದ್ರ ನೀರಿನ ಸಮಸ್ಯೆಯಲ್ಲಿ ನೀವು ಯಾವ ರೀತಿ ಹೋರಾಡಿದಿರಿ?

ಮಲ್ಲಪ್ಪ: ನೀರಿನ ಸಮಸ್ಯೆಯನ್ನು ನಾವು ಮೊದಲಿಂದಲು ಎದುರಿಸುತಿದ್ದೇವೆ. ಏಕೆಂದರೆ ಇಲ್ಲಿ ಹಗರಿ ಕೆರೆ ಇತ್ತು. ಅದರ ನೀರನ್ನು ಆಂಧ್ರಕ್ಕೆ ಕಳಿಸುವಂತೆ ಮಾಡಿದ್ದರು ಇದರಿಂದ ನಮಗೆ ತೊಂದರೆಯಾಗಿತ್ತು. ಬಳ್ಳಾರಿಯಲ್ಲಿ ನೀರಿನ ಹೋರಾಟವನ್ನು ಪ್ರಾರಂಭಿಸಿದ ಮೊದಲ ಹಳ್ಳಿ ಚೆಳ್ಳಗುರ್ಕಿಯಾಗಿದೆ, ನಾವು ಗುಂಪು ಗುಂಪಾಗಿ ಹೋಗಿ ಚಳವಳಿ ಮಾಡಿದ್ದೆವು. ಬಳ್ಳಾರಿಯಲ್ಲಿ ಶಿವಮೂರ್ತಿ ಸ್ವಾಮಿಗಳು, ವಾಲಿಚೆನ್ನಪ್ಪ, ದೇವಣ್ಣ ಶೆಟ್ಟಿ ಇವರ ನೇತೃತ್ವದಲ್ಲಿ ಎಲ್ಲಿ ಹೋರಾಟ ಮಾಡಬೇಕಾದರೆ, ಅಲ್ಲಿಗೆ ನಾವು ಹೋಗುತ್ತಿದ್ದೆವು. ನಾನು ಎರಡನೆಯ ತಂಡದಲ್ಲಿ ಇದ್ದು ಮೋಕಾದಲ್ಲಿ ನೀರಿನ ಸತ್ಯಾಗ್ರಹ ಮಾಡಿದ್ದೆ.

೫. ನೀರಿನ ಸತ್ಯಾಗ್ರಹದ್ದಲಿ ನೀವು ಬಂಧನಕ್ಕೆ ಒಳಗಾದಿರಾ.

ಮಲ್ಲಪ್ಪ: ಹೌದು, ಬಳ್ಳಾರಿಯ ಕೇಂದ್ರ ಕಾರಾಗೃಹದಲ್ಲಿ ೩೦ ದಿನಗಳ ಕಾಲ ಇದ್ದೆವು. ಅಲ್ಲಿ, ನಮಗೆ ಬಹಳ ತೊಂದರೆಯನ್ನು ಕೊಟ್ಟರು, ಊಟದಲ್ಲಿ ಹುಳುಗಳು ಇದ್ದಿದನ್ನು ಕೊಟ್ಟರು, ದೀಪಗಳನ್ನು ತೆಗೆದು ಲಾಟಿನ್‌ಗಳನ್ನು ಕೊಟ್ಟು ಕತ್ತಲೆ ಕೋಣೆಯಲ್ಲಿ ಇರಿಸಿದ್ದರು. ಏಕೆಂದರೆ ಜೈಲಿನ ಅಧಿಕಾರಿಗಳು ತಮಿಳರು ಮತ್ತು ತೆಲುಗರಾಗಿದ್ದರಿಂದ ಅವರು ನಮಗೆ ಬಹಳ ತೊಂದರೆಯನ್ನು ಕೊಟ್ಟರು.

ಶ್ರೀ ಹೆಚ್. ಜಿ. ಕರಿಬಸವನಗೌಡ



೧. ನೀವು ಬಳ್ಳಾರಿಯ ಏಕೀಕರಣ ಚಳವಳಿಯಲ್ಲಿ ಭಾಗವಹಿಸಿದ್ದೀರಾ?

ಹೆಚ್.ಜಿ. : ಭಾಗವಹಿಸಿದ್ದೀನ, ನಮ್ಮ ಹಳ್ಳಿ ಆಂಧ್ರಕ್ಕೆ ಹತ್ತಿರದ ಗಡಿ ಭಾಗವಾದ್ದರಿಂದ ಅವರ ಸೌಜನ್ಯದಿಂದ ಬೇಸತ್ತು ನಮ್ಮೂರಿನವರು ಸೇರಿಕೊಂಡು ಹೋರಾಟದಲ್ಲಿ ಭಾಗವಹಿಸಿದ್ದೀವಿ.

೨. ನೀವು ಹಳ್ಳಿಯಲ್ಲಿ ಯಾವ ರೀತಿ ಹೋರಾಟ ಸಂಘಟಿಸಿದಿರಿ?

ಹೆಚ್.ಜಿ ; ನಮ್ಮ ಹಳ್ಳಿಯಲ್ಲಿ ಯುವಕರು ಸೇರಿಕೊಂಡು ಒಂದು ಸಂಘವನ್ನು ಕಟ್ಟಿದೆವು. ಅದಕ್ಕೆ ಯುವಕ ಸಂಘ ಎಂದು ಹೆಸರು. ಅಲ್ಲಿ ಎಲ್ಲಾ ಯುವಕರು ಸೇರಿಕೊಂಡು ಪತ್ರಿಕೆಗಳನ್ನು ತರಿಸಿಕೊಂಡು ದೇಶದಲ್ಲಾಗುವ ಎಲ್ಲಾ ವಿಷಯಗಳನ್ನು ತಿಳಿದುಕೊಂಡು ಚರ್ಚೆ ಮಾಡುತ್ತಿದ್ದೆವು. ಇದರಿಂದ ಗ್ರಾಮದ ಎಲ್ಲಾ ಮನೆಯಲ್ಲಿಯೂ ಒಬ್ಬರು ಭಾಗಿಯಾಗಿದ್ದರು ಈ ರೀತಿ ಜನರೆಲ್ಲರೂ ಚಳವಳಿಯಲ್ಲಿ ಸೇರಿಸಿಕೊಂಡರು.

೩ ಏಕೀಕರಣ ಚಳವಳಿಯಲ್ಲಿ ನಿಮಗೆ ಯಾರಿಂದ ಪ್ರೋತ್ಸಾಹ ದೊರೆಯಿತು?

ಹೆಚ್.ಜಿ.: ನಾವು ಹಳ್ಳಿಯಲ್ಲಿ ನೀರಿಗಾಗಿ ಹೋರಾಟ ಮಾಡುತ್ತಿದ್ದೆವು. ಆಗ ನಾವು ಬಳ್ಳಾರಿಯಲ್ಲಿನ ನಾಯಕರುಗಳನ್ನು ಕೇಳಿದ್ದೆವು. ಆಗ ಅನೇಕ ನಾಯಕರು ಶ್ರೀಮಂತ ವ್ಯಾಪಾರಿಗಳಾಗಿದ್ದರು. ಇದರಿಂದ ನಮಗೆ ಯಾವುದೇ ರೀತಿ ಸಹಕಾರ ದೊರೆಯಲಿಲ್ಲ. ನಂತರದಲ್ಲಿ ಅಳವಂಡಿ ಶಿವಮೂರ್ತಿ ಸ್ವಾಮಿಗಳು, ಮಹಾದೇವಪ್ಪ ಇವರು ನಮ್ಮ ಹಳ್ಳಿಗೆ ಬಂದು ಏಕೀಕರಣ ಭಾಷಣವನ್ನು ಮಾಡಿದರು ಅವರ ಭಾಷಣದಿಂದ ಪ್ರೋತ್ಸಾಹ ದೊರೆಯಿತು. ನಂತರದಲ್ಲಿ ಎರ್ರಿತಾತನ ಗೋಪುರ ಮಾಡಿದ ನಂತರ ಕಳಸ ಕೊಡಿಸುವ ಸಮಯದಲ್ಲಿ ಎಲ್ಲಾ ನಾಯಕರು ಬಂದಿದ್ದರು. ಕೋಣಂ ಚನ್ನಬಸವಣ್ಣನವರು ಭಾಷಣದಲ್ಲಿ ಮೈಸೂರು ಜನರು ತಾತನವರ ಗೋಪುರವನ್ನು ಕಟ್ಟಿಸಿದರು ಇದರಿಂದ ಬಳ್ಳಾರಿಯು ಕರ್ನಾಟದಲ್ಲೇ ಸ್ಥಿರವಾದುದು ಎಂದು ಭಾಷಣ ಮಾಡಿದರು. ಈ ಎಲ್ಲಾ ನಾಯಕರ ಭಾಷಣದಿಂದಾಗಿ ನಾನು ಚಳುವಳಿಯಲ್ಲಿ ಪಾಲ್ಗೊಳ್ಳಲು ಪ್ರೋತ್ಸಾಹ ದೊರೆಯಿತು.

೪. ನಿಮ್ಮ ಹಳ್ಳಿಯಲ್ಲಿ ಯಾವುದಾದರು ಕನ್ನಡಪರ ಚಳವಳಿ ನಡೆಯಿತೆ.


ಹೆಚ್.ಜಿ : ಕನ್ನಡಪರ ಚಳವಳಿಯಿಂದ ನಮ್ಮ ಊರಿನಲ್ಲಿ ಬಸ್ಸಿನಲ್ಲಿ ಕನ್ನಡ ನಾಮಫಲಕ ಹಾಕಬೇಕೆಂದು ಗಲಾಟೆ ಮಾಡಿದ್ದೀವಿ. ಆಗ ಆಂಧ್ರದ ಪೊಲೀಸರು ಬಂದು ಗಲಭೆಯನ್ನು ಮಾಡುವುದನ್ನು ನಿಲ್ಲಿಸಿರಿ ಎಂದು

ಹೇಳಿದರು, ಬಳ್ಳಾರಿ ಕರ್ನಾಟಕದಲ್ಲಿದೆ, ಅದಕ್ಕಾಗಿ ಕನ್ನಡದ ನಾಮಫಲಕಗಳು ಹಾಕಬೇಕೆಂದು ಹೇಳ್ದಿವಿ. ಇದರಿಂದ ಕೆಲವು ದಿನಗಳ ವರೆಗೆ ಬಸ್ಸಿನವರು ನಮ್ಮ ಹಳ್ಳಿಯವರೆಗೆ ಕನ್ನಡ ನಾಮಫಲಕ ಹಾಕಿ ಮುಂದೆ ತೆಲುಗು ಫಲಕ ಹಾಕುತ್ತಿದ್ದರು. ಇದರ ವಿರುದ್ಧ ಹೋರಾಟ ಮಾಡಿದ್ದೇವೆ. ಆಗ ಎಂ.ಪಿಯಾಗಿದ್ದ ಅಳವಂಡಿ ಶಿವಮೂರ್ತಿ ಸ್ವಾಮಿಗಳು ಈ ಹೋರಾಟಕ್ಕೆ ನಾಂದಿ ಹಾಡಿ ಕನ್ನಡ ನಾಮಫಲಕ ಹಾಕುವಂತೆ ಮಾಡಿದರು.

೫. ನೀರಿನ ಸತ್ಯಾಗ್ರಹದಲ್ಲಿ ನಿಮ್ಮ ಅನುಭವ ಏನು?

ಹೆಚ್.ಜಿ.: ನೀರಿನ ಸಮಸ್ಯೆ ಮೊದಲಿನಿಂದಲು ನಮಗೆ ತಿಳಿದ ವಿಷಯವಾಗಿತ್ತು. ಅದಕ್ಕಾಗಿ ನಾವು ಹೋರಾಟದಲ್ಲಿ ಮುಂದೆ ಇದ್ದೆವು. ತುಂಗಭದ್ರಾದ ನೀರು ಆಂಧ್ರಕ್ಕೆ ಬಿಡಬಾರದೆಂದು ಮಿಂಚೇರಿಯಲ್ಲಿ ಕಾಲುವೆಯನ್ನು ಒಡೆದು ಸತ್ಯಾಗ್ರಹ ಮಾಡಿದೆವು. ಮೊದಲು ನಮ್ಮವರಿಗೆ ನೀರಿನ ಬಗ್ಗೆ ಸರಿಯಾಗಿ ತಿಳಿದಿರಲಿಲ್ಲವೆನಿಸುತ್ತದೆ. ಆಂಧ್ರದವರು ದುಡ್ಡು ಕೊಟ್ರೆ ಇಷ್ಟು ಟಿ.ಎಂ.ಸಿ. ನೀರು ಕೊಡಬಹುದು ಎಂದು ಕೊಂಡಿದ್ದರು. ಅದರೆ ಮುಂದೆ ಆಂಧ್ರದವರೇ ತುಂಗಭದ್ರಾ ಡ್ಯಾಮಿನ ಮಂಡಳಿಯನ್ನು ಸ್ಥಾಪಿಸಿ ಕೊಂಡರು. ಆಗ ಕರ್ನಾಟಕದವರು ಏನು ಮಾಡಲಿಲ್ಲ ಇದರಿಂದ ಅಲ್ಲಿರುವ ಅಧಿಕಾರಿಗಳು ಆಂಧ್ರದವರು ಒಂದು ಕಡೆ ನೀರನ್ನು ಬಿಡಲು ಪ್ರಾರಂಭಿಸಿದರು. ಆಗಿನ ಈ ತಪ್ಪು ಈಗ ನಮ್ಮವರ ಗಮನಕ್ಕೆ ಬಂದಿದೆ. ಈ ಹಳ್ಳಿಗೆ ಇಂದಿಗೂ ನೀರು ನಿಡುತ್ತೇವೆ ಎಂದು ಹೇಳಿದರು. ನೀರನ್ನು ಸರಿಯಾಗಿ ಕೊಡುತ್ತಿಲ್ಲ.

ಶ್ರೀ ಪಿ.ಎಂ. ರೇವಣಸಿದ್ದಯ್ಯ



೧. ಹೋರಾಟದ ಪ್ರವೃತ್ತಿ ಯಾವಾಗಿನಿಂದ ಪ್ರಾರಂಭವಾಯಿತು?

ಉ : ನಮ್ಮ ತಂದೆ ತೀರಿಹೋದ ನಂತರ ನಾನು ಕೃಷಿಯನ್ನು ಅವಲಂಬಿಸಿದ್ದೆ. ಅಲ್ಲಿಂದ ನಾನು ಜನರ ಕಷ್ಟಗಳು ಅದರಿಂದಾಗುವ ತೊಂದರೆಗಳಿಗೆ ವಿರೋಧಿಸುವ ನಿಟ್ಟಿನಲ್ಲಿ ಹೋರಾಟ ಪ್ರಾರಂಭಿಸಿದೆ. ಇದೆ ಮುಂದೆ ನಾಡು-ನುಡಿಯ ವರೆಗೂ ಬೆಳೆದುಕೊಂಡು ಬಂದಿತು.

೨. ಏಕೀಕರಣ ಚಳವಳಿಯಲ್ಲಿ ನಿಮಗೆ ಯಾರ ಪ್ರೋತ್ಸಾಹ ಅಥವಾ ಪ್ರೇರಣೆ ದೊರೆಯಿತು?

ಉ : ನಾನು ಏಕೀಕರಣ ಹೋರಾಟದಲ್ಲಿ ಧುಮುಕಲು ಅಳವಂಡಿ ಶಿವಮೂರ್ತಿ ಸ್ವಾಮೀಜಿ ಮತ್ತು ಟಿ.ಎಂ. ಸದಾಶಿವಯ್ಯ ಪ್ರೇರಣೆಯಾಗಿದ್ದಾರೆ.

೩. ಫಜಲ್ ಆಯೋಗದ ವರದಿಯ ವಿರುದ್ಧ ನೀವು ಯಾವ ರೀತಿ ಪ್ರತಿಭಟನೆ ಮಾಡಿದ್ದೀರಿ?

ಉ : ಫಜಲ್ ವರದಿಯು ಬಳ್ಳಾರಿ ಸಿರುಗುಪ್ಪ ಹೊಸಪೇಟೆ ತುಂಗಭದ್ರಾ ಸಮೇತ ಆಂಧ್ರಕ್ಕೆ ಕೊಡಬೇಕು ಎಂದು ಹೇಳಿತ್ತು, ಅದಕ್ಕಾಗಿ ಇಲ್ಲಿನ ಎಲ್ಲಾ ನಾಯಕರು ಸೇರಿ ಅಳವಂಡಿ ಶಿವಮೂರ್ತಿ ಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಹಂಪಿಯಲ್ಲಿ ಸಭೆ ಸೇರಿ ತುಂಗಭದ್ರಾ ಕಾಲುವೆಯ ನೀರನ್ನು ಆಯಕಟ್ಟು ಅಲ್ಲದ ಹೊಲಗಳಿಗೆ ನೀರು ಹರಿಸುವಂತೆ ಮಾಡುವ ಮುಖಾಂತರ ಅಸಹಕಾರ ಚಳುವಳಿಯನ್ನು ಮಾಡುವಂತೆ ನಿರ್ಣಯವನ್ನು ತೆಗೆದುಕೊಂಡು ಪ್ರತಿಭಟನೆಯನ್ನು ಪ್ರಾರಂಭಿಸಿದೆವು.

೪. ತುಂಗಭದ್ರಾ ಅಣೆಕಟ್ಟಿನ ನೀರಿನ ಸತ್ಯಾಗ್ರಹದಲ್ಲಿ ಯಾವ ರೀತಿ ಪಾಲ್ಗೊಂಡಿದ್ದೀರಿ?


ಉ : ಹಂಪೆಯ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ನಾನು ಮತ್ತು ಸತ್ಯವಂತರಾವ್ ನೇತೃತ್ವದಲ್ಲಿ ೫೧ ಜನರು ಸೇರಿ ಸಿರಿಗೇರಿಯ ಬಳಿ ಹರಿಯುತ್ತಿರುವ ತುಂಗಭದ್ರಾ ಕೆಳಮಟ್ಟದ ಕಾಲುವೆ ನೀರನ್ನು ಆಂಧ್ರಕ್ಕೆ ಬಿಡುವುದು ಅಡ್ಡಗಟ್ಟಿ ಆ ನೀರನ್ನು ಆಯಕಟ್ಟು ಅಲ್ಲದ ಜಮೀನುಗಳಿಗೆ ಹರಿಸಿದೆವು. ಇದರಿಂದ ಬಂಧನಕ್ಕೆ ಒಳಗಾದೆವು. ೨೪ ದಿನಗಳ ಕಾಲ ಜೈಲಿನಲ್ಲಿ ಸೆರೆವಾಸ ಅನುಭವಿಸಿದೆವು.

೫. ಜೈಲಿನಲ್ಲಿ ನಿಮ್ಮ ಅನುಭವವೇನು?

ಉ : ನೀರಿನ ಸತ್ಯಾಗ್ರಹದ ಸಮಯದಲ್ಲಿ ನಮ್ಮನ್ನು ಜೈಲಿನಲ್ಲಿ ಹಾಕಿದ್ದರು, ಸುಮಾರು ೨೦-೩೦ ದಿನಗಳವರೆಗೆ ಅಲ್ಲಿ ಇರಿಸಿದ್ದರು. ಅಲ್ಲಿನ ಅಧಿಕಾರಿಗಳು ತೆಲುಗು, ತಮಿಳರಾಗಿದ್ದರಿಂದ ನಾವು ಕನ್ನಡಕ್ಕಾಗಿ ಹೋರಾಟ ಮಾಡುತ್ತಿದ್ದವರೆಂದು ಅವರು ನಮ್ಮನು ಕೇವಲವಾಗಿ ಕಾಣುತ್ತಿದ್ದರು. ಜೈಲಿನ ಖೈದಿಗಳನ್ನು ಮತ್ತು ನಮ್ಮನ್ನು ಒಂದೆಯಾಗಿ ಕಾಣುತಿದ್ದರು. ಕತ್ತಲೆಯ ಕೋಣೆಯಲಿ ಇಟ್ಟಿದ್ದರು.

೬. ಚುನಾವಣೆಯಲ್ಲಿ ಯಾವ ರೀತಿ ಭಾಗಿಯಾಗಿದ್ದೀರಿ?

ಉ : ಮಿಶ್ರಾ ತೀರ್ಪು ನಂತರ ಬಳ್ಳಾರಿಯಲ್ಲಿ ಚುನಾವಣೆಯನ್ನು ಘೋಷಿಸಿದರು. ಅದು ಬಳ್ಳಾರಿಯು ಆಂಧ್ರಕ್ಕೇ ಅಥವಾ ಕರ್ನಾಟಕಕ್ಕೆ ಸೇರಬೇಕೆಂಬ ಸವಾಲಾಗಿ ಮಾಡಿದ್ದರು. ಆಗ ಮುಂಡ್ಲೂರು ಗಂಗಪ್ಪ ಆಂಧ್ರ ಪರವಾಗಿ ಚುನಾವಣೆಯಲ್ಲಿ ನಿಂತಿದ್ದರು. ಕನ್ನಡಿಗರ ಪರವಾಗಿ ಹರಗಿನಡೋಣಿ ಸಣ್ಣಬಸವನಗೌಡರನ್ನು ನಿಲ್ಲಿಸಿದ್ದರು. ಚುನಾವಣೆಯಲ್ಲಿ ಸಣ್ಣಬಸವನಗೌಡರು ಗೆದ್ದರು. ಗಂಗಪ್ಪನವರಿಗೆ ಬಳ್ಳಾರಿ ನಗರದಲ್ಲಿ ತೆಲುಗರ ಮತ ಹೆಚ್ಚು ದೊರೆಯಿತು. ಆದರೆ ಸುತ್ತಮುತ್ತ ಹಳ್ಳಿಗರು ಕನ್ನಡ ಪರ ಮತ ಹಾಕಿದರು. ಇದರಿಂದ ಕನ್ನಡಕ್ಕೆ ಜಯ ದೊರೆಯಿತು ಬಳ್ಳಾರಿಯು ಕರ್ನಾಟಕಕ್ಕೆ ಸೇರಿತು.



ಶ್ರೀ ಕೂನಾ ಸಿದ್ದಪ್ಪ

೧. ಏಕೀಕರಣ ಚಳವಳಿಯಲ್ಲಿ ಭಾಗವಹಿಸಲು ಯಾರ ಪ್ರೇರಣೆಯಾಗಿತ್ತು?

ಉ : ಅಳವಂಡಿ ಶಿವಮೂರ್ತಿ ಸ್ವಾಮಿಗಳು, ಮಹಾದೇವ ಪಟ್ಟಣಶೆಟ್ಟಿ, ವಾಲಿ ಚನ್ನಪ್ಪ ಅವರು ಇಲ್ಲಿಗೆ ಒಂದು ಭಾಷಣಗಳನ್ನು ಮಾಡುತ್ತಿದ್ದರು. ಅವರ ಭಾಷಣಗಳ ಪ್ರೇರಣೆಯಿಂದ ನಾನು ಚಳವಳಿಯಲ್ಲಿ ಭಾಗವಹಿಸಿದೆ.

೨. ತುಂಗಭದ್ರಾ ಚಳವಳಿಯಲ್ಲಿ ಯಾವ ರೀತಿ ಪಾಲ್ಗೊಂಡಿದಿರಿ?

ಉ : ಪ್ರತಿಯೊಂದು ಹಳ್ಳಿಯಲ್ಲಿ ನೀರಿನ ಚಳವಳಿಯು ಪ್ರಾರಂಭವಾಯಿತು. ಆ ನಿಟ್ಟಿನಲ್ಲಿ ನಮ್ಮ ಗ್ರಾಮದಲ್ಲಿ ಅಮರೇಗೌಡರ ನೇತೃತ್ವದಲ್ಲಿ ಗ್ರಾಮದ ಎಲ್ಲಾ ಜನರು ಸೇರಿಕೊಂಡು ಆಂಧ್ರಕ್ಕೆ ಹೊಗುತ್ತಿದ್ದ ಗೇಣಿಕೆಹಾಳ್ ಹತ್ತಿರದ ಕಾಲುವೆ ಧ್ವಂಸ ಗೊಳಿಸುವ ಕಾರ್ಯದ ಮೂಲಕ ನೀರಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡೆ.

೩. ಜೈಲು ಶಿಕ್ಷೆಯನ್ನು ಅನುಭವಿಸಿದ್ದಿರಾ?

ಉ : ಹೌದು, ಕಾಲುವೆ ಧ್ವಂಸ ಮಾಡಿದ್ದಕ್ಕೆ ಜೈಲಿಗೆ ಹಾಕಿದ್ದರು.

೪. ಚುನಾವಣೆಯಲ್ಲಿ ಯಾವ ರೀತಿ ಭಾಗವಹಿಸಿದ್ದೀರಿ?

ಉ : ಬಳ್ಳಾರಿಯನ್ನು ನಿರ್ಣಯಿಸುವ ಚುನಾವಣೆ ಯಾಗಿತ್ತು. ಹಳ್ಳಿಗಳಲ್ಲಿ ನಾಯಕರು ಬಂದು ಕನ್ನಡ ಪರವಾಗಿ ಮತಚಲಾಯಿಸುವಂತೆ ಭಾಷಣಗಳಲ್ಲಿ ಹೇಳುತ್ತಿದ್ದರು. ನಮ್ಮ ಹಳ್ಳಿಯವರು ಯಾವಾಗಲೂ ಕನ್ನಡಕ್ಕಾಗಿ ಹೋರಾಟ ಮಾಡುತ್ತಿದ್ದವರು. ಚುನಾವಣೆಗೆ ನಾವು ಸಭೆ ಸೇರಿ ಕನ್ನಡ ಅಭ್ಯರ್ಥಿಯನ್ನು ಗೆಲ್ಲಿಸಬೇಕು ಎಂದು ಎಲ್ಲಾ ಒಂದೇ ಮಾತಿನ ಮೂಲಕ ಚುನಾವಣೆಯನ್ನು ಎದುರಿಸಿದೆವು. ನಮ್ಮ ಅಭ್ಯರ್ಥಿಯ ಗೆಲುವಿನಿಂದ ಎಲ್ಲರಿಗೂ ಸಮಾಧಾನವಾಗಿ ಬಳ್ಳಾರಿಯು ಕರ್ನಾಟಕಕ್ಕೆ ಸೇರಿದೆ ಎಂಬುದು ಸಂತೋಷದ ವಿಷಯವಾಗಿತ್ತು.

ಶ್ರೀ ಎಂ. ಶಿವಪ್ಪ ಮೇಟಿ

೧. ಏಕೀಕರಣ ಚಳವಳಿಯಲ್ಲಿ ಭಾಗವಹಿಸಿದ್ದಿರಾ, ಯಾವ ರೀತಿಯಲ್ಲಿ?



ಉ : ಏಕೀಕರಣ ಚಳವಳಿಯಲ್ಲಿ ಭಾಗವಹಿಸಿದ್ದೆ. ನಮ್ಮ ಹಳ್ಳಿಯಲ್ಲಿ ಪ್ರತಿಯೊಂದು ಮನೆಯಿಂದ ಒಬ್ಬರು ಚಳವಳಿಯಲ್ಲಿ ಇರಬೇಕೆಂದು ಹೇಳಿದ್ದರು ಆ ಮೂಲಕ ನಾನು ಚಳವಳಿಯಲ್ಲಿ ಭಾಗವಹಿಸಿದೆ.

೨. ಚಳವಳಿಯನ್ನು ಯಾವ ರೀತಿ ಸಂಘಟಿಸಿದ್ದಿರಿ?

ಉ : ನಮ್ಮ ಹಳ್ಳಿಯಲ್ಲಿ ಅನೇಕ ಯುವಕರು ಸೇರಿ ಯುವಕ ಸಂಘ ಮಾಡಿ ಕೊಂಡಿದ್ದೆವು. ಆ ಮೂಲಕ ಎಲ್ಲಾ ವಿಚಾರಗಳನ್ನು, ವಿಷಯುಗಳನ್ನು ಪಡೆದುಕೊಂಡು ಒಗ್ಗಟ್ಟಾಗಿ ಹೋರಾಟಕ್ಕೆ ಸಿದ್ಧರಾಗುತ್ತಿದ್ದೆವು.

೩. ಬಸ್ಸು ಚಳವಳಿಯನ್ನು ಮಾಡುವ ಉದ್ದೇಶವೇನಾಗಿತ್ತು?

ಉ : ಬಸ್ಸು ಚಳವಳಿಯು ನಮ್ಮ ಹಳ್ಳಿಯಲ್ಲಿ ನಡೆದ ಮೊದಲ ಚಳವಳಿಯಾಗಿತ್ತು. ಏಕೆಂದರೆ ನಾವು ಕನ್ನಡ ಪ್ರದೇಶದವರು. ಆದರೆ ಇಲ್ಲಿಗೆ ಬರುವ ಬಸ್ಸಿನಲ್ಲಿ ಕನ್ನಡ ನಾಮಫಲಕವಿರಲಿಲ್ಲ. ಇದರಿಂದ ಕನ್ನಡ ನಾಡಿನಲ್ಲಿ ಕನ್ನಡಕ್ಕೆ ಸ್ಥಾನವಿಲ್ಲದಿದ್ದರೆ ಹೇಗೆ ಎಂದು ಯೋಚಿಸಿ ನಾವುಗಳು ಬಸ್ಸಿನಲ್ಲಿ ಕನ್ನಡ ನಾಮಫಲಕವಿರಬೇಕೆಂದು ಹೋರಾಟ ಮಾಡಿದೆವು. ಇದು ಬಳ್ಳಾರಿಯಲ್ಲಿ ನಮ್ಮ ಹಳ್ಳಿಯಲ್ಲಿ ಮಾತ್ರ ನಡೆದ ಚಳವಳಿಯಾಗಿತ್ತು. ಕೊನೆಗೆ ಅಳವಂಡಿ ಶಿವಮೂರ್ತಿ ಸ್ವಾಮಿಗಳು ಬಂದು ಚಳುವಳಿಯನ್ನು ಸಫಲಗೊಳಿಸಿ ಬಸ್ಸಿನಲ್ಲಿ ಕನ್ನಡ ನಾಮಫಲಕ ಹಾಕುವಂತೆ ಮಾಡಿದರು.

೪. ಇದು ಅಲ್ಲದೇ ಮತ್ತೆ ಬೇರೆ ಯಾವ ಕಾರ್ಯ ಅಥವಾ ಚಳವಳಿ ಮಾಡಿದ್ದೀರಾ?

ಉ : ಮತ್ತೊಂದು ಚಳವಳಿಯನ್ನು ಮಾಡಿದ್ದೆವು ಅದು ಆಂಧ್ರದ ನೀಲಂ ಸಂಜೀವರೆಡ್ಡಿಯವರ ರೈಲು ಮೂಲಕ ಈ ಕಡೆಗೆ ಬರುತ್ತಿರುವ ವಿಷಯ ತಿಳಿದು ಅವರು ಬಂದ ರೈಲನ್ನು ಅರ್ಧಗಂಟೆಗಳ ನಿಲ್ಲಿಸಿ ಆಂಧ್ರಕ್ಕೆ ಹಿಂತಿರುಗಿರಿ ಎಂದು ಘೋಷಣೆಗಳನ್ನು ಕೂಗಿದೆವು. ಈ ಚಳವಳಿಯಲ್ಲಿ ಸುಮಾರು ೧೦೦ ಜನರು ಭಾಗಿಯಾಗಿದ್ದರು.

೫. ನೀರಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದೀರಾ?

ಉ : ನೀರಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದೆ, ನಮ್ಮ ಹಳ್ಳಿಯಿಂದ ಅನೇಕ ಬ್ಯಾಚ್‌ಗಳ ಮೂಲಕ ಹೋಗಿ ಈ ನೀರಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡೆವು. ಆ ಬ್ಯಾಚ್‌ನಲ್ಲಿ ಮೂರನೇ ಬ್ಯಾಚಿನಲ್ಲಿ ನಾನು ಮತ್ತು ನಮ್ಮ ಬ್ಯಾಚ್ ಕೊಂಚಿಗೇರಿಯಲ್ಲಿ ಕಾಲುವೆಗೆ ಅಡ್ಡಗಟ್ಟಿ ಹೋರಾಟವನ್ನು ಮಾಡಿದೆವು.

೬ ಜೈಲು ಶಿಕ್ಷೆಯನ್ನು ಅನುಭವಿಸಿದ್ದೀರಾ?

ಉ : ಕಾಲುವೆ ಅಡ್ಡಗಟ್ಟಿದಕ್ಕಾಗಿ ಸರ್ಕಾರದವರು ಬಳ್ಳಾರಿ ಜೈಲಿಗೆ ಹಾಕಿದರು. ಅದರಲ್ಲಿ ಅನೇಕ ಜನರು ಈ ವಿಷಯಕ್ಕಾಗಿ ಜೈಲಿನಲ್ಲಿ ಇದ್ದರು. ಆಂಧ್ರದ ಅಧಿಕಾರಿಗಳು ಜೈಲಿನಲ್ಲಿ ಇದ್ದರು. ಇದರಿಂದ ನಮಗೆ ಬಹಳ ತೊಂದರೆ ಕೊಟ್ಟರು. ಊಟದಲ್ಲಿ ಹುಳಗಳು ಇದ್ದವು. ಸ್ಟ್ರೀಟ್ ಲೈಟ್ ಎಲ್ಲಾ ತೆಗೆದು ಲ್ಯಾಟೀನ್‌ಗಳನ್ನು ಇಡುತ್ತಿದ್ದರು. ಮಾಡುತ್ತಿದ್ದರು ಕತ್ತಲ ಕೋಣೆಯಲ್ಲಿ ಇಡುತ್ತಿದ್ದರು. ನಮ್ಮನ್ನು ಒಂದು ಪ್ರಾಣಿಯಂತೆ ವರ್ತಿಸಿದರು.

೭ ಚುನಾವಣೆಯಲ್ಲಿ ಯಾವ ರೀತಿ ಭಾಗಿಯಾಗಿದ್ದೀರಿ?


ಉ : ಚುನಾವಣೆಯು ಬಹಳ ಗಂಭೀರವಾದ ವಿಚಾರವಾಗಿತ್ತು. ಇದು ಕನ್ನಡ ಮತ್ತು ತೆಲುಗು ಜನರ ನಡುವೆ ನಡೆಯುವ ಚುನಾವಣೆಯಾಗಿತ್ತು. ನಮ್ಮ ಹಳ್ಳಿಯಲ್ಲಿ ಎಲ್ಲಾ ಯುವಕರು ಮತ್ತು ಹಿರಿಯರು ಸೇರಿ

ಚುನಾವಣೆಯಲ್ಲಿ ಕನ್ನಡದ ಅಭ್ಯರ್ಥಿಯಾದ ಹರಗಿನಡೋಣಿ ಸಣ್ಣಬಸಪ್ಪನವರನ್ನು ಗೆಲ್ಲಿಸಬೇಕೆಂದು ತೀರ್ಮಾನ ಮಾಡಿದ್ದೆವು. ಅದೇ ರೀತಿಯಾಗಿ ಕನ್ನಡದವರ ಗೆಲುವಾಗಿ, ಬಳ್ಳಾರಿಯು ಕರ್ನಾಟಕಕ್ಕೆ ಸೇರಿತು.

ಶ್ರೀ ಪಾಟೀಲ್ ದೊಡ್ಡನಗೌಡ

೧. ಏಕೀಕರಣದ ಚಳವಳಿಯಲ್ಲಿ ಪಾಲ್ಗೊಂಡಿದ್ದೀರಾ? ಯಾವಾಗ?

ಉ : ಪಾಲ್ಗೊಂಡಿದ್ದೆ, ನೀರಿನ ಸತ್ಯಗ್ರಾಹ ಮೂಲಕ ಏಕೀಕರಣದಲ್ಲಿ ಭಾಗವಹಿಸಿದ್ದೆ



೨. ಕೇವಲ ಏಕೀಕರಣ ಚಳವಳಿಯಲ್ಲಿ ಮಾತ್ರವಾ ಮತ್ತೆ ಬೇರೆಯಾವ ಚಳವಳಿಗಳು ನಡೆಯಲಿಲ್ಲವೇ?

ಉ : ಏಕೀಕರಣ ಚಳವಳಿಯ ಭಾಗವಾಗಿ ನಮ್ಮ ಹಳ್ಳಿಯಲ್ಲಿ ಬಸ್ ಚಳುವಳಿ ನಡೆಯಿತು. ಅದು ಕನ್ನಡ ನಾಮಫಲಕ ಹಾಕಬೇಕು ಎನ್ನುವ ಉದ್ದೇಶಕ್ಕಾಗಿ ನಡೆಯಿತು. ಇದು ಅಲ್ಲದೇ ಆಂಧ್ರದ ನೀಲಂ ಸಂಜೀವರೆಡ್ಡಿಯು ಬರುತ್ತಿದ್ದ ರೈಲನ್ನು ೩೦ ನಿಮಿಷಗಳು ತಡೆದು ಚಳುವಳಿ ಮಾಡಿದ್ದೆವು.

೩. ಹೋರಾಟ ಮಾಡುವುದಕ್ಕೆ ಯಾರಿಂದ ಪ್ರೇರಣೆ ಸಿಕ್ಕಿತು?

ಉ : ಶ್ರೀ ಅಳವಂಡಿ ಶಿವಮೂರ್ತಿಸ್ವಾಮಿಗಳ ಪ್ರೇರಣೆಯಿಂದ ಭಾಗಿಯಾಗಿದ್ದೆ.


೪. ನೀರಿನ ಚಳವಳಿಯಲ್ಲಿ ಯಾರ ಮುಖಂಡತ್ವದಲ್ಲಿ ಸೇರಿದ್ದೀರಿ?

ಉ : ನೀರಿನ ಚಳವಳಿಯಲ್ಲಿ ಸಿ.ಎಂ. ರೇವಣಸಿದ್ದಯ್ಯ ಮತ್ತು ಸತ್ಯವಂತ ರಾವ್ ಅವರ ಮುಖಂಡತ್ವದಲ್ಲಿ ಕಾಲುವೆಯನ್ನು ಅಡ್ಡಗಟ್ಟುವುದರ ಮೂಲಕ ನೀರಿನ ಚಳವಳಿಯಲ್ಲಿ ಭಾಗಿಯಾಗಿದ್ದೆವು.

೫. ನೀವು ಬಂಧನಕ್ಕೆ ಒಳಗಾಗಿದ್ದೀರಾ?

ಉ : ನೀರಿನ ಸತ್ಯಗ್ರಾಹದಲ್ಲಿ ಪಾಲ್ಗೊಂಡದ್ದರಿಂದ ಬಂಧಿಸಿ ಬಳ್ಳಾರಿ ಜೈಲಿನಲ್ಲಿ ಇಟ್ಟರು. ಸುಮಾರು ೩೦ ದಿನಗಳ ಕಾಲ ಜೈಲಿನಲ್ಲಿ ಇದ್ದೆವು.

ಶ್ರೀ ಮುದೇನೂರ ಸಂಗಣ್ಣ



೧. ಸಂಗಣ್ಣನವರೆ ನೀವು ಯಾವಾಗಿನಿಂದ ಹೋರಾಟದ ಪ್ರವೃತ್ತಿಯನ್ನು ಬೆಳೆಸಿಕೊಂಡಿರಿ?

ಉ : ನಾನು ವಿದ್ಯಾರ್ಥಿಯಾಗಿದ್ದಾಗಿನಿಂದ ಅ. ಕ. ರಾ. ನಿ. ಪರಿಷತ್ತಿನ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ಹೋರಾಟ ಪ್ರಾರಂಭಿಸಿದೆ.

೨. ಬಳ್ಳಾರಿ ಏಕೀಕರಣ ಹೋರಾಟದಲ್ಲಿ ಪ್ರೇರಣೆ ದೊರೆತದ್ದು ಯಾರಿಂದ.

ಉ : ನಾನು ಮೊದಲಿನಿಂದಲೂ ಕನ್ನಡ ಅಭಿಮಾನಿಯಾಗಿದ್ದೆ. ಜಾನಪದ ನನ್ನ ಆಸಕ್ತಿಯ ರಂಗವಾಗಿತ್ತು. ಅ ಮೂಲಕ ಕನ್ನಡ ಭಾಷೆಯನ್ನು ಉಳಿಸುವ ಹೋರಾಟ ಪ್ರಾರಂಭವಾದ ಅನೇಕ ನಾಯಕರು ಕವಿಗಳ ಪ್ರೇರಣೆಯಿಂದ ಚಳುವಳಿಯಲ್ಲಿ ಧುಮುಕಿದೆ.

೩. ಆಯೋಗಗಳು ಬಂದಾಗ ಯಾವ ರೀತಿ ಭಾಗವಹಿಸಿದಿರಿ?

ಉ : ಯಾವುದೇ ಅಯೋಗ ಬಂದರೂ ನಾವುಗಳು ಬಳ್ಳಾರಿಯಲ್ಲಿ ಕರ್ನಾಟಕ ಕ್ರಿಯಾ ಸಮಿತಿಯನ್ನು

ಮಾಡಿಕೊಂಡಿದ್ದೆವು ಅಲ್ಲಿ ಎಲ್ಲಾ ನಾಯಕರು ಸೇರಿಕೊಂಡು ಕನ್ನಡಪರ ನಿಲುವುಗಳನ್ನು ಮಾಡಿಕೊಂಡು ಎಲ್ಲಾ ಸದಸ್ಯರ ಜನರ ಬೆಂಬಲವನ್ನು ಪಡೆದುಕೊಂಡು ಆಯೋಗಕ್ಕೆ ವರದಿಯನ್ನು ಕೊಡುತ್ತಿದ್ದೆವು. ಮಿಶ್ರಾ ಆಯೋಗಕ್ಕೆ ವರದಿಯನ್ನು ಮುಂಚೆಯಿಂದಲೇ ಸಿದ್ಧತೆ ಮಾಡಿಕೊಂಡೆವು. ಎಲ್ಲರ ಪರವಾಗಿ ಕೊ.ಚೆನ್ನಬಸಪ್ಪನವರು ಮನವಿಯನ್ನು ಕೊಡುತ್ತಿದ್ದರು.

೪. ಫಜಲ್ ಅಲಿಯವರ ವರದಿಯನ್ನು ಯಾವ ರೀತಿ ಪ್ರತಿಭಟಿಸಿದಿರಿ?

ಉ : ಫಜಲ್ ಆಲಿಯ ವರದಿಯಲ್ಲಿ ಬಳ್ಳಾರಿ, ಸಿರುಗುಪ್ಪ, ಹೊಸಪೇಟೆಯನ್ನು ಆಂಧ್ರಕ್ಕೆ ಕೊಡಬೇಕು ಎಂದು ತಿಳಿಸಿದರು. ಇದು ಬಹಳ ಅನ್ಯಾಯ ಎಂದು ನಮಗೆಲ್ಲ ಅನ್ಯಾಯವಾಗಿದೆ ಎಂದು ತಿಳಿದು, ಹಂಪೆಯಲ್ಲಿ ನಡೆದ ಸಭೆಯಲ್ಲಿ ಕರ್ನಾಟಕ ರಕ್ಷಣ ಮಂಡಳಿಯನ್ನು ಸ್ಥಾಪಿಸಿ ಅ ಮೂಲಕ ಅಸಹಾಕಾರ ಚಳುವಳಿಯನ್ನು ಪ್ರಾರಂಭಿಸಿದೆವು. ಬಳ್ಳಾರಿ ಸುತ್ತಮುತ್ತಲ ಎಲ್ಲಾ ಪ್ರದೇಶದಲ್ಲಿ ತುಂಗಭದ್ರ ನೀರನ್ನು ಆಂಧ್ರಕ್ಕೆ ಹೋಗುವ ಎಲ್ಲಾ ಕಾಲುವೆಯನ್ನು ದ್ವಂಸ ಮಾಡುವುದರ ಮೂಲಕ ಮತ್ತು ನೀರನ್ನು ಆಂಧ್ರಕ್ಕೆ ಬಿಡದಂತೆ ತಡೆಯುವ ನೀರಿನ ಸತ್ಯಾಗ್ರಹ ಮಾಡಿದೆವು. ಇದರಿಂದ ಕೇಂದ್ರ ಸರ್ಕಾರವು ಬಳ್ಳಾರಿಯು ಕರ್ನಾಟಕಕ್ಕೆ ಸೇರಿದೆ ಎಂದು ಘೋಷಿಸಿದ ನಂತರವೇ ಈ ಹೋರಾಟವನ್ನು ನಿಲ್ಲಿಸಿದೆವು.

೫. ನೀವು ಜೈಲಿನಲ್ಲಿ ಬಂಧಿಗೊಳಗಾಗಿದ್ದೀರಾ. ಯಾವಾಗ?

ಉ : ತುಂಗಭದ್ರಾ ಅಣೆಕಟ್ಟಿನ ನೀರಿನ ಕಾಲುವೆ ಮೂಲಕ ಆಂಧ್ರ ಪ್ರದೇಶಕ್ಕೆ ಹರಿಸದಂತೆ ನಡೆದ ಸಾಂಕೇತಿಕ ಹೋರಾಟದಲ್ಲಿ ನೇತೃತ್ವವಹಿಸಿದ್ದಕ್ಕೆ ಅವರ ಬಂಧನಕ್ಕೆ ಒಳಗಾಗಿ ಸುಮಾರು ೩೦ ದಿನಗಳ ಕಾಲ ಜೈಲಿನಲ್ಲಿ ಇದ್ದೆವು.

೬. ಬಳ್ಳಾರಿಯಲ್ಲಿ ನಡೆದ ಚುನಾವಣೆಯ ಬಗ್ಗೆ ತಿಳಿಸಿರಿ?

ಉ : ಬಳ್ಳಾರಿಯಲ್ಲಿ ನಡೆದ ಚುನಾವಣೆಯು ಒಂದು ಸವಾಲಗಿತ್ತು. ಮುಂಡ್ಲೂರು ಗಂಗಪ್ಪನವರು ಆಂಧ್ರದ ಅಭಿಮಾನಿಯಾಗಿದ್ದರು, ಅವರು ಸಂಸತ್ತಿನಲ್ಲಿ ಸವಾಲಾಗಿ ಚುನಾವಣೆಯನ್ನು ಕರೆದರು. ಇದರಿಂದ ನಮ್ಮ ನಾಯಕರುಗಳು ಸೇರಿಕೊಂಡು ಅವರ ವಿರುದ್ಧ ಯಾರನ್ನು ನಿಲ್ಲಿಸಬೇಕು ಎಂದು ಆಲೋಚನೆ ಮಾಡಿ, ನಂತರ ಹರಗಿನಡೋಣಿ ಸಣ್ಣಬಸಪ್ಪಗೌಡರನ್ನು ಕನ್ನಡದ ಅಭ್ಯರ್ಥಿಯಾಗಿ ನಿಲ್ಲಿಸಿದರು. ಅವರ ಪರವಾಗಿ ಅನೇಕ ಗಣ್ಯರು ಪ್ರಚಾರ ಮಾಡಿದರು. ಏಕೆಂದರೆ ಗಂಗಪ್ಪನವರು ಗೆದ್ದರೆ ಬಳ್ಳಾರಿ ಆಂಧ್ರಕ್ಕೆ ಎಂದು, ಸೋತರೆ ಕರ್ನಾಟಕಕ್ಕೆ ಎಂದಿದ್ದರು. ಅದಕ್ಕಾಗಿ ಎಲ್ಲರು ಶ್ರಮಿಸಿದರು. ಇದು ಇಡೀ ಕನ್ನಡದ ಸ್ವಾಭಿಮಾನದ ವಿಚಾರವಾಗಿತ್ತು. ಬಳ್ಳಾರಿಯ ಅಳಿವೂ ಉಳಿವಿನ ಕಣವಾಗಿ ಪರಿವರ್ತಿತವಾಗಿತ್ತು. ಕೊನೆಗೂ ಕನ್ನಡದ ಅಭ್ಯರ್ಥಿಯಾದ ಹರಗಿನಡೋಣಿ ಸಣ್ಣಬಸಣ್ಣಗೌಡರು ಗೆದ್ದು ಬಳ್ಳಾರಿಯಲ್ಲಿ ಕನ್ನಡವನ್ನು ಉಳಿಸಿದರು.

೬

ಉಪಸಂಹಾರ

ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಬಳ್ಳಾರಿ ಜಿಲ್ಲೆಯು ಪ್ರಮುಖ ಪಾತ್ರವಹಿಸಿದೆ. ಮದ್ರಾಸ್ ಪ್ರಾಂತ್ಯದ ಆಡಳಿತ ಕೇಂದ್ರವಾಗಿದ್ದ ಬಳ್ಳಾರಿಯು ರಾಜಕೀಯ, ಆರ್ಥಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕವಾಗಿ ಮೆರೆದ ಜಿಲ್ಲೆಯಾಗಿದೆ. ಬಳ್ಳಾರಿಯು ಕರ್ನಾಟಕದ ಗಡಿ ಮತ್ತು ಆಂಧ್ರದ ಗಡಿ ಭಾಗಗಳಿಗೆ ಹೊಂದಿಕೊಂಡಿದೆ. ಈ ಎಲ್ಲಾ ಪ್ರದೇಶಗಳು ಮದ್ರಾಸ್ ಪ್ರಾಂತದ ಆಡಳಿತಕ್ಕೆ ಒಳಪಟ್ಟಿದ್ದವು. ಈ ಭಾಗದಲ್ಲಿ ಭಾರತದಲ್ಲಿ ಪ್ರಪ್ರಥಮವಾಗಿ ಪ್ರಾಂತೀಯ ರಾಜ್ಯಗಳ ರಚನೆಯ ಹೋರಾಟವನ್ನು ಪ್ರಾರಂಬಿಸಲಾಯಿತು. ಈ ದೃಷ್ಟಿಯಿಂದ ಆಗ ಬಳ್ಳಾರಿ ಜಿಲ್ಲೆಯು ಕರ್ನಾಟಕ ಏಕೀಕರಣದ ಮೊದಲ ಹೆಜ್ಜೆ ಎಂದು ಕರೆಯಲಾಗಿದೆ. ಬ್ರಿಟಿಷ್ ಆಧಿಪತ್ಯದಲ್ಲಿ ಇರುವ ಕಾಲದಲ್ಲಿ ಕನ್ನಡ ಮಾತನಾಡುವರೆಲ್ಲರೂ ಒಂದುಗೂಡಬೇಕೆಂದು ಏಕೀಕಣರಕ್ಕೆ ಮುಂದಾದರು. ಬ್ರಿಟೀಷರು ಬಳ್ಳಾರಿಯನ್ನು ಸಂಪತ್ತಿನ ದೃಷ್ಟಿಯಿಂದ ತಮ್ಮ ಅಧೀನಕ್ಕೆ ತೆಗೆದುಕೊಂಡಿದ್ದರು. ಈ ಪ್ರದೇಶದಲ್ಲಿ ದೊರೆಯುತ್ತಿದ್ದ ಖನಿಜ ಸಂಪತ್ತು ಅವರಿಗೆ ಮುಖ್ಯವಾಗಿತ್ತು. ಬ್ರಿಟೀಷರ ಅಧಿಕಾರದಿಂದ ಬಿಡಿಸಿಕೊಳ್ಳಲು ಸ್ವಾತಂತ್ರ್ಯ ಹೋರಾಟ ಹಮ್ಮಿಕೊಳ್ಳಲಾಯಿತು. ನಂತರ ಒಂದೇ ಭಾಷೆಯಾಡುವ ಜನರೆಲ್ಲರು ಒಂದುಗೂಡಬೇಕೆಂದು ಏಕೀಕರಣಕ್ಕೆ ಮುಂದಾಗಿ ಕರ್ನಾಟಕ ರಾಜ್ಯದ ಉದಯಕ್ಕೆ ನಾಂದಿಯಾಯಿತು.

ಪ್ರಸ್ತುತ ಆಂಶಿಕ ಪ್ರಬಂಧವು 'ಕರ್ನಾಟಕ ಏಕೀಕರಣದಲ್ಲಿ ಬಳ್ಳಾರಿ ಜಿಲ್ಲೆ' (ಸಬಾಲ್ಟ್ರನ್ ನೆಲೆಯ ಅಧ್ಯಯನ) ಎಂಬ ಶೀರ್ಷಿಕೆಯನ್ನು ಹೊಂದಿದೆ. ಪ್ರಸ್ತಾವನೆಯ ರೂಪದಲ್ಲಿ ಬಳ್ಳಾರಿ ಜಿಲ್ಲೆಯ ಭೌಗೋಳಿಕ ಪರಿಚಯ ಕೊಡುವುದರ ಜೊತೆಗೆ ಬಳ್ಳಾರಿ ಎಂಬ ಹೆಸರು ಹೇಗೆ ಬಂತು ಎಂಬ ವಿಷಯದ ಬಗ್ಗೆ ಚರ್ಚಿಸಲಾಗಿದೆ. ಹಾಗೆಯೇ ಬಳ್ಳಾರಿಯಲ್ಲಿ ಏಕೀಕರಣಕ್ಕೆ ಕಾರಣವಾದ ಚಾರಿತ್ರಿಕ ಅಂಶಗಳ ಬಗ್ಗೆ ಮತ್ತು ದ್ವಿ–ಭಾಷಿಕ ಭಾಗವಾದ ಬಳ್ಳಾರಿಯಲ್ಲಿ ಭಾಷೆಯ ಅಂಶವು ಯಾವ ರೀತಿ ಹೋರಾಟದಲ್ಲಿ ಸಹಕಾರಿಯಾಗಿದೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಪ್ರಬಂಧದ ವಿಷಯಕ್ಕೆ ಸಂಬಂಧಿಸಿದಂತೆ ಅಧ್ಯಯನದ ಉದ್ದೇಶ, ಮಹತ್ವ ಮತ್ತು ವ್ಯಾಪ್ತಿಯ ವಿಶ್ಲೇಷಣೆಯನ್ನು ಸರಳ ಮತ್ತು ಸಂಕ್ಷಿಪ್ತ ರೀತಿಯಲ್ಲಿ ವಿವರಿಸಲಾಗಿದೆ.

ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಬಳ್ಳಾರಿಯು ಮೊದಲ ಹಂತವಾಗಿದೆ. ಬಳ್ಳಾರಿಯು ಕರ್ನಾಟಕದ ಭಾಗವಾಗಿ ಸೇರಲು ಅನೇಕ ಹಂತಗಳ ಪ್ರಯತ್ನವನ್ನು ಮಾಡಬೇಕಾಗಿತ್ತು. ಅವುಗಳ ವಿವರವನ್ನು ಮೂರನೇ ಅಧ್ಯಾಯದಲ್ಲಿ ವಿವರಿಸಲಾಗಿದೆ. ಭಾರತ ಸರ್ಕಾರವು ಭಾಷಾವಾರು ಪ್ರಾಂತಗಳ ರಚನೆಗೆ ಸಂಬಂಧಿಸಿದಂತೆ ಅನೇಕ ಆಯೋಗಗಳನ್ನು ರಚಿಸಿದರು. ಅವರಲ್ಲಿ ವಾಂಛೂ ಆಯೋಗ, ಎಸ್.ಕೆ. ಧರ್ ಆಯೋಗ, ತ್ರಿಮೂರ್ತಿ ಆಯೋಗಗಳು ಭಾಷವಾರು ಪ್ರಾಂತಗಳ ರಚನೆಯ ಸಾಧ್ಯಸಾಧ್ಯತೆಯನ್ನು ವರದಿಯಲ್ಲಿ ತಿಳಿಸಿದರು. ಆದರೆ ಬಳ್ಳಾರಿ ವಿಷಯವನ್ನು ಕೈಬಿಡಲಾಗಿತ್ತು. ಈ ಎಲ್ಲಾ ಆಯೋಗಗಳ ಮುಂದೆ ಬಳ್ಳಾರಿಯ ಜನರು, ನಾಯಕರು ತಮ್ಮನ್ನು ಕರ್ನಾಟಕಕ್ಕೆ ಸೇರಿಸಿರಿ ಎಂದು ಮನವಿಯನ್ನು ಮಾಡಿಕೊಂಡಿದ್ದರು, ಅಂತಿಮವಾಗಿ ಬಳ್ಳಾರಿಯ ಸಮಸ್ಯೆಯನ್ನು ಅರಿಯಲು ಮಿಶ್ರಾ ಆಯೋಗವನ್ನು ನೇಮಿಸಲಾಯಿತು. ಬಳ್ಳಾರಿಯ ಜನರು ತಮ್ಮ ಮನವಿಗಳನ್ನು ಮತ್ತು ಒಂದುಗೂಡಬೇಕೆಂದು ಮಾಡಿದ ಕಾರ್ಯಗಳನ್ನು ಈ ಆಧ್ಯಾಯದಲ್ಲಿ ತಿಳಿಸಲಾಗಿದೆ. ಪ್ರತಿಯೊಂದು ಹಂತದಲ್ಲೂ ಬಳ್ಳಾರಿ ನಾಯಕರು ಮತ್ತು ಜನಸಾಮಾನ್ಯರು ಆಯೋಗದ ಮುಂದೆ ಸ್ಪಂದಿಸಿದ ರೀತಿಯು ಶ್ಲಾಘನೀಯವಾಗಿದೆ.

ಚಳವಳಿಗಳು ಎಂದರೆ ನಾಯಕರು ಇರುತ್ತಾರೆ. ಬಳ್ಳಾರಿಯಲ್ಲಿ ಏಕೀಕರಣ ಚಳುವಳಿಯಲ್ಲಿ ಅನೇಕ ನಾಯಕರು ಭಾಗವಹಿಸಿ, ತಮ್ಮ ವರ್ಚಸ್ಸಿನಿಂದ ಹೋರಾಟವನ್ನು ಯಶಸ್ಸುಗೊಳಿಸಿದ್ದಾರೆ. ಅಂತಹವರಲ್ಲಿ ಕೆಲವರು ಬಳ್ಳಾರಿ ಜಿಲ್ಲೆಯಲ್ಲಿ ಇದ್ದಾರೆ. ಅವರ ಬಗ್ಗೆ ಮತ್ತು ಏಕೀಕರಣದ ಸಮಯದಲ್ಲಿ ಅವರು ಭಾಗವಹಿಸುವಿಕೆಯ ವಿವರವನ್ನು ನಾಲ್ಕನೇ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅಧ್ಯಾಯದ ಐದನೇ ಭಾಗವು, ಏಕೀಕರಣದಲ್ಲಿ ಭಾಗವಹಿಸಿದ ಜನಸಾಮಾನ್ಯರ ಕುರಿತಾಗಿದೆ. ಚಳವಳಿಗಳಲ್ಲಿ ಕೇವಲ ನಾಯಕರು ಮಾತ್ರ ಪ್ರಾಮುಖ್ಯತೆಯನ್ನು ಪಡೆದುಕೊಂಡಿರುತ್ತಾರೆ. ಅವರ ಹೊರಾಟದ ಸಮಯದಲ್ಲಿ

ಬೆಂಬಲವಾಗಿ ನಿಂತು ಯಶಸ್ಸಿಗೆ ಕಾರಣವಾದ ಜನರನ್ನು ಎಲ್ಲಿಯೂ ಪ್ರಸ್ತಾಪಿಸಿರುವುದಿಲ್ಲ. ಬಳ್ಳಾರಿಯ ಏಕೀಕರಣದ ಹೋರಾಟದಲ್ಲಿ ಅನೇಕ ಜನಸಾಮಾನ್ಯರು ಭಾಗವಹಿಸಿದರು. ಅವರನ್ನು ಗುರುತಿಸುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಏಕೀಕರಣದ ಸಮಯದಲ್ಲಿ ಜೈಲು ಸೇರಿದ ಕೆಲವು ಏಕೀಕರಣದ ಹೋರಾಟಗಾರರನ್ನು ಗುರುತಿಸಿ ಅವರ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ಅಧ್ಯಾಯದಲ್ಲಿ ಈ ಭಾಗವು ಪ್ರಮುಖವೆನಿಸಿದೆ, ಜನ ಸಾಮಾನ್ಯರನ್ನು ಹೋರಾಟಗಳ ಘಟನೆಗಳ ಮೂಲಕ ಗುರುತಿಸಲಾಗಿದೆ. ಅವರಲ್ಲಿ ಕೆಲವು ವ್ಯಕ್ತಿಗಳನ್ನು ಸಂದರ್ಶಿಸಿ ಅವರ ಅನುಭವದಲ್ಲಿ ಇದ್ದಂತಹ ಘಟನೆಗಳನ್ನು ಮತ್ತು ಅವರ ಜೊತೆಯಲ್ಲಿ ಹೋರಾಡಿದ ವ್ಯಕ್ತಿಗಳ ಹೆಸರುಗಳನ್ನು ತಿಳಿಸಲಾಗಿದೆ.

ಅಧ್ಯಾಯ ಆರನೆಯ ಭಾಗದಲ್ಲಿ ಪ್ರಸ್ತುತ ಬಳ್ಳಾರಿಯ ಬಗ್ಗೆ ವಿವರಿಸಲಾಗಿದೆ. ಏಕೀಕರಣಗೊಂಡ ನಂತರ ಬಳ್ಳಾರಿಯಲ್ಲಿ ನಡೆದ ಕೆಲವು ಕನ್ನಡಪರ ಹೋರಾಟಗಳನ್ನು ತಿಳಿಸಲಾಗಿದೆ. ಅದರಲ್ಲಿ ಗೋಕಾಕ್ ಚಳವಳಿಯು ಮಹತ್ವದ್ದಾಗಿದ್ದು, ಇಡೀ ರಾಜ್ಯದಲ್ಲೇ ಚಳವಳಿಯ ಪ್ರಸಾರವಾಗುವುದಕ್ಕೆ ಬಳ್ಳಾರಿಯಿಂದಲೇ ಚಾಲನೆಯನ್ನು ನೀಡಿದ್ದನ್ನು ವಿವರಿಸಲಾಗಿದೆ. ಇವು ಅರವತ್ತು, ಎಂಭತ್ತರ ದಶಕದಲ್ಲಿ ನಡೆದ ಚಳವಳಿಗಳಾಗಿದ್ದರೆ, ಇಪ್ಪತ್ತರ ದಶಕದಲ್ಲಿ ಬಳ್ಳಾರಿಯು ಮಹತ್ವವಾದ ಬದಲಾವಣೆಯನ್ನು ಕಂಡಿದೆ. ಅದು ರಾಜಕೀಯವಾಗಿ ಒಂದು, ನಿರ್ಣಾಯಕ ಸ್ಥಾನವನ್ನು ಪಡೆದುಕೊಂಡಿದೆ. ಇದರ ಬಗ್ಗೆ ಈ ಅಧ್ಯಯನದಲ್ಲಿ ವಿವರಿಸಲಾಗಿದೆ. ಸಂಸ್ಕೃತಿಯನ್ನು ಬೆಳೆಸುವ ನಿಟ್ಟಿನಲ್ಲಿ ಹಂಪಿ ಉತ್ಸವವನ್ನು ಆರಂಭಿಸಿದ್ದು, ಒಂದು ಐತಿಹಾಸಿಕವಾಗಿದೆ. ಇದು ಅಲ್ಲದೇ, ಹಂಪಿ ಪರಿಸರದಲ್ಲಿ ಕನ್ನಡ ಭಾಷೆಗೆ ಒತ್ತುಕೊಟ್ಟು ಅದರ ಅಭಿವೃದ್ಧಿಗಾಗಿ ಕನ್ನಡ ವಿಶ್ವವಿದ್ಯಾಲಯವನ್ನು ಇಲ್ಲಿ ಸ್ಥಾಪಿಸಿದ್ದು, ಬಳ್ಳಾರಿ ಚರಿತ್ರೆಯಲ್ಲಿ ಒಂದು ಮರೆಯಲಾಗದ ಅಂಶವಾಗಿದೆ. ಇಷ್ಟೆಲ್ಲವೂ ಒಂದು ಭಾಗವಾದರೆ, ಇಂದು ಬಳ್ಳಾರಿಯು ಜಾಗತಿಕ ರಂಗದಲ್ಲಿ ಹೆಸರು ಮಾಡಿದೆ. ಅದು ಇಲ್ಲಿನ ಖನಿಜ ಸಂಪತ್ತಿನ ಮೂಲಕ ಎನ್ನಬಹುದಾದರೆ, ಬೃಹತ್ ಪ್ರಮಾಣದ ಕೈಗಾರಿಕೆಗಳು ಮತ್ತೊಂದು ಅಂಶವಾಗಿದೆ. ಈ ಎಲ್ಲಾ ಅಂಶಗಳನ್ನು ಆರನೇ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಕರ್ನಾಟಕ ಏಕೀಕರಣವನ್ನು ಸಾಧಿಸಿಕೊಳ್ಳುವುದಕ್ಕೆ ಕರ್ನಾಟಕ ನಾಯಕರು ಸಾಂಘಿಕವಾದ ಹೋರಾಟವನ್ನು ಮಾಡಬೇಕೆಂದು ನಿರ್ಣಯಿಸಿ, ಸಂಘ ಸಂಸ್ಥೆಗಳನ್ನು ಪ್ರಾರಂಭಿಸಿದರು. ಆ ನಿಟ್ಟಿನಲ್ಲಿ ಅನೇಕ ಸಂಘ ಸಂಸ್ಥೆಗಳು ಕರ್ನಾಟಕದಲ್ಲಿ ಹುಟ್ಟಿಕೊಂಡವು. ಕರ್ನಾಟಕ ವಿದ್ಯಾವರ್ಧಕ ಸಂಘ, ಕರ್ನಾಟಕ ಸಭೆ, ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು ಹೀಗೆ ಹಲವು ಸಂಸ್ಥೆಗಳು ಏಕೀಕರಣದ ಸಮಯದಲ್ಲಿ ಕಾರ್ಯಗಳನ್ನು ರೂಪಿಸಿಕೊಂಡು, ಚಳವಳಿಗಳನ್ನು ಮಾಡಿದವು. ಅದೇ ರೀತಿಯಾಗಿ ಏಕೀಕರಣಕ್ಕಾಗಿ ಬಳ್ಳಾರಿಯಲ್ಲಿ, ಬಳ್ಳಾರಿ ಕರ್ನಾಟಕ ಕ್ರಿಯಾ ಸಮಿತಿ, ವೀರಶೈವ ವಿದ್ಯಾವರ್ಧಕ ಸಂಘ ಹಾಗೂ ಕರ್ನಾಟಕ ಸಾಹಿತ್ಯ ಪರಿಷತ್ತುಗಳು ಏಕೀಕರಣದ ಉದ್ದೇಶವನ್ನು ಮುಂದಿಟ್ಟುಕೊಂಡು ಚಳವಳಿಯಲ್ಲಿ ಭಾಗವಹಿಸಿದವು. ಈ ಎಲ್ಲಾ ಸಂಘಗಳ ಹುಟ್ಟು, ಉದ್ದೇಶ ಮತ್ತು ಅವುಗಳ ಕಾರ್ಯವನ್ನು ಈ ಏಳನೇ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅಂತಿಮ ಅಧ್ಯಾಯದಲ್ಲಿ ಬಳ್ಳಾರಿಯಲ್ಲಿ ಏಕೀಕರಣಕ್ಕಾಗಿ ಹೋರಾಡಿದ ಮಹನೀಯರ ಸಂದರ್ಶನವನ್ನು ವಿವರಿಸಲಾಗಿದೆ. ಅವರ ಅನುಭವದ ಮಾತುಗಳನ್ನು ಇಲ್ಲಿ ಅಕ್ಷರ ರೂಪದಲ್ಲಿ ವಿವರಿಸಲಾಗಿದೆ.

ಒಟ್ಟಾರೆಯಾಗಿ ಕರ್ನಾಟಕ ಏಕೀಕರಣದ ಸಮಯದಲ್ಲಿ ಬಳ್ಳಾರಿಯು ಮಹತ್ವವಾದ ಸಾಧನೆಯನ್ನು ಮಾಡಿದೆ. ಏಕೀಕರಣ ಆಗುವುದಕ್ಕೆ ಮೂರು ವರ್ಷ ಮುಂಚೆ ಕರ್ನಾಟಕ ಪ್ರಾಂತ್ಯದಲ್ಲಿ ಸೇರಿದ ಮೊದಲನೇಯ ಜಿಲ್ಲೆಯಾಗಿದೆ. ಏಕೀಕರಣದ ನಂತರವು ಅನೇಕ ಚಳವಳಿಯಲ್ಲಿ ಬಳ್ಳಾರಿಯು ಸಕ್ರಿಯವಾಗಿ ಭಾಗವಹಿಸಿ ತನ್ನ ಕನ್ನಡದ ಅಭಿಮಾನವನ್ನು ಇಂದಿಗೂ ಉಳಿಸಿಕೊಂಡು ಬಂದಿದೆ. ಆದರೆ ಬಳ್ಳಾರಿಯು ತನ್ನ ಹಿಂದಿನ ವಿಶಾಲವಾದ ಭೂ-ಪ್ರದೇಶವನ್ನು ಕಳೆದುಕೊಂಡಿದೆ. ಆ ಪ್ರದೇಶಗಳನ್ನು ಕರ್ನಾಟಕದಲ್ಲಿ ಸೇರಿಸುವುದಕ್ಕೆ ರಾಜ್ಯದ ನಾಯಕರು ಪ್ರಯತ್ನಿಸಿ, ಗಡಿ ಭಾಗದ ಕನ್ನಡಿಗರ ಕನಸನ್ನು ಸಾಕಾರಗೊಳಿಸಬೇಕಾಗಿದೆ.

ಈ ದೃಷ್ಟಿಯಲ್ಲಿ ನನ್ನ ಸಂಶೋಧನಾ ವಿಷಯವನ್ನು ಕೇಂದ್ರೀಕರಿಸಿಕೊಂಡು ಮುನ್ನಡೆಯಾಗಿದೆ. ಮುಖ್ಯವಾಗಿ ಈ ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ದಾಖಲೆಗಳು, ಆಧಾರಗಳು ಪ್ರಕಟಗೊಂಡು ಚರ್ಚೆಗೆ ಒಳಗಾಗಿವೆ. ಆದರೆ, ನನ್ನ ಅಧ್ಯಯನದ ಮುಖ್ಯ ಉದ್ದೇಶವೆಂದರೆ ಈ ಜಿಲ್ಲೆ ಏಕೀಕರಣದಲ್ಲಿ ಜನಸಾಮಾನ್ಯರು ವಹಿಸಿದ ಪಾತ್ರದ ಬಗ್ಗೆ ಹೆಚ್ಚಿನ ಒತ್ತನ್ನು ನೀಡಲು ಹಂಬಲಿಸಲಾಗಿದೆ. ಕೆಳಸ್ತರದ ಚರಿತೆಗೆ ಹೆಚ್ಚು ಒತ್ತು ನೀಡುತ್ತಿರುವ ಇಂದಿನ ಸನ್ನಿವೇಶದಲ್ಲಿ ಇಂತಹ ಅಧ್ಯಯನಗಳು ಹೆಚ್ಚು ಮಹತ್ವವೆನಿಸುತ್ತವೆ. ಬಳ್ಳಾರಿ ಏಕೀಕರಣ ಕುರಿತು ಈ ವರೆಗೂ ಬಂದಿರುವ ಸಂಶೋಧನಾತ್ಮಕವಾಗಿ ಉಲ್ಲೇಖವಾಗದ ವ್ಯಕ್ತಿಗಳನ್ನು ನನ್ನ ಸಂಶೋಧನಾ ಅವಧಿಯಲ್ಲಿ ಸಂದರ್ಶಿಸಿ ಆಧಾರ ಸಮೇತವಾಗಿ ನಿರೂಪಿಸಲು ಬಯಸಲಾಗಿದೆ. ಈ ಹಂತದಲ್ಲಿ ಸ್ವಲ್ಪ ಪಮಾಣದ ತೃಪ್ತಿ ಕಾಣುತ್ತೇನೆ. ಈ ವಿಷಯ ಕುರಿತು ಅಧ್ಯಯನ ಮಾಡುವ ದೃಷ್ಟಿಕೋನಗಳು ಇನ್ನೂ ಹಲವಾರು. ನನ್ನ ಅಧ್ಯಯನ ಮತ್ತು ಕಾಲದ ಮಿತಿಯಿಂದಾಗಿ ಇಷ್ಟಕ್ಕೆ ಅಧ್ಯಯನವನ್ನು ಸೀಮಿತಗೊಳಿಸಿಕೊಂಡು ಅಂತಿಮಗೊಳಿಸಲಾಗಿದ.

ಅನುಬಂಧ ಒಂದು

ಗ್ರಂಥ ಸೂಚಿ

ಗ್ರಂಥ ಸೂಚಿ

೧ ಅನಂತರಾಮರಾವ್. ಕೆ. (ಪ್ರಸಂ.) ಸುವರ್ಣ ಕರ್ನಾಟಕ ದರ್ಶನ (೫೦ ಸಂವತ್ಸರಗಳು)

೨. ಅಲ್ಲಮಪ್ರಭು ಬೆಟ್ಟದೂರು, ಪಾಟೀಲ್ ಹೆಚ್.ಎಸ್., ತಿರುಳ್ಗನ್ನಡ ಸಮಿಸಂಚಿಕೆ, ಕೊಪ್ಪಳ ೧೯೯೩.

೩. ಎಚ್ಚೆಸ್ಕೆ (ಸಂ.), ಅವಲೋಕನ, ಕರ್ನಾಟಕ ಪರಂಪರೆಯ ಸಮೀಕ್ಷೆ, ಬೆಂಗಳೂರು

೪. ಕಕ್ಕಿಲಾಯ. ಬಿ.ಬಿ., ಭಾರತಕ್ಕೊಂದು ಬಯಲುದಾರಿ, (ಸುವರ್ಣೋತ್ಸವ ಮಾಲಿಕೆ) ೧೯೯೭

೫. ಕಾಲು ಶತಮಾನ ಕಂಡ ಕನ್ನಡ ಪತ್ರಿಕೆಗಳು, ಬೆಂಗಳೂರು, ಕರ್ನಾಟಕ ಪತ್ರಿಕಾ ಅಕಾಡೆಮಿ, ೧೯೯೦

೬. ಗೋಪಿಂದರಾಜು ಸಿ.ಆರ್., ಕರ್ನಾಟಕ ಏಕೀಕರಣ ಮತ್ತು ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫

೭. ಗೋಪಿಂದರಾಜು ಸಿ.ಆರ್., ಕನ್ನಡ ಕರ್ನಾಟಕತ್ವ (ಆಲೂರು ವೆಂಕಟರಾಯರ ಚಿಂತನೆಗಳು) ಪ್ರಸಾರಾಂಗ, ಕ.ವಿ.ವಿ, ಹಂಪಿ, ೧೯೯೫

೮. ಗೋಪಾಲ್‌ರಾವ್. ಎಚ್.ಎಸ್., ಕರ್ನಾಟಕ ಏಕೀಕರಣದ ಇತಿಹಾಸ, ನವಕರ್ನಾಟಕ, ಬೆಂಗಳೂರು, ೧೯೯೬

೯. ಚೆನ್ನಬಸವನಗೌಡ, ನಾನೊಬ್ಬ ಸಾರ್ವಜನಿಕ, ಕನ್ನಡ ಸಾಹಿತ್ಯ ಪರಿಷತ್ತು, ಬಳ್ಳಾರಿ ಜಿಲ್ಲಾ ಸಮಿತಿ, ೧೯೯೪

೧೦. ಚಂದ್ರಶೇಖರ್.ಎಸ್., ಏಕೀಕರಣದ ಒಂದು ಕಥನ, ಬೆಂಗಳೂರು ೨೦೦೫

೧೧. ಚಂದ್ರಶೇಖರಯ್ಯ ಬಿ.ಎಂ. ಕೂಡ್ಲಿಗಿ ತಾಲೂಕು ದರ್ಶನ, ೧೯೯೮

೧೨. ಚಿನ್ನಸ್ವಾಮಿ ಸೋಸಲೆ. ಎನ್. ಕರ್ನಾಟಕ ರಾಜಕೀಯ ಚರಿತ್ರೆ ಮತ್ತು ಸಾಹಿತ್ಯ, ಬೆಂಗಳೂರು, ೨೦೦೧

೧೩. ಚಿನ್ನಸ್ವಾಮಿ ಸೋಸಲೆ.ಎನ್. ಗಡಿ ಚಳವಳಿಗಳು, ಪ್ರಸಾರಾಂಗ, ಕ.ವಿ.ವಿ. ಹಂಪಿ, ೨೦೦೧

೧೪. ಚಂದ್ರಶೇಖರಯ್ಯ ಬಿ.ಎಂ., ಕರ್ನಾಟಕದ ಸಾಂಸ್ಕೃತಿಕ ಇತಿಹಾಸ ಪರಂಪರೆ, ಸಿ.ವಿ.ಜಿ. ಪಬ್ಲಿಕೇಷನ್, ಬೆಂಗಳೂರು, ೨೦೦೫

೧೫. ಚಂದ್ರಶೇಖರ ಎಸ್., (ಸಂ), ಕರ್ನಾಟಕ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮

೧೬. ದಿವಾಕರ್ ರಂ.ರಾ., ಕರ್ನಾಟಕ ಏಕೀಕರಣದ ಕಥೆ, ಹುಬ್ಬಳ್ಳಿ, ೧೯೫೬

೧೭. ಪಾಟೀಲ್ ಪುಟ್ಟಪ್ಪ, ಕರ್ನಾಟಕದ ಕಥೆ, ಬೆಂಗಳೂರು, ೨೦೦೩

೧೮. ಪಾಟೀಲ್ ಕಲ್ಲನಗೌಡ, ಕರ್ನಾಟಕದ ಏಕೀಕರಣದ ಆದಿಯಲ್ಲಿ, ಹುಬ್ಬಳ್ಳಿ ೧೯೮೬

೧೯. ಪಾಟೀಲ್ ಎಚ್.ಎಸ್, (ಸಂ), ವಿಮೋಚನೆ: ಕೊಪ್ಪಳ ಜಿಲ್ಲೆಯ ಹೈದರಾಬಾದ್ ವಿಮೋಚನಾ ಹೋರಾಟದ ಕಥೆ, ಜಿಲ್ಲಾ ಆಡಳಿತ, ಕೊಪ್ಪಳ, ೧೯೯೯

೨೦. ಮಹಾಬಲೇಶ್ವರ ಬಿ.ಸಿ., ಹೈದಾರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳುವಳಿಗಳು, ಪ್ರಸರಾಂಗ ಗುಲ್ಬರ್ಗಾ, ೧೯೯೭

೨೧. ಮರೀಯಪ್ಪ ಇ. ಡಿ., (ಸಂ.), ಅಮೃತ ಮಹೋತ್ಸವ ಸ್ಮರಣ ಸಂಚಿಕೆ, ಬಳ್ಳಾರಿ, ೧೯೯೦

೨೨. ರಾಮು.ಕೆ., ಕರ್ನಾಟಕ ಏಕೀಕರಣ, ಮೈಸೂರು, ೧೯೯೭

೨೩. ರವೀಂದ್ರನಾಥ್.ಕೆ., ಬಳ್ಳಾರಿ ಜಿಲ್ಲಾ ದರ್ಶನ, ಗುಲ್ಬರ್ಗಾ ಪ್ರಸಾರಾಂಗ, ೨೦೦೫,

೨೪. ರಾಮಕೃಷ್ಣ ಜಿ., ಸ್ವಾತಂತ್ರ್ಯೋತ್ತರ ಭಾರತ ಅವಲೋಕನ, ೧೯೪೭–೧೯೯೭.

೨೫. ಲಕ್ಷ್ಮಣ್ ತೆಲಗಾವಿ, (ಸಂ.), ಚರಿತ್ರೆ ಅಧ್ಯಯನದ ಸಂಪುಟ ೧, ಸಂಚಿಕೆ–೨, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೨೬. ವಿಜಯ ಪೂಣಚ್ಚ. ಟಿ. ಪಿ. (ಪ್ರ. ಸಂ.), ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ–೪, ಚರಿತ್ರೆ ; ೨೦೦೧ ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೭. ವೆಲ್ ಕಮ್ ಟು ಬಳ್ಳಾರಿ, ಪೂರ್ಣಿಮ ಅಡ್ವರ್‌ಟೈಸಿಂಗ್, ಬೆಂಗಳೂರು, ೧೯೫೩.

೨೮. ಶ್ರೀನಿವಾಸ ಹಾವನೂರು, ಹೊಸಗನ್ನಡದ ಅರುಣೋದಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦

೨೯. ಶರಬಯ್ಯ. ಎಮ್., ಬಳ್ಳಾರಿ ಜಿಲ್ಲೆಯ ಗಣ್ಯ ಮಾನ್ಯರು ಅರುಣೋದಯ ಪ್ರಕಾಶನ, ಬಳ್ಳಾರಿ, ೧೯೯೮

೩೦. ಶೇಷಾದ್ರಿ. ಬಿ. ಚಂದ್ರಶೇಖರ್ ಟಿ.ಆರ್ (ಸಂ.), ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ, ಕ.ವಿ.ಹಂ., ಪ್ರಸಾರಾಂಗ, ೧೯೯೮.

೩೧. ಸೂರ್ಯನಾಥ್‌ಯು ಕಾಮಂತ್, ಇಸ್ಟೋಗ್ರಫಿ ಆಫ್ ಕರ್ನಾಟಕ, ದಿ ಮಿಥಿಕ್ ಸೊಸೈಟಿ, ಬೆಂಗಳೂರು, ೧೯೯೧

೩೨. ಶ್ರೀ ಸೂರ್ಯನಾಥ್ ಕಾಮಂತ್, ಬಳ್ಳಾರಿ ಜಿಲ್ಲಾ ಗೈಜಿಟಿಯರ್, ಕರ್ನಾಟಕ ಸರ್ಕಾರ, ೧೯೭೬

೩೩. ಸ್ವಾಮಿ ತಾಡಕಲ. ಆರ್.ಎಸ್., ಹಿಪ್ಪರ್ಗಿ ಹಿರೆಕೋಳಿ, ಎಸ್.ಎಂ.,(ಸಂ) ಭಾರತ ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಸಾವಿತ್ರಿ, ಆಳಂದ, ತಾ. ಗುಲ್ಬರ್ಗಾ, ೧೯೯೭

ಪತ್ರಿಕೆಗಳು :

೧. ಕನ್ನಡ ನುಡಿ

೨. ಕರ್ನಾಟಕ ಬಂಧು

೩. ಪ್ರಜಾಬಂಧು

೪. ಕರ್ನಾಟಕ ಕೇಸರಿ

೫. ನವಸಂದೇಶ

೬. ನವಭಾರತ

೭. ರೈತ

೮. ಸುಖಾಶ್ರಯ ಪ್ರಭೋದ

೯. ಭಾರತೀಯ ಸಿದ್ಧಾಂತ

೧೦. ಸ್ವತಂತ್ರ

ನಿಯತಕಾಲಿಕೆಗಳು:


೧. ಹೊಸತು.

೨. ಅಮೃತ ಮಹೋತ್ಸವ ವೀರಶೈವ ಸಂಘ ಸ್ಮರಣ ಸಂಚಿಕೆ, ೧೯೯೦.

೩. ಸಿದ್ಧಗಂಗಾ ಮಾಸಪತ್ರಿಕೆ, ತುಮಕೂರು

೪. ಸ್ವಪ್ನ ಲೋಕ, ಮಾಸ ಪತ್ರಿಕೆ, ಬೆಂಗಳೂರು


ಛಾಯಾಚಿತ್ರಗಳು




ಕರ್ನಾಟಕ ಏಕೀಕರಣದಲ್ಲಿ ಹುತಾತ್ಮರಾದ

ಕನ್ನಡಿಗ ದಿ|| ಪಿ.ರಂಜಾನ್ ಸಾಬ್


ಬಳ್ಳಾರಿ.




ಶ್ರೀ ಅಳವಂಡಿ ಶಿವಮೂರ್ತಿ ಸ್ವಾಮಿ,
ಅಳವಂಡಿ ಕೊಪ್ಪಳ ತಾ॥




ಶ್ರೀ ಮಹಾದೇವಪ್ಪ ಪಟ್ಟಣ, ಬಳ್ಳಾರಿ.




ಡಾ. ಅ. ನಂಜಪ್ಪ, ಕೊಟ್ಟೂರು, ಬಳ್ಳಾರಿ ಜಿ॥




ಶ್ರೀ ಮುದೇನೂರು ಸಂಗಣ್ಣ,
ಹರಪನಹಳ್ಳಿ ತಾ॥, ದಾವಣಗೆರೆ ಜಿ॥




ಶ್ರೀ ಎಂ.ಎಂ.ಜೆ. ಸದ್ಯೋಜಾತ, ಕೊಟ್ಟೂರು, ಬಳ್ಳಾರಿ ಜಿ॥




ಶ್ರೀ ಸಿ.ಎಂ.ರೇವಣಸಿದ್ದಯ್ಯ, ಸಿರಿಗೇರಿ, ಸಿರುಗುಪ್ಪ ತಾ॥




ಡಾ. ಎ.ಎಂ. ರಾಜಶೇಖರಯ್ಯ, ದಾವಣಗೆರೆ ಜಿ||




ಶ್ರೀ ಐ.ಬಸವರಾಜ, ಕುರುಗೋಡು, ಬಳ್ಳಾರಿ ಜಿ||




ಶ್ರೀ ವೈ. ಹನುಮನಗೌಡ ಕಾರೆಕಲ್ಲು, ಕಾರೆಕಲ್ಲು, ಬಳ್ಳಾರಿ ಜಿ।




ಶ್ರೀ ಬಿ.ಎಸ್. ವೀರಭದ್ರಪ್ಪ, ಕೂಡ್ಲಿಗಿ, ಬಳ್ಳಾರಿ ಜಿ।।




ಶ್ರೀ ಕೆ. ಶಾಂತಪ್ಪ, ಗೆಣಿಕೆಹಾಳು, ಬಳ್ಳಾರಿ ತಾ||




ಶ್ರೀ ಹಳ್ಳಿ ವೀರಭದ್ರಪ್ಪ, ಕೊಟ್ಟೂರು, ಬಳ್ಳಾರಿ ಜಿ||




ಶ್ರೀ ಕೆ. ಮರೆಗೌಡ, ಗೆಣಿಕೆಹಾಳು, ಬಳ್ಳಾರಿ ಜಿ॥




ಶ್ರೀ ನಾಡಗೌಡರ ಅಮರೆಗೌಡ, ಕುರುಗೋಡು,
ಬಳ್ಳಾರಿ ಜಿ॥




ಶ್ರೀ ಕರಣಂ ಗುಂಡುರಾವ್, ಎಮ್ಮಿಗನೂರು, ಬಳ್ಳಾರಿ ತಾ||




ಶ್ರೀ ಕಲ್ಲೂರ ಹೊನ್ನನಗೌಡ, ಚೆಳ್ಳಗುರ್ಕಿ, ಬಳ್ಳಾರಿ ತಾ||




ಶ್ರೀ ಪಾಂಡುರಂಗ ಶೆಟ್ಟಿ, ಕುರುಗೋಡು, ಬಳ್ಳಾರಿ ಜಿ॥




ಶ್ರೀ ಸೂರಶೆಟ್ಟಿ ಶಿವರುದ್ರಪ್ಪ, ಬಳ್ಳಾರಿ ಜಿ॥




ಶ್ರೀ ಮೇದಾರ ಬರಮಪ್ಪ ಮಲ್ಲಪ್ಪ, ಬಳ್ಳಾರಿ ಜಿ॥



ಶ್ರೀ ಬೀರ್ರ ಈಶ್ವರಪ್ಪ, ಕುರುಗೋಡು, ಬಳ್ಳಾರಿ ಜಿ॥




ಶ್ರೀ ಕೋಳೂರು ಚಂದ್ರಶೇಖರಗೌಡ,
ಕೋಳೂರು, ಬಳ್ಳಾರಿ ತಾ॥




ಶ್ರೀ ಎನ್. ಪರ್ವತಗೌಡ, ಯರ್ರಂಗಳಿ, ಬಳ್ಳಾರಿ ತಾ॥




ಶ್ರೀ ನಾಯಕರ ಲಕ್ಷ್ಮಣ, ಕುರುಗೋಡು, ಬಳ್ಳಾರಿ ತಾ||



ಶ್ರೀ ಜೀರ್ರ ಎರ್ರೆಪ್ಪ, ಚೆಳ್ಳಗುರ್ಕಿ, ಬಳ್ಳಾರಿ ತಾ||




ಶ್ರೀ ಬಿ. ತಾರಾನಾಥ ರೆಡ್ಡಿ, ಎಮ್ಮಿಗನೂರು, ಬಳ್ಳಾರಿ ತಾ॥




ಶ್ರೀ ಬಿ.ಪಂಪನಗೌಡ, ಸಿರಿಗೇರಿ, ಸಿರುಗುಪ್ಪ ತಾ॥



ಶ್ರೀಪುರ್ರಣ್ಣ, ಕುರುಗೋಡು, ಬಳ್ಳಾರಿ ತಾ||




ಶ್ರೀ ಬಿ.ಕೆ.ನಾಯಕ್, ಹೊಸಪೇಟೆ, ಬಳ್ಳಾರಿ ಜಿ||




ಶ್ರೀ ಹೆಚ್.ಜಿ.ಕರಿಬಸವನಗೌಡ, ಚೆಳ್ಳಗುರ್ಕಿ, ಬಳ್ಳಾರಿ ಜಿ॥




ಶ್ರೀ ಅಬ್ದುಲ್ ರಜಾಕ್ ಸಾಬ್, ಬಳ್ಳಾರಿ.




ಶ್ರೀ ಕೊಣಂ ಚನ್ನಬಸಪ್ಪ, ಬೆಂಗಳೂರು.



ಶ್ರೀ ಡಬ್ಲ್ಯು. ಮಲ್ಲನಗೌಡ, ಚೆಳ್ಳಗುರ್ಕಿ, ಬಳ್ಳಾರಿ ಜಿ||




ಶ್ರೀ ಕೂನಾ ಸಿದ್ದಪ್ಪ, ಕುರುಗೋಡು, ಬಳ್ಳಾರಿ ಜಿ॥



ಶ್ರೀ ಎಂ.ಶಿವಪ್ಪ ಮೇಟಿ, ಚೆಳ್ಳಗುರ್ಕಿ, ಬಳ್ಳಾರಿ ಜಿ॥



ಶ್ರೀ ವೈ.ಮಹಾಬಲೇಶ್ವರಪ್ಪ, ಬಳ್ಳಾರಿ.



ಶ್ರೀ ಹಿರೇಹಾಳು ಇಬ್ರಾಹಿಂ ಸಾಬ್, ಹಿರೇಹಾಳು,
ರಾಯದುರ್ಗ ತಾ||, ಅನಂತಪುರ ಜಿ||, ಆಂಧ್ರ ಪ್ರದೇಶ.

AKSHARA GRANTHALAYA
ACC.NO. 130106